ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 11 ಬುಧವಾರ 2026

ಸಂಪುಟ: 46 | ಸಂಚಿಕೆ: 293 | ಪುಟಗಳು: 12

₹4


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*



ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.10–ಬೋಗಾದಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ಫೆ.11ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಜನತಾನಗರ, ಬೋಗಾದಿ 2ನೇ ಹಂತ ಉತ್ತರ & ದಕ್ಷಿಣ, ಗಂಗೋತ್ರಿ ಕ್ಯಾಂಪಸ್, ಗಂಗೋತ್ರಿ ಕ್ವಾಟ್ರಸ್, ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ, ರೂಪಾನಗರ, ದೀಪಾನಗರ, ಬೋಗಾದಿ ಗ್ರಾಮ, ಪ್ರೀತಿ ಲೇಔಟ್, ಆರ್.ಎಂ.ಪಿ ಲೇಔಟ್, ವಿಜಯನಗರ 3ನೇ ಹಂತ, ಹಿನಕಲ್, ವಿಜಯನಗರ 4ನೇ ಹಂತ, ವಿಜಯಶ್ರೀಪುರ, ಸುಧಾ ಲೇಔಟ್, ರೈಲ್ವೆ ಲೇಔಟ್, ಎಸ್‌ಬಿಎಂ ಲೇಔಟ್, ವಾಗ್ದೇವಿ ನಗರ, ಸಿಎಫ್‌ಟಿಆರ್‌ಐ ಲೇಔಟ್, ಯುನಿವರ್ಸಿಟಿ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.



ವಿ.ವಿ.ಮೊಹಲ್ಲಾ ಉಪವಿಭಾಗ: ಫೆ.11ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಹೆಬ್ಬಾಳು ವಿದ್ಯುತ್ ಮಾರ್ಗದ ಪ್ರದೇಶಗಳಾದ ಹೆಬ್ಬಾಳು ಮುಖ್ಯ ರಸ್ತೆ, ಹೆಬ್ಬಾಳ್ ಕಾಲೋನಿ, ಸುಬ್ರಮಣ್ಯನಗರ, ಲೋಕನಾಯಕ ನಗರ, ಬಸವನಗುಡಿ ಪಾರ್ಕ್ ಸುತ್ತಮುತ್ತ, ನಿಂಗಯ್ಯನಕೆರೆ ಹಾಗೂ ಸುತ್ತಮುತ್ತ. ಚಂದ್ರಮೌಳೇಶ್ವರ ವಿದ್ಯುತ್ ಮಾರ್ಗದ ಪ್ರದೇಶಗಳಾದ ವಿ.ವಿ ಮೊಹಲ್ಲಾ 5ನೇ ಮೇನ್, ಎಸ್.ಬಿ.ಐ ಬ್ಯಾಂಕ್, ದೇವಸ್ಥಾನ ರಸ್ತೆ, ಅಂಡಾಳ್ ಮಂದಿರ, ಒಂಟಿಕೊಪ್ಪಲು, ಕುವೆಂಪು ಕಟ್ಟೆ, ವಾಲ್ಮೀಕಿ ರಸ್ತೆ, ವಿ.ವಿ ಮೊಹಲ್ಲಾ 2ನೇ ಮತ್ತು 3ನೇ ಮೇನ್ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಗಣಪತಿ ಸಚ್ಚಿದಾನಂದ ಶ್ರೀಗಳ ನೇತೃತ್ವದಲ್ಲಿ ಫೆ.14ರಂದು ಮೈಸೂರಲ್ಲಿ 'ಸಾಮೂಹಿಕ ಹನುಮಾನ್ ಚಾಲೀಸಾ' ಪಾರಾಯಣ ಮಹಾ ಯಜ್ಞ

● ಮಹಾರಾಜ ಕಾಲೇಜಲ್ಲಿ ಸಾವಿರಾರು ಜನರಿಂದ ಪಾರಾಯಣ ● ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಂದ ಮಾಹಿತಿ

ಮೈಸೂರು,ಫೆ.10(ಎಂಟಿವೈ)– ಲೋಕ ಕಲ್ಯಾಣಾರ್ಥವಾಗಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಫೆ14ರಂದು ಬೆಳಗ್ಗೆ 9 ಗಂಟೆಯಿಂದಲೇ 'ಸಾಮೂಹಿಕ ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕ ಕಲ್ಯಾಣ ಹಾಗೂ ಸರ್ವಜನರಿಗೂ ಒಳಿತಾಗಲೆಂದು ಪ್ರಾರ್ಥಿಸಿ ಮೈಸೂರಿನ ಅವಧೂತ ದತ್ತಪೀಠದ ವತಿಯಿಂದ ಸಾಮೂಹಿಕ ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞ ಹಮ್ಮಿಕೊಳ್ಳಲಾಗಿದೆ. ಕಳೆದ ವರ್ಷ ತೆನಾಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ 2 ಲಕ್ಷಕ್ಕೂ ಅಧಿಕ ಭಕ್ತರು ಪಾಲ್ಗೊಂಡು ವಿಶ್ವದಾಖಲೆ ನಿರ್ಮಿಸಿದ್ದರು.

ಈ ವರ್ಷ ಶಿವರಾತ್ರಿ ಹಬ್ಬದ ಮುನ್ನಾದಿನವೇ ಮೈಸೂರಲ್ಲಿ ಸಾಮೂಹಿಕ ಪಾರಾಯಣ ಕಾರ್ಯಕ್ರಮ ನಡೆಸಲಾಗುತ್ತಿದೆ. ಕಾರ್ಯಕ್ರಮಕ್ಕಾಗಿ 170X800 ಅಡಿ ವಿಸ್ತೀರ್ಣದ ಪೆಂಡಾಲ್ ಹಾಕಿಸಲಾಗುತ್ತಿದೆ. 30 ಸಾವಿರ ಭಕ್ತರಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, 45 ಸಾವಿರ ಭಕ್ತರಿಗೆ ಪ್ರಸಾದ ವಿತರಿಸುವ ಯೋಜನೆ ರೂಪಿಸಲಾಗಿದೆ. ಭಕ್ತರಿಗೆ ಹನುಮಾನ್ ಚಾಲೀಸಾ ಪಠಿಸಲು ಪಾಂಪ್ಲೆಟ್ ನೀಡಲಾಗುತ್ತದೆ. ಚಿಕ್ಕವರಿಂದ ಹಿರಿಯ ನಾಗರಿಕರವರೆಗೂ ಎಲ್ಲರೂ ಪಾಲ್ಗೊಂಡು ಸುಲಭ ಹಾಗೂ ಶಕ್ತಿಶಾಲಿ ಸ್ತೋತ್ರವನ್ನು ಪಠಿಸಬಹುದಾಗಿದೆ. ಹನುಮಂತನು ರಕ್ಷಕನಾಗಿದ್ದು, ಕಷ್ಟದ ಸಮಯದಲ್ಲಿ ನಮ್ಮನ್ನು ಕಾಪಾಡುತ್ತಾನೆ. ಲೋಕ ಕಲ್ಯಾಣಕ್ಕಾಗಿ ಮತ್ತು ಜಗತ್ತಿನ ಒಳಿತಿಗಾಗಿ ಈ ಸಾಮೂಹಿಕ ಪ್ರಾರ್ಥನೆಯನ್ನು ಆಯೋಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಭಕ್ತರು ಈ ಸಾಮೂಹಿಕ ಹನುಮಾನ್ ಚಾಲೀಸ್ ಪಾರಾಯಣ ಮಹಾಯಜ್ಞದಲ್ಲಿ ಪಾಲ್ಗೊಂಡು ದೈವ ಕೃಪೆಗೆ ಪಾತ್ರರಾಗುವಂತೆ ಸಲಹೆ ನೀಡಿದರು.



ಮೈಸೂರಿನ ಅವಧೂತ ದತ್ತಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಫೆ.14ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞದ ಪೋಸ್ಟರ್ ಬಿಡುಗಡೆ ಮಾಡಿದರು.

ಸಾಮೂಹಿಕ ಪ್ರಾರ್ಥನೆಯ ಶಕ್ತಿ: ಒಬ್ಬರೇ ಪ್ರಾರ್ಥಿಸುವುದಕ್ಕಿಂತ ಸಾಮೂಹಿಕವಾಗಿ ಪ್ರಾರ್ಥಿಸುವುದರಲ್ಲಿ ಅಪಾರ ಶಕ್ತಿಯಿದೆ. ಪುರಾಣಗಳ ಪ್ರಕಾರ, ರಾಮಾವತಾರಕ್ಕೆ ಮುನ್ನ 33 ಕೋಟಿ ದೇವತೆಗಳು ಒಗ್ಗೂಡಿ ಪ್ರಾರ್ಥಿಸಿದಾಗ ಭಗವಂತನು ಪ್ರತ್ಯಕ್ಷನಾಗಿ ರಾವಣ ಸಂಹಾರದ ಭರವಸೆ ನೀಡಿದ್ದನು. ಲಕ್ಷಾಂತರ ಜನರು ಒಟ್ಟಾಗಿ ಸೇರಿ ಹನುಮಾನ್ ಚಾಲೀಸಾ ಪಾರಾಯಣ ಮಾಡಿದಾಗ ಪ್ರತಿಯೊಬ್ಬರಿಗೂ ಆ ಸಂಪೂರ್ಣ ಪಾರಾಯಣದ ಪುಣ್ಯ ಲಭಿಸುತ್ತದೆ ಎಂದು ತಿಳಿಸಿದರು.

ಕರ್ನಾಟಕಕ್ಕೂ ಹನುಮ, ಶ್ರೀರಾಮನಿಗೂ ನಂಟಿದೆ. ಈ ಹಿಂದೆ ಕರ್ನಾಟಕವನ್ನು ಹನುಮನ ನಾಡು ಎನ್ನುತ್ತಿದ್ದರು.ಇದರಿಂದ ಈ ಬಾರಿ ಮೈಸೂರಲ್ಲಿ ಹನುಮಾನ್ ಚಾಲೀಸಾ ಪಾರಾಯಣ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಭಕ್ತರೊಂದಿಗೆ ನಾನೂ ಹಾಡುತ್ತೇನೆ. ಹನುಮಂತನ ರಕ್ಷೆ ಎಲ್ಲರಿಗೂ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಸಾಮೂಹಿಕವಾಗಿ ಎಲ್ಲರೂ ಸೇರಿದಾಗ, ಒಬ್ಬೊಬ್ಬರ ಪ್ರಾರ್ಥನೆಯ ಫಲವೂ ಎಲ್ಲರಿಗೂ ದೊರೆಯುತ್ತದೆ. ಇದುವೇ ಸಾಮೂಹಿಕ ಪ್ರಾರ್ಥನೆಯ ವಿಶೇಷ ಎಂದರು.

ಫೆ.14ರ ದಿನದಂದೇ ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞಕ್ಕೆ ಏಕೆ ಆದ್ಯತೆ ನೀಡಿದ್ದೇವೆ ಎಂದರೆ ಆ ದಿನ ಸೀತಾರಾಮರು ಒಂದಾದ ದಿನ. ಕೆಲವರು ಆ ದಿನವನ್ನು ವ್ಯಾಲೆಂಟೈನ್ಸ್ ಡೇ ಎನ್ನುತ್ತಾರೆ. ಆದರೆ, ಅದು ಸೀತಾ–ರಾಮರು ಸೇರಿದ ದಿನವಾಗಿ ವಿಶೇಷತೆ ಪಡೆದಿದೆ. ಹಾಗಾಗಿ ಆ ದಿನವನ್ನು ಆಯ್ಕೆ ಮಾಡಲಾಗಿದೆ. ವಿವಿಧ ಸಂಘ ಸಂಸ್ಥೆಗಳು ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞಕ್ಕೆ ನೆರವು ನೀಡುತ್ತಿವೆ ಎಂದರು.

ಕಾಶಿಗೆ ಹೋದವರೆಲ್ಲಾ ಹನುಮಾನ್ ಚಾಲೀಸಾ ಪಠಿಸುತ್ತಾರೆ. ತುಳಸಿದಾಸರು ಅಲ್ಲಿಯೇ ಹನುಮಾನ್ ಚಾಲೀಸಾ ಬರೆದರು. ಚೀನಾ, ಮಲೇಷಿಯಾ, ಥೈಲ್ಯಾಂಡ್ ಸೇರಿದಂತೆ ವಿವಿಧ ದೇಶಗಳಲ್ಲೂ ಹನುಮಾನ್ ಚಾಲೀಸಾ ಪಾರಾಯಣ ಮಾಡುತ್ತಿದ್ದಾರೆ. ದತ್ತಪೀಠದ ವತಿಯಿಂದ ವಿಶಾಖಪಟ್ಟಣದಲ್ಲಿ 130 ಅಡಿ ಎತ್ತರದ ಹನುಮನ ವಿಗ್ರಹ ಪ್ರತಿಷ್ಠಾಪಿಸಲಾಗುತ್ತಿದೆ. ಇದುವರೆಗೆ ವಿವಿಧೆಡೆ 43 ಹನುಮನ ಆಲಯ ಸ್ಥಾಪಿಸಲಾಗಿದೆ. ಹನುಮ ಮುಂದಿನ ಬ್ರಹ್ಮ, ಶಿವ ಹಾಗೂ ವಿಷ್ಣು ಸ್ವರೂಪಿಯೂ ಆಗಿರುವುದರಿಂದ ದತ್ತಪೀಠವು ಹನುಮನ ಆರಾಧನೆಯಲ್ಲಿ ತೊಡಗಿದೆ. ಶಿವ (ಉಸಿರು) ನಿಂತರೆ ಶವವಾಗುತ್ತದೆ. ಹನುಮ ನಾವು ಉಸಿರಾಡುವ ಗಾಳಿ ಇದ್ದಂತೆ. ಪ್ರಾಣಾಯಾಮ ಮಾಡಿದರೆ ಪ್ರಾಣ ಗಟ್ಟಿಯಾಗುತ್ತದೆ ಎಂದರಲ್ಲದೆ, ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ಸಾಮೂಹಿಕ ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞದಲ್ಲಿ ಸಂಜೆ ದಿವ್ಯನಾಮ ಸಂಕೇತ ಕಾರ್ಯಕ್ರಮದಲ್ಲಿ ಕನ್ನಡದಲ್ಲಿ ಹನುಮಾನ್ ಚಾಲೀಸ್ ಪಾರಾಯಣ ಮಾಡುವುದಾಗಿ ತಿಳಿಸಿದರು.

ರಾಜ್ಯ ಸರ್ಕಾರಿ ರೇಡಿಯಾಲಜಿ ಇಮೇಜಿಂಗ್ ಅಧಿಕಾರಿಗಳ ಸಂಘದ ಸರ್ವ ಸದಸ್ಯರ ಸಭೆ




ಕರ್ನಾಟಕ ರಾಜ್ಯ ಸರ್ಕಾರಿ ರೇಡಿಯಾಲಜಿ ಇಮೇಜಿಂಗ್ ಅಧಿಕಾರಿಗಳ ಸಂಘದ ವತಿಯಿಂದ ಸರ್ವ ಸದಸ್ಯರ ಸಾಮಾನ್ಯ ಸಭೆ ನಡೆಯಿತು.

ಮೈಸೂರು, ಫೆ.10–ಕರ್ನಾಟಕ ರಾಜ್ಯ ಸರ್ಕಾರಿ ರೇಡಿಯಾಲಜಿ ಇಮೇಜಿಂಗ್ ಅಧಿಕಾರಿಗಳ ಸಂಘದ ವತಿಯಿಂದ ಖಾಸಗಿ ಹೋಟೆಲ್‌ನಲ್ಲಿ ಸರ್ವ ಸದಸ್ಯರ ಸಾಮಾನ್ಯ ಸಭೆ ಹಾಗೂ ಹಳೇ ಬೇರು ಹೊಸ ಚಿಗುರು ಕಾರ್ಯಕ್ರಮ ನಡೆಯಿತು. ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಅಶೋಕ್ ಸೋಮಪ್ಪ ವಾಲ್ಮೀಕಿ, ಜಿಲ್ಲಾಧ್ಯಕ್ಷೆ ಎಂ.ಎನ್.ಚಂದ್ರಕಲಾ, ಗೌರವಾಧ್ಯಕ್ಷ ರಾಮು ಹೂಳ್ಳೆಪ್ಪ, ಕಾರ್ಯದರ್ಶಿ ಕ್ರಿಸಸ್, ಕೋಶಾಧ್ಯಕ್ಷ ಪ್ರಮೋದ್ ಹಿರೇಮಠ, ಕಾರ್ಯಾಧ್ಯಕ್ಷ ಗಜೇಂದ್ರ ಗಂಗಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ರವಿ, ಉಪಾಧ್ಯಕ್ಷ ನಾಗರಾಜು, ವಿಭಾಗೀಯ ಉಪಾಧ್ಯಕ್ಷ ಪುಟ್ಟರಾಜು, ಮೈಸೂರು ಜಿಲ್ಲಾ ಕಾರ್ಯಾಧ್ಯಕ್ಷ ಸಂದೀಪ್ ಕದಂ, ಖಜಾಂಚಿ ವೀಣಾ, ಕಾರ್ಯದರ್ಶಿ ಸಂತೋಷ್, ವೈಜ್ಞಾನಿಕ ಕಾರ್ಯದರ್ಶಿ ಪದ್ಮಶ್ರೀ ಮತ್ತಿತರರಿದ್ದರು.

ರಾಷ್ಟ್ರೀಯ ಅಥ್ಲೆಟಿಕ್ ಚಾಂಪಿಯನ್‌ಶಿಪ್ ಹಿರಿಯ ವಿಭಾಗದಲ್ಲಿ ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ ಅಸೋಸಿಯೇಷನ್‌ಗೆ 21 ಪದಕ

ಮೈಸೂರು, ಫೆ.10(ಎಸ್‌ಪಿಎನ್)– ಕೇರಳದ ತಿರುವನಂತಪುರದಲ್ಲಿ ಜ.28ರಿಂದ ಫೆ.1ರವರೆಗೆ ನಡೆದ 46ನೇ ರಾಷ್ಟ್ರೀಯ ಅಥ್ಲೆಟಿಕ್ ಚಾಂಪಿಯನ್ ಶಿಪ್ ಹಿರಿಯರ ವಿಭಾಗದಲ್ಲಿ ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಸದಸ್ಯರು ಕರ್ನಾಟಕವನ್ನು ಪ್ರತಿನಿಧಿಸಿ 21 ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕವನ್ನು ಗೆದ್ದು ಮೈಸೂರಿಗೆ ಕೀರ್ತಿ ತಂದಿದ್ದಾರೆ.



ಮಹಿಳಾ ವಿಭಾಗದಲ್ಲಿ 75 ವರ್ಷದ ಎಚ್.ಎಂ.ಭಾರತಿ ಅವರು ಶಾಟ್‌ಪುಟ್ ಸ್ಪರ್ಧೆಯಲ್ಲಿ (ಪ್ರ), ಹ್ಯಾಮರ್ ಥ್ರೋ (ದ್ವಿ), ಡಿಸ್ಕಸ್ ಥ್ರೋ (ತೃ) ಸ್ಥಾನ ಪಡೆದಿದ್ದಾರೆ. 70 ವರ್ಷದ ವಿಜಯ ರಮೇಶ್ ಅವರು ಲಾಂಗ್ ಜಂಪ್ (ತೃ), ಎಂ.ಮಂಜಮ್ಮ ಅವರು 4x100 ಮೀಟರ್ ರಿಲೆಯಲ್ಲಿ ಭಾಗವಹಿಸಿ (ಪ್ರ), ಡಿಸ್ಕಸ್ ಥ್ರೋನಲ್ಲಿ (ತೃ), 100 ಮೀಟರ್ ರಿಲೆಯಲ್ಲಿ ಭಾಗವಹಿಸಿ (ತೃ) ಸ್ಥಾನ ಪಡೆದಿದ್ದಾರೆ. 65 ವರ್ಷದ ಬಿ.ಸಿ.ಪಾರ್ವತಿ ಅವರು 5 ಸಾವಿರ ಮೀಟರ್ ಓಟದಲ್ಲಿ (ದ್ವಿ), 5 ಸಾವಿರ ಮೀಟರ್ ನಡಿಗೆ ಸ್ಪರ್ಧೆಯಲ್ಲಿ (ದ್ವಿ), 400 ಮೀಟರ್ ಓಟ ಸ್ಪರ್ಧೆಯಲ್ಲಿ (ತೃ) ಸ್ಥಾನ ಪಡೆದಿದ್ದಾರೆ. 55 ವರ್ಷದ ಕೆ.ಎ.ಭಾಗೀರಥಿ 200 ಮೀಟರ್ಸ್ ಓಟದಲ್ಲಿ (ಪ್ರ),100 ಮೀಟರ್ ಓಟದಲ್ಲಿ (ತೃ), 40 ವರ್ಷದ ಶರ್ಮಿಳಾ ಅರಸ್ ಹ್ಯಾಮರ್ ಥ್ರೋನಲ್ಲಿ ಭಾಗವಹಿಸಿ (ದ್ವಿ) ಸ್ಥಾನ ಪಡೆದಿದ್ದಾರೆ.

ಪುರುಷರ ವಿಭಾಗದಲ್ಲಿ 75 ವರ್ಷದ ಸಿ.ಬಿ. ಚೆಲುವೇಗೌಡ ಅವರು ಭಾಗವಹಿಸಿ ಶಾಟ್‌ಪುಟ್‌ನಲ್ಲಿ (ಪ್ರ), ಹ್ಯಾಮರ್ ಥ್ರೋನಲ್ಲಿ (ದ್ವಿ), 70 ವರ್ಷದ ಎಸ್.ಮಹದೇವು ಅವರು 4x100 ರಿಲೆ ಹಾಗೂ 4x400 ಮಾಸ್ಟರ್ಸ್ ರಿಲೆಯಲ್ಲಿ ಭಾಗವಹಿಸಿ (ದ್ವಿ), 70 ವರ್ಷದ ಜಿ.ಶ್ರೀನಿವಾಸಯ್ಯ ಅವರು 4x400 ರಿಲೆ ಓಟದಲ್ಲಿ (ದ್ವಿ) ಸ್ಥಾನ ಪಡೆದಿದ್ದಾರೆ. 60 ವರ್ಷದ ಎಂ.ಯೋಗೇಂದ್ರ 2 ಸಾವಿರ ಮಾಸ್ಟರ್ಸ್ ಸ್ಟೀಪಲ್ ಚೆಸ್‌ನಲ್ಲಿ (ತೃ), 4x400 ರಿಲೆ ರೇಸ್‌ನಲ್ಲಿ (ತೃ)ಸ್ಥಾನ ಪಡೆದಿದ್ದಾರೆ. 55 ವರ್ಷದ ಎನ್.ಮಂಜು ಹ್ಯಾಮರ್ ಥ್ರೋ (ದ್ವಿ) ಸ್ಥಾನ ಪಡೆದಿದ್ದಾರೆ.

ಈ ಹನ್ನೊಂದು ಮಂದಿ ಸಾಧಕರು ದಕ್ಷಿಣ ಕೊರಿಯಾದಲ್ಲಿ ನಡೆಯುವ ಮಾಸ್ಟರ್ಸ್ ವರ್ಲ್ಡ್ ಅಥ್ಲೆಟಿಕ್ಸ್ ಮೀಟ್‌ಗೆ ಆಯ್ಕೆಯಾಗಿದ್ದಾರೆ ಎಂದು ಕಾರ್ಯದರ್ಶಿ ಬಿ.ಬಸವರಾಜು ಪತ್ರಿಕೆಗೆ ತಿಳಿಸಿದ್ದಾರೆ.

ಗೊಂದಲ ನಿವಾರಣೆವರೆಗೆ ಶಿಕ್ಷಣ, ಉದ್ಯೋಗದಲ್ಲಿ ಒಳಮೀಸಲಾತಿಗೆ ತಡೆ ನೀಡಲು ಆಗ್ರಹಿಸಿ ಪ್ರತಿಭಟನೆ

ಮೈಸೂರು, ಫೆ.10(ಜಿಎ)–ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ವರದಿ ಗೊಂದಲ ಬಗೆಹರಿಯುವವರೆಗೆ ಶೈಕ್ಷಣಿಕ ವಲಯ, ಉದ್ಯೋಗಕ್ಕೆ ಅನ್ವಯಿಸುತ್ತಿರುವ ಒಳಮೀಸಲಾತಿಗೆ ಸರ್ಕಾರ ತಡೆ ನೀಡಬೇಕು ಎಂದು ಒತ್ತಾಯಿಸಿ ಪರಿಶಿಷ್ಟ ಜಾತಿ ಬಲಗೈ ವಿದ್ಯಾರ್ಥಿಗಳ ಒಕ್ಕೂಟದ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮಾನಸಗಂಗೋತ್ರಿ ಆವರಣದ ಅಂಬೇಡ್ಕರ್ ಪ್ರತಿಮೆ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಬೈಕ್‌ಗಳಲ್ಲಿ ಜಾಥಾ ನಡೆಸಿದರು. ವಿದ್ಯಾರ್ಥಿಗಳು ಭಿತ್ತಿ ಫಲಕಗಳನ್ನು ಹಿಡಿದು ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಿದರು.

ಒಕ್ಕೂಟದ ಪದಾಧಿಕಾರಿ ಬಿ.ಕೆ.ಜ್ಞಾನಪ್ರಕಾಶ್ ಮಾತನಾಡಿ, ನಾಗ ಮೋಹನ ದಾಸ್ ವರದಿಯಲ್ಲಿ ಮೂಲ ಜಾತಿಗಳನ್ನೇ ಗುರುತಿಸಿಲ್ಲ. ಇದರಿಂದ ಅನ್ಯಾಯ ಆಗಲಿದೆ. ದೊರೆತ ಮೀಸಲಾತಿ ಸೌಲಭ್ಯ ಬಳಸಿಕೊಳ್ಳಲು ವಿಫಲರಾದವರು ಬಲಗೈ ಸಮುದಾಯದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.



ಒಳಮೀಸಲಾತಿಗೆ ಸರ್ಕಾರ ತಡೆ ನೀಡಬೇಕು ಎಂದು ಒತ್ತಾಯಿಸಿ ಪರಿಶಿಷ್ಟ ಜಾತಿ ಬಲಗೈ ವಿದ್ಯಾರ್ಥಿಗಳ ಒಕ್ಕೂಟದ ವತಿಯಿಂದ ಮನವಿ ಸಲ್ಲಿಸಲಾಯಿತು.

ಕರ್ನಾಟಕ ಅನುಸೂಚಿತ ಜಾತಿಗಳ ಉಪ ವರ್ಗೀಕರಣ ವಿಧೇಯಕ 2025 ಹೆಸರಿನ ಒಳ ಮೀಸಲಾತಿ ಮಸೂದೆಯು ಪೂರ್ಣವಾಗಿ ಜಾರಿಯಾಗದ ಕಾರಣ ಹೊಸ ಜಾತಿ ಪ್ರಮಾಣ ಪತ್ರ ವಿತರಣೆ ನಿಲ್ಲಿಸಲು ಆದೇಶಿಸಬೇಕು. ಆದಿ ಆಂಧ್ರ, ಆದಿ ದ್ರಾವಿಡ, ಆದಿ ಕರ್ನಾಟಕ ಹಾಗೂ ಇತರೆ ಸಮುದಾಯಗಳಿಗೆ ಜಾತಿ ಪ್ರಮಾಣ ಪತ್ರ ನೀಡುವ ಬಗ್ಗೆ 2025ರ ಅ.8ರಂದು ಹೊರಡಿಸಿರುವ ಸುತ್ತೋಲೆ ಹಿಂಪಡೆದು, ಹಳೆ ಜಾತಿ ಪ್ರಮಾಣ ಪತ್ರವನ್ನೇ ಮಾನ್ಯ ಮಾಡುವಂತೆ ಶಿಕ್ಷಣ ಮತ್ತು ಔದ್ಯೋಗಿಕ ಇಲಾಖೆಗಳಿಗೆ ತುರ್ತು ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದರು.

ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಕೈಬಿಟ್ಟಿರುವ ಮನ್ನ, ಮೇರ, ಮಾದಾರಿ ಹಾಗೂ ಇತರೆ ಕೆಲವು ಜಾತಿಗಳನ್ನು ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು. ಕೆಲವು ಜಾತಿಗಳು ಮೂಲ ಜಾತಿ ತಿಳಿಸದೆ ಉಂಟಾಗಿರುವ ಗೊಂದಲ ಸರಿಪಡಿಸಬೇಕು. ಇಲಾಖೆ, ವಿಶ್ವವಿದ್ಯಾಲಯ, ಅನುದಾನಿತ ಸಂಸ್ಥೆಗಳು, ಪ್ರಾಧಿಕಾರಗಳಲ್ಲಿ ಬ್ಯಾಕ್‌ಲಾಗ್ ಮತ್ತು ಬಡ್ತಿಗೆ ಸಂಬಂಧಿಸಿ ಒಂದು ಮತ್ತು ಎರಡು ಹುದ್ದೆಗಳಿದ್ದಾಗ ಮೀಸಲಾತಿ ನಿಗದಿ ಪಡಿಸುವ ಜವಾಬ್ದಾರಿಯನ್ನು ಸಮಾಜ ಕಲ್ಯಾಣ ಇಲಾಖೆ ನಿರ್ವಹಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಎಚ್.ಪಿ.ವಿಶ್ವಪ್ರಸಾದ್, ಶಿವಶಂಕರ್, ಕಾರ್ತಿಕ್, ಲಿಂಗರಾಜು, ಮಹೇಶ್ ಮರಳ್ಳಿ, ಪ್ರದೀಪ್ ಮುಮ್ಮಡಿ, ಸಂದೇಶ್, ಕೃಷ್ಣಮೂರ್ತಿ ಗಣಿಗನೂರು, ಶಿವು ಬಂಡಳ್ಳಿ, ನಂದೀಶ್ ಗಾಗೇನಹಳ್ಳಿ, ಬಿ.ಕೆ ಜ್ಞಾನಪ್ರಕಾಶ್, ಮೂರ್ತಿ, ರಮೇಶ್ ಕೆ.ಪಿ, ಎಂ.ಮನೋಜ್‌ಕುಮಾರ್, ಗೋಪಾಲ್, ನಟರಾಜ, ಶಿವಣ್ಣ, ಮಲ್ಲೈ ಮಹದೇವಸ್ವಾಮಿ, ಮಾಜಿ ಮೇಯರ್ ಪುರುಷೋತ್ತಮ್, ವೇದಾವತಿ, ಚೋರನಹಳ್ಳಿ ಶಿವಣ್ಣ, ಪರಮಾನಂದ, ಸಿದ್ದರಾಜು, ಚೆನ್ನಕೇಶವಮೂರ್ತಿ, ದಿಲೀಪ್ ನರಸಯ್ಯ ಶ್ರೀಧರ್ ಬುದ್ಧ ಪಾಲ್ಗೊಂಡಿದ್ದರು.


ಫೆ.16, ಸಾರ್ವಜನಿಕ ಸಮಾಲೋಚನಾ ಸಭೆ

ಮೈಸೂರು: ಜಿಲ್ಲಾಧಿಕಾರಿಗಳು ಹಾಗೂ ನಂಜನಗೂಡು ನಗರಸಭೆ ಆಡಳಿತಾಧಿಕಾರಿ ಅಧ್ಯಕ್ಷತೆಯಲ್ಲಿ ನಂಜನಗೂಡು ನಗರಸಭೆಯ 2026–27ನೇ ಸಾಲಿನ ಆಯ–ವ್ಯಯ ತಯಾರಿಸುವ ಸಂಬಂಧ ಸಾರ್ವಜನಿಕ ಸಮಾಲೋಚನಾ ಸಭೆ ಫೆ.16ರಂದು ಬೆಳಿಗ್ಗೆ 11 ಗಂಟೆಗೆ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದೆ.

ಸಭೆಯನ್ನು ಸಾರ್ವಜನಿಕವಾಗಿ ಸಮಾಲೋಚನೆ ಮಾಡಲು ನೋಂದಾಯಿತ ಸ್ಥಳೀಯ ಸಂಘ ಸಂಸ್ಥೆಗಳು, ನೋಂದಾಯಿತ ಸರ್ಕಾರೇತರ ಸಂಘ–ಸಂಸ್ಥೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಸಂಘಗಳು ಹಾಗೂ ಇತರೇ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ನಗರದ ಗಣ್ಯ ವ್ಯಕ್ತಿಗಳು ಸಭೆಗೆ ಆಗಮಿಸಿ 2026–27ನೇ ಸಾಲಿನ ಆಯವ್ಯಯ ತಯಾರಿಕೆಗೆ ನಂಜನಗೂಡು ನಗರಕ್ಕೆ ಅಗತ್ಯವೆನಿಸುವ ಯೋಜನೆಗಳು, ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ತಮ್ಮ ಸಲಹೆ–ಸೂಚನೆಗಳನ್ನು ನೀಡಬೇಕೆಂದು ನಂಜನಗೂಡು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ಮಾಲೇಟಿರಾ ಬೇಬಿ ಕಾವೇರಿಯಪ್ಪ




ಮೈಸೂರು, ಫೆ.10–ಮೈಸೂರಿನ ಗೋಕುಲಂ 3ನೇ ಹಂತದ ನಿವಾಸಿ, ನಿವೃತ್ತ ವಲಯ ಅರಣ್ಯ ಅಧಿಕಾರಿ, ಧೀನ ಬಂಧು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರು ಹಾಗೂ ವಿಪ್ರೋದಲ್ಲಿ ಮ್ಯಾನೇಜರ್ ಆಗಿ ಸೇವೆ ಸಲ್ಲಿಸಿದ್ದ ದಿವಂಗತ ಮಾಲೇಟಿರಾ ಎಂ.ಕಾವೇರಿಯಪ್ಪ (ರಾಜಾ) ಅವರ ಪತ್ನಿ ಮಾಲೇಟಿರಾ ಬೇಬಿ ಕಾವೇರಿಯಪ್ಪ (ನಾಟೋಲಂಡ) ಮಂಗಳವಾರ ಬೆಂಗಳೂರಿನ ತಮ್ಮ ಪುತ್ರನ ನಿವಾಸದಲ್ಲಿ ನಿಧನರಾದರು. ಅವರಿಗೆ 84 ವರ್ಷ ವಯಸ್ಸಾಗಿತ್ತು. ಮೃತರು ಪುತ್ರ ಎಂ.ಕೆ. ಗಣಪತಿ, ಪುತ್ರಿ ಡಾ. ಮುಲ್ಲೇಗಂಡ ಎಸ್. ಕೃತಿಕಾ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನ ಮೇದಿ ಅಗ್ರಹಾರ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ವಿ. ವಿಠಲ್



ಮೈಸೂರಿನ ಸರಸ್ವತಿಪುರಂ ನಿವಾಸಿ ಹಾಗೂ ನಿವೃತ್ತ ಡೆಪ್ಯುಟಿ ಡಿವಿಷನಲ್ ಇಂಜಿನಿಯರ್ (ಪಿ ಅಂಡ್ ಟಿ) ಎಸ್.ವಿ.ವಿಠಲ್ (90) ಮಂಗಳವಾರ ನಿಧನರಾದರು. ಮೃತರು ಪುತ್ರ ಸುಧೀರ್ ಸೋಸಲೆ, ಪುತ್ರಿ ವೀಣಾ ಅರುಣ್ ಕುಮಾರ್, ಸೊಸೆ ಅನಿತಾ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್‌ಹಾಜ್ ನಸೀರ್ ಅಹಮದ್



ಮೈಸೂರಿನ ಲಷ್ಕರ್ ಮೊಹಲ್ಲಾ ನಿವಾಸಿ ಹಾಗೂ ಜನರಲ್ ಇಂಜಿನಿಯರಿಂಗ್ ವರ್ಕ್ಸ್ ಮಾಲೀಕ ಅಲ್‌ಹಾಜ್ ನಸೀರ್ ಅಹಮದ್ (80) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, 7 ಮಂದಿ ಪುತ್ರರು, ನಾಲ್ವರು ಪುತ್ರಿಯರು, ಮೊಮ್ಮಕ್ಕಳು ಮತ್ತು ಅಪಾರ ಬಂಧುಗಳು, ಸ್ನೇಹಿತರು ಹಾಗೂ ಹಿತೈಷಿಗಳನ್ನು ಅಗಲಿದ್ದಾರೆ. ಇಂದು ಸಂಜೆ 5:15 ಗಂಟೆಗೆ ನಮಾಜ್–ಎ–ಜನಾಜಾ ಬಳಿಕ ಮೈಸೂರಿನ ಟಿಪ್ಪು ಸರ್ಕಲ್ ಹಿಂಭಾಗ ಇರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.8ರಲ್ಲಿ ಮೃತರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

11.2.2026 ಬುಧವಾರ, ಮಳೆ ನಕ್ಷತ್ರ: ಧನಿಷ್ಠ 6.02.2026ರಿಂದ 18.02.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಅನುರಾಧ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕೊಲೆಸ್ಟ್ರಾಲ್ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಸ್ವಯಂ ಡಿಜಿಟಲ್ ಲರ್ನಿಂಗ್ ಅಂಡ್ ಮಾನಿಟರಿಂಗ್ ಸೆಲ್ :** ಪುನಶ್ಚೇತನ ಕಾರ್ಯಾಗಾರ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಪ್ರೊ. ಎನ್. ನಾಗರಾಜ, ಸಂಯೋಜಕ ಪ್ರೊ. ಹೆಚ್.ಎಸ್. ಕುಮಾರ, ಸ್ಥಳ: ಸೆನೆಟ್ ಭವನ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಂಡಿ ನೋವು, ಮೂಲವ್ಯಾಧಿ ಕುರಿತು ತಪಾಸಣೆ, ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಮೇರಾ ಯುವ ಭಾರತ್, ಕೀರ್ತಿ ಯುವತಿ ಮಹಿಳಾ ಮಂಡಳಿ :** ಅಂತರರಾಷ್ಟ್ರೀಯ ವಿಜ್ಞಾನದಲ್ಲಿನ ಮಹಿಳೆಯರು ಮತ್ತು ಬಾಲಕಿಯರ ದಿನಾಚರಣೆ ಹಾಗೂ ಪ್ರಬಂಧ ಸ್ಪರ್ಧೆ, ಉದ್ಘಾಟನೆ : ಸಮಾಜ ಸೇವಕ ಶ್ರೀಮತಿ ಎಂ.ಸಿ. ಚೋಂದಮ್ಮ ಪೂಣಚ್ಚ, ಅಧ್ಯಕ್ಷತೆ : ಮುಖ್ಯ ಶಿಕ್ಷಕ ಡಿ. ಕೃಷ್ಣಮೂರ್ತಿ, ಪ್ರಸ್ತಾವನೆ : ಜಿಲ್ಲಾ ಯುವ ಅಧಿಕಾರಿ ಪಿ. ಅಖಿಲ್, ಆಶಯ ನುಡಿ : ಕೀರ್ತಿ ಯುವತಿ ಮಂಡಳಿ ಅಧ್ಯಕ್ಷೆ ಶ್ರೀಮತಿ ಮಂಜುಳ ರಮೇಶ್, ಬಹುಮಾನ ವಿತರಣೆ : ನಿವೃತ್ತ ತಹಸೀಲ್ದಾರ್ ಕೆ.ಬಿ. ಪಾಪಣ್ಣ, ಸ್ಥಳ: ಬಿ.ಎಸ್. ಸುಬ್ಬಣ್ಣ ಸಾರ್ವಜನಿಕ ಬಾಲಿಕ ಪ್ರೌಢಶಾಲೆ, ಚಾಮುಂಡಿಬೆಟ್ಟ, ಮಧ್ಯಾಹ್ನ 2.30ಕ್ಕೆ.
- **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ರಂಗ ಮತ್ತು ನೃತ್ಯೋತ್ಸವ, ಉದ್ಘಾಟನೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಅಧ್ಯಕ್ಷತೆ : ಚಿಂತಕ ಹೊರೆಯಾಲ ದೊರೆಸ್ವಾಮಿ, ಸನ್ಮಾನಿತರು : ಹಿರಿಯ ರಂಗಕರ್ಮಿ ನಾರಾಯಣಶೆಟ್ಟಿ ಕಿಕ್ಕೇರಿ, ಸನ್ಮಾನಿಸುವವರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸ್ಥಳ: ಶ್ರೀರಂಗ ವೇದಿಕೆ, ರಂಗಾಯಣ, ಸಂಜೆ 6ಕ್ಕೆ.
- **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ ಹಾಗೂ ಮಹಾಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ, ಆರು ದಶಕಗಳ ಸಾರ್ಥಕ ಆಧ್ಯಾತ್ಮಿಕ ಸೇವೆಯ 60ನೇ ವಾರ್ಷಿಕೋತ್ಸವ ಸಮಾರಂಭ, ಸಾನ್ನಿಧ್ಯ : ಮುಖ್ಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಡಾ. ಲಕ್ಷ್ಮೀಜಿ, ಉದ್ಘಾಟನೆ ಮತ್ತು ಆಶೀರ್ವಚನ : ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಡಾ. ಭಾಷ್ಯಂ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಕರಾಮುವಿವಿ ಕುಲಪತಿ ಡಾ. ಶರಣಪ್ಪ ವಿ. ಹಲಸೆ, ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಮಾಜಿ ಮೇಯರ್ ಬಿ.ಎಲ್. ಭೈರಪ್ಪ, ಸ್ವಾಮಿ ದಿವ್ಯಪಾದಾಜಿ, ಸ್ಥಳ: ವಿದ್ಯಾಲಯದ ಆವರಣ, ಹುಣಸೂರು ರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಸಂಜೆ 6.30ಕ್ಕೆ.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಕಲಾ ಸಪ್ತಮಿ ವಾರದ ಕಾರ್ಯಕ್ರಮ, ಸಂಜೆ 6 ರಿಂದ ವಿದ್ವಾನ್ ಯಾಮಿನಿ ಮುತ್ತಣ್ಣ ಅವರ ಶಿಷ್ಯೆರಾದ ಸಾಯಿ ಸಿಂಧೂರ, ವೈಶಾಲಿ ರೆಡ್ಡಿ, ಶಿವದರ್ಶಿನಿ ಅಶೋಕ್, ಮಾನ್ಯ ಮುತ್ತಣ್ಣ, ದೀಪಿಕಾ ಇಂದ್ರನ್, ಭಾವನಾ ನೀಲಕಂಠನ್, ಮಹಿಕಾ ನಿರಂಜನ್, ಮಿತ್ರಮಾಲ್ಯ ಅವರಿಂದ ನವಗ್ರಹ ಭರತನಾಟ್ಯ ಪ್ರದರ್ಶನ; ಸಂಜೆ 7 ರಿಂದ ವಿದುಷಿ ಶ್ರೀವಿದ್ಯಾರಾವ್ ಅವರ ಶಿಷ್ಯೆರಾದ ಬಿನಾದ ಎಸ್. ಆಚಾರ್, ಉನ್ನತಿ ಹೆಬ್ಬಾರ್ ಎಂ.ಎ., ಅಕ್ಷರ ವಿ. ಆಚಾರ್ಯ, ಕೆ. ಶರವಣ ಬಾನು, ಎಂ.ಎಸ್. ಲೇಖನ, ಜಿ. ಶರಣ್ಯ, ಎನ್.ಜೆ. ಆಧ್ಯಾ, ಕೌಸ್ತುಭ ಎ. ಅರಸ್, ಎಸ್. ವಿಂಧ್ಯಾ, ಜೆ. ಗಾನವಿ, ಎಂ. ದೀಪ್ತಾ, ಎಂ.ಸಿ. ಶರಾವತಿ, ಸಿ. ದಿಯಾ, ಆರ್. ರಿತಿಕಾ, ಎಂ.ಎಸ್. ಅಕ್ಷಯ ಭಟ್, ರಿದ್ಧಿ ಆರ್. ರಾವ್, ಬಿ.ವಿ. ಸ್ಫೂರ್ತಿ, ಎಸ್. ಭುವನ್ ಕುಮಾರ್, ಎಸ್. ನಿಸರ್ಗ, ಜಿ. ಶ್ರೇಯಾ, ಆರ್. ಯಶಸ್ವಿನಿ, ಲಿಕಿತಾ ಸತೀಶ್, ಪಿ. ದೀಕ್ಷಾ, ಎಸ್. ಲಾವಣ್ಯ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್‌ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ– ಡಾ. ಅಮ್ಮ ಸಂದ್ರ ಸುರೇಶ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಎಂ. ಎಸ್. ಲಕ್ಷ್ಮೀಶ, ವ್ಯಾಖ್ಯಾನ–ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ ಲಿಡ್ಕರ್ ನಂಬಿಕೆ ನಿರಂತರ, ಪ್ರಾಯೋಜಕರು–ಡಾ. ಬಾಬು ಜಗಜೀವನ್ ರಾಮ್ ಚರ್ಮೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, 8.30 ಯುವವಾಣಿ ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಲೆಕ್ಕಶಾಸ್ತ್ರ (Accountancy), ಭಾಗವಹಿಸುತ್ತಾರೆ –ಮೈಸೂರಿನ ಸರ್ಕಾರಿ ಮಹಾರಾಣಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಮಮತ .ಜಿ., ಪ್ರಸ್ತುತಿ– ದಿಗ್ವಿಜಯ್ .ಬಿ., 9.15 ಗರ್ಭಕಂಠದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ – ಪಂಡಿತ್ ವೆಂಕಟೇಶ್ ಗೋಡ್ಖಿಂಡಿ – ಬಾನ್ಸುರಿ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಚೈತ್ರಿಕಾ .ಎಸ್., 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಡಾ. ಬಿ. ಎಸ್. ವಿಜಯರಾಘವನ್–ವೀಣಾ ವಾದನ, 4.00 ಮಹಿಳಾರಂಗ, 4.30 ಹಿಂದಿಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಸ್ಮಿತಾ ಚಿಪ್ಳೂಣ್‌ಕರ್, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ಕಟ್ಟಡ ದೋಷಗಳು ಮತ್ತು ಬಿರುಕುಗಳಿಗೆ ಕಾರಣ, ಮುನ್ನೆಚ್ಚರಿಕೆ ಮತ್ತು ಪರಿಹಾರಗಳು, ಭಾಗವಹಿಸುತ್ತಾರೆ–ಎ.ಸಿ.ಇ. ಟೆಕ್ನಾಲಜಿಸ್‌ನ ಮುಖ್ಯ ಸಲಹೆಗಾರರಾದ ಎನ್. ಆರ್. ಅಶೋಕ್ ಮತ್ತು ಯಶಸ್ ಕನ್ಸಲಟೆಂಟ್‌ನ ಸ್ಟ್ರಕ್ಚರಲ್ ಇಂಜಿನಿಯರ್ ಯದುನಂದನ್, ಪ್ರಸ್ತುತಿ–ಎನ್.ಕೇಶವಮೂರ್ತಿ, 5.30 ಚಿತ್ರಗೀತೆಗಳು, 6.50 ಕೃಷಿರಂಗ–ತೋಟಗಾರಿಕಾ ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣೆ ಈ ಕುರಿತು ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಡಾ. ವಿಷ್ಣುವರ್ಧನ ಅವರೊಂದಿಗೆ ಸಂದರ್ಶನ, ಸಂದರ್ಶಕರು –ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಮಕ್ಕಳ ಮಂಟಪ ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್.ಎಸ್.ಎಲ್.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಇಂಗ್ಲಿಷ್, ಭಾಗವಹಿಸುವವರು–ಮರಿಮಲ್ಲಪ್ಪ ಶಾಲೆಯಲ್ಲಿ ಹೈಸ್ಕೂಲ್ ಶಿಕ್ಷಕರಾಗಿರುವ ಜಿ. ಸಿದ್ದೇಶ್ವರ ಪ್ರಸಾದ್, ಪ್ರಸ್ತುತಿ– ದಿಗ್ವಿಜಯ್ ಬಿ., 9.30 ಕ್ರೀಡಾಲೋಕ, 10.00 ಆಕಾಶವಾಣಿ ಸಂಗೀತ ಸಮ್ಮೇಳನ, ಪುಷ್ಪವನಂ ಕುಪ್ಪುಸ್ವಾಮಿ, ಜನಪದ ಸಂಗೀತ – ಹಾಡುಗಾರಿಕೆ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 11 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 293 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ವಿಧಾನಸೌಧದಲ್ಲೇ ಲಕ್ಷಾಂತರ ರೂ. ನಗದು, ಚಿನ್ನಾಭರಣ ಕಳವು!

ಬೆಂಗಳೂರು, ಫೆ10(ಕೆಎಂಶಿ)– ರಾಜ್ಯದ ರಾಜಕೀಯ ಶಕ್ತಿ ಕೇಂದ್ರ ವಿಧಾನಸೌಧದಲ್ಲೇ ಲಕ್ಷಾಂತರ ರೂ. ನಗದು ಹಾಗೂ ಚಿನ್ನ ಕಳ್ಳತನ ಆಗಿರುವುದು ತಡವಾಗಿ ಬೆಳಕಿಗೆ ಬಂದಿದೆ.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಕೊಠಡಿಯಲ್ಲಿ ಇಟ್ಟಿದ್ದ 200 ಗ್ರಾಂ ಚಿನ್ನ ಹಾಗೂ 1.10 ಲಕ್ಷ ರೂ. ನಗದು ಕಳುವಾಗಿದೆ ಎಂದು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿ, ಒಬ್ಬರನ್ನು ಬಂಧಿಸಲಾಗಿದೆ.

ಕೋಲಾರದ ವಿಶೇಷಚೇತನ ವ್ಯಕ್ತಿ ನವೀನ್ ಎಂಬುವರು ಸಚಿವರ ಕಚೇರಿಯಲ್ಲಿ ತಾವು ಇರಿಸಿದ್ದ ಬ್ಯಾಗ್‌ನಲ್ಲಿದ್ದ ನಗದು ಮತ್ತು ಚಿನ್ನ ಕಳುವಾಗಿದೆ ಎಂದು ದೂರು ನೀಡಿದ್ದಾರೆ. ದೂರು ದಾಖಲಿಸಲು ಪೊಲೀಸರು ಹಿಂದೇಟು ಹಾಕಿದಾಗ, ದೂರುದಾರ ವ್ಯಕ್ತಿ, ಲೋಕಾಯುಕ್ತಕ್ಕೆ ದೂರು ನೀಡುವುದಾಗಿ ಎಚ್ಚರಿಸಿದ ನಂತರ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗಿದೆ.

ದೂರಿನ ಆಧಾರದ ಮೇಲೆ ವಿಧಾನಸೌಧದ ಸಿಸಿಟಿವಿ ಕ್ಯಾಮರಾಗಳನ್ನು ಪರಿಶೀಲಿಸಿದಾಗ 4ನೇ ದರ್ಜೆ ನೌಕರ ಆಂಟನಿ ಎಂಬುವರು ಸಚಿವರ ಕೊಠಡಿಯಲ್ಲಿ ಇದ್ದ ಬ್ಯಾಗನ್ನು ತೆಗೆದುಕೊಂಡು ಹೋಗುತ್ತಿದ್ದುದು ಕಂಡುಬಂದಿದೆ.

ಆರೋಪಿಯನ್ನು ವಿಚಾರಣೆಗೆ ಒಳಪಡಿಸಿ 18 ಗ್ರಾಂ ಚಿನ್ನ ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ಮುಂದುವರೆದಿದೆ. ನವೀನ್ ನೀಡಿರುವ ದೂರಿನಲ್ಲಿ, ನಾನು ಕೇಸ್ ಒಂದರ ಸಲುವಾಗಿ ಸಚಿವರ ಭೇಟಿಗೆ ಬಂದಿದ್ದೆ. ಈ ವೇಳೆ ಹೈಕೋರ್ಟ್ ಕಡೆಯ ಗೇಟ್ ಬಳಿ ಪೊಲೀಸರು ನನ್ನ ಬ್ಯಾಗ್ ಚೆಕ್ ಮಾಡಿದ್ದರು. ಅದರಲ್ಲಿ ಚಿನ್ನ ಮತ್ತು ಹಣ ಇರೋದನ್ನ ನೋಡಿ ಬಿಡಲ್ಲ ಎಂದರು. ಅದಕ್ಕೆ ನಾನು ಅನಾರೋಗ್ಯದಿಂದ ಬಳಲುತ್ತಿದ್ದು, ಬ್ಯಾಗ್ ಸಹಿತ ಒಳಗೆ ಬಿಡುವಂತೆ ಕೇಳಿಕೊಂಡೆ.



ನಂತರ ನನ್ನನ್ನು ಬ್ಯಾಗ್ ಸಮೇತ ಒಳಗೆ ಬಿಟ್ಟರು. ಸಚಿವರ ಕಚೇರಿ ಕಾರ್ಯದರ್ಶಿ ಅವರನ್ನು ಭೇಟಿಯಾದೆ. ನನ್ನ ಸಮಸ್ಯೆ ಬಗೆಹರಿಸುವ ಭರವಸೆ ಕೊಟ್ಟರು.

ನಾನು ನಂತರ ಅಲ್ಲೇ ನನ್ನ ಬ್ಯಾಗ್ ಇಟ್ಟು ಸ್ವಲ್ಪ ಸಮಯ ಬಿಟ್ಟು ತೆಗೆದುಕೊಂಡು ಹೋಗುವುದಾಗಿ ಹೇಳಿದೆ. ವಿಧಾನ ಸಭೆಯ ಪಾಸ್ ತೆಗೆದುಕೊಂಡು ಒಳಗೆ ಹೋಗಿ ಕಲಾಪ ಮುಗಿದ ನಂತರ ಬ್ಯಾಗ್ ಇಟ್ಟಿದ್ದ ಕಚೇರಿಗೆ ಹಿಂತಿರುಗಿದಾಗ, ಬಾಗಿಲಿಗೆ ಬೀಗ ಹಾಕಲಾಗಿತ್ತು.

ಆಗ ಭದ್ರತಾ ಸಿಬ್ಬಂದಿ ಬಳಿ ವಿಚಾರಿಸಿದಾಗ, ಬೆಳಗ್ಗೆ ಬಂದು ಬ್ಯಾಗ್ ತೆಗೆದುಕೊಂಡು ಹೋಗಲು ಹೇಳಿದರು. ಮರುದಿನ ಬಂದು ನೋಡಿದಾಗ ಬ್ಯಾಗ್ ಇರಲಿಲ್ಲ.

ಭದ್ರತಾ ಸಿಬ್ಬಂದಿ ಬಳಿ ವಿಚಾರಿಸಿದಾಗ, ನನ್ನ ಮೇಲೆಯೇ ಹಲ್ಲೆಗೆ ಮುಂದಾದರು. ಅಲ್ಲದೆ, ನಾವು ನಿನ್ನ ಬ್ಯಾಗ್ ನೋಡಿಕೊಳ್ಳಲು ಇರೋದಲ್ಲ ಎಂದು ಬೆದರಿಕೆ ಹಾಕಿದರು.

ನನ್ನ ಬ್ಯಾಗ್‌ನಲ್ಲಿ 200 ಗ್ರಾಂ ಚಿನ್ನ, 1.10 ಲಕ್ಷ ನಗದು ಇತ್ತು, ಅದನ್ನು ನಾನು ಮರೆತು ಬಿಟ್ಟು ಬಂದಿದ್ದಲ್ಲ. ಚಿನ್ನಾಭರಣಕ್ಕೆ ನನ್ನ ಬಳಿ ಎಲ್ಲಾ ಬಿಲ್‌ಗಳು ಇವೆ. ಬ್ಯಾಂಕ್ ಮೂಲಕ ಹಣ ತೆಗೆದುಕೊಂಡಿದ್ದೆ.

ನಂತರ ನಾನು ವಿಧಾನಸೌಧ ಪೊಲೀಸರಿಗೆ ದೂರು ನೀಡಿದೆ. ಆಗ ಆಂಟನಿ ಎಂಬಾತನನ್ನು ಅರೆಸ್ಟ್ ಮಾಡಿದ್ದು, ಆತ ಸಚಿವರ ಕಚೇರಿ ಕೆಲಸಗಾರ ಅಲ್ಲ. ಕಚೇರಿಗಳಿಗೆ ಸಂಜೆ ಬೀಗ ಹಾಕುವ 'ಡಿ' ಗ್ರೂಪ್ ನೌಕರ. ಈತನ ಬಂಧಿಸಿ 18 ಗ್ರಾಂ ಚಿನ್ನ ವಶಕ್ಕೆ ಪಡೆಯಲಾಗಿದೆ. ನನ್ನ ತಾಯಿ ಬಳಿ ಚಿನ್ನ ಇದ್ದರೆ ಸೇಫಲ್ಲ ಎಂದು ಬ್ಯಾಗ್‌ನಲ್ಲಿ ನಾನು ಊರಿಂದ ತೆಗೆದುಕೊಂಡು ಬಂದಿದ್ದೆ. ಈ ಕೃತ್ಯದಲ್ಲಿ ಇನ್ನೊಬ್ಬ ಸಿಬ್ಬಂದಿ ಆಂಟನಿ ಜೊತೆ ಶಾಮೀಲಾಗಿದ್ದು, ನನಗೆ ಪೊಲೀಸರ ತನಿಖೆ ಮೇಲೆ ಸಂಪೂರ್ಣ ನಂಬಿಕೆ ಇದೆ ಎಂಬುದಾಗಿ ದೂರುದಾರ ವ್ಯಕ್ತಿ ತಿಳಿಸಿದ್ದಾರೆ.

ಯತೀಂದ್ರ ಟ್ಯಾಕ್ಸ್ ಕಟ್ಟಿದವರಿಗೆ ಮಾತ್ರವೇ ಸರ್ಕಾರದಲ್ಲಿ ಕೆಲಸ ಆಗುತ್ತೆ

ಮೈಸೂರಿನಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಗಂಭೀರ ಆರೋಪ

■ ಸಚಿವ ಸಂಪುಟದಲ್ಲಿ 'ವರ್ಗಾವಣೆ' ಖಾತೆ ತೆರೆಯಲಾಗಿದೆ ■ ಇದಕ್ಕೆ ಪುತ್ರ ಯತೀಂದ್ರನನ್ನು ಮಂತ್ರಿ ಮಾಡಿದ್ದಾರೆ ■ ಮಗನಿಂದ ಸಿದ್ದರಾಮಯ್ಯಗೆ ತೀವ್ರ ಮುಜುಗರ ■ ಡಾ. ಮಹದೇವಪ್ಪ ವರ್ಷದಲ್ಲಿ 3 ದಿನ ಮಾತ್ರವೇ ಮೈಸೂರಿನಲ್ಲಿರುತ್ತಾರೆ

ಮೈಸೂರು, ಫೆ.10(ಬಿಎಲ್‌ಯು)– ರಾಜ್ಯದಲ್ಲಿ ಯತೀಂದ್ರ ಟ್ಯಾಕ್ಸ್ ಕಡ್ಡಾಯವಾಗಿದ್ದು, ಈ ಟ್ಯಾಕ್ಸ್ ಕಟ್ಟಿದವರಿಗೆ ಮಾತ್ರ ಸರ್ಕಾರದ ಮಟ್ಟದಲ್ಲಿ ಕೆಲಸವಾಗುತ್ತದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪಿಸಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯ ಸಚಿವ ಸಂಪುಟದಲ್ಲಿ 'ವರ್ಗಾವಣೆ' ಖಾತೆ ಚಾಲ್ತಿಯಲ್ಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದಕ್ಕೆ ತಮ್ಮ ಪುತ್ರ ಯತೀಂದ್ರ ಅವರನ್ನು ಸಚಿವರನ್ನಾಗಿ ಮಾಡಿದ್ದಾರೆ ಎಂದು ಗೇಲಿ ಮಾಡಿದರು.

ಯತೀಂದ್ರ ಅವರು ವರ್ಗಾವಣೆ ದಂಧೆಯಲ್ಲಿ ತೊಡಗಿದ್ದಾರೆ. ಈ ಮೂಲಕ ಸಿದ್ದರಾಮಯ್ಯ ಅವರಿಗೆ ಕೆಟ್ಟ ಹೆಸರು ತಂದು, ಅವರು ತಲೆ ತಗ್ಗಿಸುವಂತೆ ಮಾಡುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ದೂರಿದರು. ಸಿದ್ದರಾಮಯ್ಯ ಅವರ ಮೊದಲ ಪುತ್ರ ದಿವಂಗತ ರಾಕೇಶ್ ಎಂದಿಗೂ ತಂದೆಗೆ ಮುಜುಗರವಾಗುವಂತೆ ನಡೆದುಕೊಂಡಿರಲಿಲ್ಲ. ಪ್ರಾಯಶಃ ರಾಕೇಶ್ ಬದುಕಿದ್ದರೆ ಇವತ್ತು ಸಿದ್ದರಾಮಯ್ಯ ಅವರಿಗೆ ತಲೆ ತಗ್ಗಿಸುವ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಹೇಳಿದರು.

ತಂದೆ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಯತೀಂದ್ರ ಅವರು ಪ್ರತಿ ಇಲಾಖೆಯಲ್ಲೂ ಹಸ್ತಕ್ಷೇಪ ಮಾಡುತ್ತಿದ್ದಾರೆ. ■ 6ನೇ ಪುಟಕ್ಕೆ

ಮಕ್ಕಳು ಕಾಣೆಯಾಗುವುದರ ಹಿಂದೆ ಜಾಲವಿದೆಯೇ...!

'ಸುಪ್ರೀಂ' ಸೀರಿಯಸ್

ನವದೆಹಲಿ, ಫೆ.10– ದೇಶದ ವಿವಿಧ ಭಾಗಗಳಿಂದ ಮಕ್ಕಳು ಕಾಣೆಯಾಗುವ ಘಟನೆಗಳ ಹಿಂದೆ ರಾಷ್ಟ್ರವ್ಯಾಪಿ ಜಾಲ ಅಥವಾ ರಾಜ್ಯ–ನಿರ್ದಿಷ್ಟ ಗುಂಪು ಇದೆಯೇ ಎಂದು ಖಚಿತಪಡಿಸಿಕೊಳ್ಳುವಂತೆ ಸುಪ್ರೀಂಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ಜಲ್ ಭೂಯಾನ್ ಅವರ ಪೀಠ ಈ ಘಟನೆಗಳ ಹಿಂದೆ ಒಂದು ಮಾದರಿ ಇದೆಯೇ ಅಥವಾ ಅವು ಯಾದೃಚ್ಛಿಕ ಆಗಿವೆಯೇ ಎಂದು ಖಚಿತಪಡಿಸಿಕೊಳ್ಳುವ ಅಗತ್ಯವನ್ನು ಒತ್ತಿಹೇಳಿದೆ. ಅಲ್ಲದೆ ಎಲ್ಲಾ ರಾಜ್ಯಗಳಿಂದ ಡೇಟಾವನ್ನು ಒಟ್ಟುಗೂಡಿಸುವಂತೆ ಕೇಂದ್ರವನ್ನು ಕೇಳಿದೆ.

ಕೇಂದ್ರದ ಪರವಾಗಿ ಹಾಜರಾದ



ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ, ಕೆಲವು ರಾಜ್ಯಗಳು ಕಾಣೆಯಾದ ಮಕ್ಕಳು ಮತ್ತು ಕಾನೂನು ಕ್ರಮಗಳ ಕುರಿತು ತಮ್ಮ ಡೇಟಾವನ್ನು ನೀಡಿವೆ. ಆದರೆ ಸುಮಾರು ಒಂದು ಡಜನ್ ರಾಜ್ಯಗಳು ತಮ್ಮ ಡೇಟಾವನ್ನು ನೀಡಿಲ್ಲ ಎಂದು ಹೇಳಿದರು.

ಕೇಂದ್ರ ಸರ್ಕಾರ ಸಂಪೂರ್ಣ ಡೇಟಾವನ್ನು ಪಡೆದ ನಂತರವೇ ವಿಶ್ಲೇಷಣೆ ಮಾಡಬಹುದು ಎಂದು ಐಶ್ವರ್ಯಾ ಭಾಟಿ ಹೇಳಿದರು. ಮಕ್ಕಳು ಕಾಣೆಯಾಗುವ ಈ ಘಟನೆಗಳ ಹಿಂದೆ ರಾಷ್ಟ್ರವ್ಯಾಪಿ ಜಾಲ ಅಥವಾ ರಾಜ್ಯ–ನಿರ್ದಿಷ್ಟ ಗುಂಪು ಇದೆಯೇ ಎಂದು ನಾವು ತಿಳಿದುಕೊಳ್ಳಲು ಬಯಸುತ್ತೇವೆ. ಇದು ಒಂದು ಮಾದರಿಯೇ ಅಥವಾ ಕೇವಲ ಯಾದೃಚ್ಛಿಕ ಘಟನೆಯೇ ಎಂದು ಪೀಠ ಭಾಟಿ ಅವರನ್ನು ಪ್ರಶ್ನಿಸಿದೆ. ರಕ್ಷಿಸಲ್ಪಟ್ಟ ಮಕ್ಕಳನ್ನು ಅಂತಹ ಘಟನೆಗಳಿಗೆ ಯಾರು ಕಾರಣರು ಎಂದು ಖಚಿತಪಡಿಸಿಕೊಳ್ಳಲು ಸಂದರ್ಶಿಸಬೇಕು ಎಂದು ಸುಪ್ರೀಂಕೋರ್ಟ್ ಭಾಟಿಗೆ ಸೂಚಿಸಿತು.

ದತ್ತಾಂಶವನ್ನು ನೀಡದ ರಾಜ್ಯಗಳನ್ನು ಸಹ ಪೀಠ ಟೀಕಿಸಿತು. ಅಗತ್ಯವಿದ್ದರೆ ಕಠಿಣ ಆದೇಶಗಳನ್ನು ■ 6ನೇ ಪುಟಕ್ಕೆ

ಅಧಿಕಾರ ಹಂಚಿಕೆ ಸಂಬಂಧ

ಸಿಎಂ ಸಿದ್ದರಾಮಯ್ಯ–ನನ್ನ ನಡುವೆ ವರಿಷ್ಠರ ಮುಂದೆಯೇ ಚರ್ಚೆಯಾಗಿದೆ

ಬೆಂಗಳೂರು, ಫೆ.10(ಕೆಎಂಶಿ)– ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನನ್ನ ನಡುವೆ ವರಿಷ್ಠರ ಮುಂದೆಯೇ ಚರ್ಚೆ ನಡೆದಿದೆ. ಎಲ್ಲವನ್ನೂ ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.



ದೆಹಲಿ ಪ್ರವಾಸಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಂಚಿಕೆ ವಿಷಯದಲ್ಲಿ ನನಗೆ ಯಾವ ಗೊಂದಲವೂ ಇಲ್ಲ. ಅದು ಬೇರೆಯವರಿಗೆ ಇರಬಹುದು. ನಾನು ಹಾಗೂ ಸಿದ್ದರಾಮಯ್ಯ ಏನು ಮಾತನಾಡಿದ್ದೇವೋ ಅದು ಕದ್ದು–ಮುಚ್ಚಿ ಮಾತನಾಡಿಕೊಂಡಿಲ್ಲ ಎಂದರು. ನಮ್ಮ ಪಕ್ಷದ ವರಿಷ್ಠರು ಎಲ್ಲಾ ಸೇರಿ ಮಾತಾಡಿಕೊಂಡಿದ್ದೇವೆ. ■ 6ನೇ ಪುಟಕ್ಕೆ

ವರಿಷ್ಠರ ತೀರ್ಮಾನವೇ ಅಂತಿಮ; ಬಯಸಿದರೆ ದೆಹಲಿಗೆ ಹೋಗ್ತೇನೆ!

ಬೆಂಗಳೂರು, ಫೆ.10(ಕೆಎಂಶಿ)– ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರದಲ್ಲಿ ಪಕ್ಷದ ವರಿಷ್ಠರ ತೀರ್ಮಾನವೇ ಅಂತಿಮ. ಅವರು ಬಯಸಿದರೆ ಮಾತ್ರ ದೆಹಲಿಗೆ ತೆರಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ. ಶಾಸಕ ಯತೀಂದ್ರಅಧಿಕಾರದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆಂಬ



ಮಾಜಿ ಸಂಸದ ಪ್ರತಾಪ್ ಸಿಂಹ ಅವರಿಗೆ ಬಿಜೆಪಿಯೇ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಿರಲಿಲ್ಲ ಎಂದರು. ಮಾಜಿ ಮುಖ್ಯಮಂತ್ರಿ ದಿವಂಗತ ಕೆಂಗಲ್ ಹನುಮಂತಯ್ಯ ಜನ್ಮ ದಿನಾಚರಣೆ ■ 6ನೇ ಪುಟಕ್ಕೆ

ಮಲೆಮಹದೇಶ್ವರ ಬೆಟ್ಟದಲ್ಲಿ ಪಾದಯಾತ್ರೆ ತೆರಳುತ್ತಿದ್ದ ಬಾಲಕನ ಮೇಲೆ ಚಿರತೆ ದಾಳಿ

ಚಾಮರಾಜನಗರ, ಫೆ.10– ಮಲೆಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ತೆರಳುತ್ತಿದ್ದ ಬಾಲಕನ ಮೇಲೆ ಚಿರತೆ ದಾಳಿ ನಡೆಸಿರುವ ಘಟನೆ ನಡೆದಿದೆ.


ಚನ್ನರಾಯಪಟ್ಟಣದ ಭೂವಳ್ಳಿ ಗ್ರಾಮದ ಶ್ರೇಯಸ್(8) ಎಂಬಾತನ ಮೇಲೆ ಚಿರತೆ ದಾಳಿ ನಡೆಸಿದೆ. ಬಾಲಕನ ಕಿವಿ, ಕೈಗಳಿಗೆ ಗಾಯಗಳಾಗಿದ್ದು, ಅದೃಷ್ಟವಶಾತ್ ಬಾಲಕನನ್ನು ರಕ್ಷಿಸಲಾಗಿದೆ.

ಮಹಾಶಿವರಾತ್ರಿ ಹಿನ್ನೆಲೆಯಲ್ಲಿ ಮಲೆಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಮೂಲಕ ಸಾಗುವ ಭಕ್ತರ



ಸಂಖ್ಯೆ ಹೆಚ್ಚಿದೆ. ಸಹಸ್ರಾರು ಭಕ್ತರು ಪಾದಯಾತ್ರೆ ಮೂಲಕ ಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದಾರೆ. ಅದೇ ರೀತಿ ಬಾಲಕ ಶ್ರೇಯಸ್ ಹಾಗೂ ಕುಟುಂಬದವರು ಕೂಡ ಪಾದಯಾತ್ರೆಯಲ್ಲಿ ಸಾಗುತ್ತಿದ್ದರು.

ಈ ವೇಳೆ ಪೊನ್ನಾಚಿ ಕ್ರಾಸ್‌ನಿಂದ ಮುಂದೆ ಅರಣ್ಯ ಮಾರ್ಗವಾಗಿ ಸಾಗುತ್ತಿದ್ದಾಗ ಹಾಡಹಗಲೇ ಬಾಲಕನ ಮೇಲೆ ಚಿರತೆ ದಾಳಿ ನಡೆಸಿದೆ. ಭಕ್ತರ ಗಲಾಟೆ ಕೇಳುತ್ತಿದ್ದಂತೆ ಚಿರತೆ ಸ್ಥಳದಿಂದ ಓಡಿದೆ. ಅದೃಷ್ಟವಶಾತ್ ಬಾಲಕ ಬಚಾವ್ ಆಗಿದ್ದಾನೆ. ■ 6ನೇ ಪುಟಕ್ಕೆ




ಮುಡಾದಲ್ಲಿ ಶೇ.50:50 ಅನುಪಾತದಡಿ ಅಕ್ರಮ ನಿವೇಶನ ಮಂಜೂರು ಪ್ರಕರಣ

40 ನಿವೇಶನದಾರರಿಗೆ ಲೋಕಾಯುಕ್ತ ನೋಟಿಸ್

● 134 ಪ್ರಕರಣ ದಾಖಲು, 1,055 ನಿವೇಶನ ಅಕ್ರಮ ಮಂಜೂರು ● ವಿಚಾರಣೆಗೆ ಪ್ರತ್ಯೇಕ ದಿನಾಂಕ ನಿಗದಿ ● ಪರಿಹಾರ ಪಡೆದವರಿಗೆ ಮತ್ತೆ ನಿವೇಶನ ● ಮಾರುಕಟ್ಟೆ ಮೌಲ್ಯವಿರುವ ಕಡೆ ನಿವೇಶನ ಮಂಜೂರು

ಮೈಸೂರು, ಫೆ.10(ಬಿಎಲ್‌ಯು)– ಅಕ್ರಮ ನಿವೇಶನ ಮಂಜೂರಾತಿ ಹಗರಣದಲ್ಲಿ ರಾಜಕಾರಣಿಗಳ ನಿದ್ದೆಗೆಡಿಸಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಪ್ರಕರಣ, ಈಗ ಶೇಕಡ 50:50 ಅನುಪಾತದಡಿ ನಿವೇಶನ ಪಡೆದ ಫಲಾನುಭವಿಗಳ ಬೆನ್ನತ್ತಿದೆ. ಮುಡಾ ಹಗರಣದ ಬಗ್ಗೆ ತನಿಖೆ ನಡೆಸುತ್ತಿರುವ ಲೋಕಾಯುಕ್ತರು ವಿಚಾರಣೆಗೆ ಹಾಜರಾಗುವಂತೆ ಶೇಕಡ 50:50 ಅನುಪಾತದಲ್ಲಿ ನಿವೇಶನ ಪಡೆದ 40 ಫಲಾನುಭವಿಗಳಿಗೆ ನೋಟಿಸ್ ಜಾರಿ ಮಾಡಿದ್ದಾರೆ.



ಮುಡಾ ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಸಂಬಂಧಿಸಿದ ರೈತರು ಪರಿಹಾರ ಪಡೆದಿದ್ದರು. ಅದನ್ನು ಮರೆಮಾಚಿ ತರುವಾಯ ಮತ್ತೆ ಶೇಕಡ 50:50 ಅನುಪಾತದಡಿ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ ನಿವೇಶನಗಳನ್ನು ಅಕ್ರಮವಾಗಿ ಮಂಜೂರು ಮಾಡಿಸಿಕೊಂಡಿದ್ದರು. ■ 6ನೇ ಪುಟಕ್ಕೆ

ವರ್ಷಾಂತ್ಯದಲ್ಲಿ ಕೋರ್ಟ್‌ಗೆ ವರದಿ ಸಲ್ಲಿಕೆ

ನಿವೇಶನಗಳ ಅಕ್ರಮ ಮಂಜೂರಾತಿ ಆರೋಪದ ಹಿನ್ನೆಲೆಯಲ್ಲಿ ಈಗಾಗಲೇ 134 ಪ್ರಕರಣಗಳನ್ನು ದಾಖಲಿಸಲಾಗಿದೆ. ಶೇ.50:50 ಅನುಪಾತದಲ್ಲಿ 1,055 ನಿವೇಶನ ಪಡೆದವರನ್ನು ವಿಚಾರಣೆ ಮಾಡಲಾಗುತ್ತಿದೆ. ಈ ಪ್ರಕ್ರಿಯೆ ಕಳೆದ ಎರಡು ತಿಂಗಳ ಹಿಂದೆಯೇ ಆರಂಭವಾಗಿದ್ದು, ಈಗಾಗಲೇ ಕೆಲವು ವಿಚಾರಣೆ ಪೂರ್ಣಗೊಂಡಿದೆ. ಈ ವರ್ಷಾಂತ್ಯದಲ್ಲಿ ವಿಚಾರಣೆ ಪೂರ್ಣಗೊಳ್ಳಲಿದ್ದು, ನಂತರ ನ್ಯಾಯಾಲಯಕ್ಕೆ ಸಮಗ್ರ ವರದಿಯನ್ನು ಸಲ್ಲಿಸಲಾಗುವುದು.

– ಟಿ.ಜೆ.ಉದೇಶ್,
ಲೋಕಾಯುಕ್ತ ಎಸ್ಪಿ, ಮೈಸೂರು.

ನಿವೇಶನ ಖರೀದಿಸಿದವರಲ್ಲಿ ಢವಢವ

ಶೇ.50:50 ಅನುಪಾತದಲ್ಲಿ ನಿವೇಶನ ಖರೀದಿ ಮಾಡಿದವರಿಗೆ ಈಗ ನಡುಕ ಆರಂಭವಾಗಿದೆ. ಯಾಕಾದರೂ ಈ ನಿವೇಶನ ಖರೀದಿ ಮಾಡಿದ್ದೇವೊ ಎಂಬ ಆತಂಕ ಎದುರಾಗಿದೆ. ಶೇ.50:50 ಅನುಪಾತದಲ್ಲಿ ಅಕ್ರಮವಾಗಿ ನಿವೇಶನ ಮಂಜೂರು ಮಾಡಿಸಿಕೊಂಡ ಮೂಲ ಭೂ ಮಾಲೀಕರು ನಿವೇಶನಗಳನ್ನು ಕೈಗೆ ಸಿಕ್ಕಿದಷ್ಟು ಹಣಕ್ಕೆ ಮಾರಾಟ ಮಾಡಿದ್ದಾರೆ. ಇದು ಅಕ್ರಮ ಮಂಜೂರಾತಿ ಎಂದು ತಿಳಿಯದ ಹಲವರು ಕಡಿಮೆ ಬೆಲೆಗೆ ನಿವೇಶನ ದೊರೆಯುತ್ತಿದೆಯಲ್ಲ ಎಂಬ ಲೆಕ್ಕಾಚಾರದಿಂದ ಖರೀದಿ ಮಾಡಿದ್ದರು. ಆದರೆ ಇದು ಅಕ್ರಮ ಮಂಜೂರಾತಿ ಎಂದು ತರು ವಾಯ ಮನವರಿಕೆಯಾಗಿದೆ. ಈ ಪ್ರಕರಣದ ಬಗ್ಗೆ ಲೋಕಾಯುಕ್ತರು ವರ್ಷಾಂತ್ಯದಲ್ಲಿ ವಿಚಾರಣೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಿದ್ದಾರೆ. ನಂತರ ಹೈಕೋರ್ಟ್‌ನಲ್ಲಿ ವಿಚಾರಣೆ ಪೂರ್ಣಗೊಂಡು ಯಾವಾಗ ತೀರ್ಪು ಪ್ರಕಟವಾಗುತ್ತೊ ಎಂದು ನಿವೇಶನ ಖರೀದಿಸಿದವರು ಚಿಂತೆಗೀಡಾಗಿದ್ದಾರೆ.



ನಕ್ಕರೆ ಅದೇ ಸ್ವರ್ಗ

ಬಾಸ್ : ನೆನ್ನೆ ಯಾಕ್ರಿ ಕೆಲ್ಸಕ್ಕೆ ಬರ್ಲಿಲ್ಲ?

ಸಿಬ್ಬಂದಿ: ಕ್ಯಾಲೆಂಡರ್‌ನ ಡೇಟ್ ನಂಬರ್ ಕೆಂಪು ತೋರಿಸ್ತಿತ್ತು, ಹಾಗಾಗಿ ರಜೆ ಅಂತಾ ತಿಳ್ಕೊಂಡೆ. ಸಂಜೆ ಗೊತ್ತಾಯ್ತು ಹೊಸ ಕ್ಯಾಲೆಂಡರ್ ಅಂತ ಪೂಜೆಗೆ ನಮ್ಮಜ್ಜಿ ಕುಂಕುಮ ಹಚ್ಚಿದ್ರು ಅಂತ!??

ಮೈಸೂರು ಮಿತ್ರ

ಬುಧವಾರ, ಫೆಬ್ರವರಿ 11, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಒಳ್ಳೆಯತನ ಶಾಪವೋ... ವರದಾನವೋ... ಗೊತ್ತಿಲ್ಲ. ಆದರೆ ಕೊನೆಗೆ ಕೆಟ್ಟವನೆಂಬ ಅಪವಾದ ಸಿಗುವುದು ಮಾತ್ರ ಖಂಡಿತ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಜಲ ಶೋಧಿಸಿ ನೀರು ತರಬೇಕು, ಕುಲ ಶೋಧಿಸಿ ಹೆಣ್ಣು ತರಬೇಕು.

ನಿಮ್ಮ ಪತ್ರಗಳು

ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ, ಲಲಿತಾದ್ರಿನಗರದ ನಿವೇಶನ ಕ್ರಯದಾರರಿಗೆ ರಿಲೀಫ್ ಯಾವಾಗ?

ಮಾನ್ಯರೆ,

ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ವಸಂತನಗರ, ಶಾಂತವೇರಿ ಗೋಪಾಲ ಗೌಡ ನಗರ, ಲಲಿತಾದ್ರಿನಗರ ನಿರ್ಮಾಣಗೊಂಡು ಸುಮಾರು 20 ವರ್ಷಗಳೇ ಕಳೆದಿವೆ. ಆದರೆ, ಸದರಿ ಬಡಾವಣೆಗಳಲ್ಲಿನ ನಿವೇಶನಗಳನ್ನು ಮೂಲ ಮಂಜೂರಾತಿದಾರರು ಬೇರೆಯವರಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದು, ಕ್ರಯದಾರರಿಗೆ ಇದುವರೆಗೂ ಕ್ರಯಪತ್ರ (Title Deed) ನೀಡಲು ಮುಡಾ ಮನಸ್ಸು ಮಾಡಿಲ್ಲ. ಕೇಳಿದರೆ ಸರ್ಕಾರಕ್ಕೆ ಅನುಮತಿಗಾಗಿ ಪತ್ರ ಬರೆಯಲಾಗಿದ್ದು, ಇನ್ನೂ ಅನುಮತಿ ಸಿಕ್ಕಿಲ್ಲ ಎಂದು ಸಬೂಬು ನೀಡುತ್ತಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರವು ಅಧಿಸೂಚನೆ ಸಂಖ್ಯೆ: UDD 30 MNX 2023 ದಿನಾಂಕ: 01.02.2024ರಲ್ಲಿ ದಿನಾಂಕ:31-12-2022ಕ್ಕಿಂತ ಹಿಂದೆ ಮೂಲ ಮಂಜೂರಾತಿದಾರರು ಕ್ರಯಮಾಡಿದ್ದಲ್ಲಿ ಕ್ರಯ ಮೊತ್ತದ ಶೇಕಡ 25 ದಂಡ ಪಾವತಿಸಿಕೊಂಡು ಕ್ರಯಪತ್ರ (Title Deed) ನೀಡಲು ಸರ್ಕಾರ ಅವಕಾಶ ಕಲ್ಪಿಸಿದ್ದು, ಮೈಸೂರು ಜನತೆಗೆ ದ್ರೋಹ ಬಗೆದಿದೆ. ಈ ದ್ರೋಹ ಸರಿಪಡಿಸಲು ಮೈಸೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ ವರದಾನ ವಾಗಿದೆ. ಸದರಿ ಕಾಯ್ದೆಯಲ್ಲಿ ಈ ಅವಕಾಶ ಅಳವಡಿಸಿಕೊಂಡಲ್ಲಿ ಜನತೆಗೆ ದಾಖಲೆ ಲಭ್ಯವಾಗುವುದು ಹಾಗೂ ಪ್ರಾಧಿಕಾರಕ್ಕೆ ದಂಡದ ರೂಪದಲ್ಲಿ ನೂರಾರು ಕೋಟಿ ಆದಾಯ ಬರಲಿದೆ. ಈ ಸಮಸ್ಯೆ ಬಗೆಹರಿಸಲು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ರಕ್ಷಿತ್ ಕೆ.ಆರ್., ಕಮಿಷನರ್ ಹಾಗೂ ಜಾನ್ಸನ್ .ಕೆ, ಕಾರ್ಯದರ್ಶಿ ಅವರು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಲ್ಲಿ ಸಮಸ್ಯೆ ಬಗೆಹರಿಸಬಹುದಾಗಿದೆ.

ಇದರಿಂದ ಇ-ಖಾತಾ ಸಮಸ್ಯೆ, ಕ್ರಯಪತ್ರ (Title Deed) ಸಮಸ್ಯೆ ಬಗೆಹರಿಸಿಕೊಂಡು ನೆಮ್ಮದಿಯ ಜೀವನ ನಡೆಸಲು ವಸಂತ ನಗರ, ಶಾಂತವೇರಿ ಗೋಪಾಲಗೌಡ ನಗರ, ಲಲಿತಾದ್ರಿನಗರ ನಿವಾಸಿಗಳಿಗೆ ಅನುಕೂಲವಾಗಲಿದೆ.

-ನವೀನ್‌ಕುಮಾರ್ ಎಂ, ಶಾಂತವೇರಿ ಗೋಪಾಲಗೌಡನಗರ, ಮೈಸೂರು.

ಬಾಲಕಿ ಹತ್ಯೆ ಆರೋಪಿಗಳಿಗೆ ಹೈಕೋರ್ಟ್ ಗಲ್ಲು ಶಿಕ್ಷೆ, ಸ್ವಾಗತಾರ್ಹ

ಮಾನ್ಯರೇ,

ಫೆ. 10 ರಂದು 'ಮೈಸೂರು ಮಿತ್ರ' ದಲ್ಲಿ ಪ್ರಕಟವಾದ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಮೂವರು ಆರೋಪಿಗಳಿಗೆ ಗಲ್ಲು ಶಿಕ್ಷೆ ವಿಧಿಸಿದ ಹೈಕೋರ್ಟ್ ತೀರ್ಪು ನಿಜಕ್ಕೂ ಸ್ವಾಗತಾರ್ಹ.

2024 ರಲ್ಲಿ ನಡೆದ ಈ ಪ್ರಕರಣದಲ್ಲಿ ಏಳು ವರ್ಷದ ಅಪ್ರಾಪ್ತ ಬಾಲಕಿಯ ಮೇಲೆ ಮೂವರು ದುರುಳರು ಸಾಮೂಹಿಕ ಅತ್ಯಾಚಾರವೆಸಗಿ ನಂತರ ಆಕೆಯನ್ನು ಅಮಾನುಷವಾಗಿ ಕೊಲೆ ಮಾಡಿದ ಪ್ರಕರಣದಲ್ಲಿ ಮಂಗಳೂರಿನ ನ್ಯಾಯಾಲಯದಲ್ಲಿ ನಡೆದ ಪ್ರಕರಣ ಮತ್ತು ತೀರ್ಪನ್ನು ಪರಿಗಣಿಸಿ ರಾಜ್ಯ ಹೈಕೋರ್ಟ್ ಮೂವರಿಗೆ ಗಲ್ಲು ಶಿಕ್ಷೆ ವಿಧಿಸಿದೆ. ಈ ರೀತಿಯ ತೀರ್ಪುಗಳು ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗದ ಮತ್ತು ನ್ಯಾಯ ವ್ಯವಸ್ಥೆಯ ಬಗ್ಗೆ ಅಸಮಧಾನ ವ್ಯಕ್ತಪಡಿಸುತ್ತಿದ್ದ ಬಹಳಷ್ಟು ಮಂದಿಗೆ ಸಮಾಧಾನ ತಂದಿದೆ. ಆದರೆ, ಇಂತಹ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಮುಂದೆ ಸರ್ವೋಚ್ಚ ನ್ಯಾಯಾಲಯಕ್ಕಾಗಲೀ ಅಥವಾ ನಂತರದಲ್ಲಿ ರಾಷ್ಟ್ರಪತಿಗಳ ಕ್ಷಮೆ ಯಾಚಿಸುವುದಾಗಲೀ ಆಗದೇ ಇರುವಂತಹ ನಿರ್ಭೀತ ತೀರ್ಪುಗಳು, ಅದರಲ್ಲಿಯೂ ಪುನರ್‌ಮೇಲ್ಮನವಿಗೆ ಅವಕಾಶವಿಲ್ಲದಂತಹ ತೀರ್ಪುಗಳು ಬರುವಂತಾಗಲಿ ಮತ್ತು ಅಂಥಹ ತೀರ್ಪುಗಳಿಗೆ ನ್ಯಾಯ ವ್ಯವಸ್ಥೆಯಲ್ಲಿ ಕಾನೂನಿಗೆ ತಿದ್ದುಪಡಿಗಳಾಗಬೇಕಾದಲ್ಲಿ ಅದನ್ನೂ ಕೂಡಾ ಮಾಡುವಂತೆ ಕ್ರಮಕೈಗೊಳ್ಳಲಿ ಎನ್ನುವುದೇ ಶ್ರೀಸಾಮಾನ್ಯನ ಆಶಯ. ಅದರಿಂದ ನೇಣುಕುಣಿಕೆಯಿಂದ ತಪ್ಪಿಸಿಕೊಳ್ಳುವ ಹುನ್ನಾರಗಳಿಗೆ ಬ್ರೇಕ್ ಆಗಲಿ.

-ವಿಜಯ್ ಹೆಮ್ಮಿಗೆ, ಮೈಸೂರು

ಡೀಪ್‌ಟೆಕ್ ಯೋಜನೆ ಸ್ವಾಗತಾರ್ಹ

ಮಾನ್ಯರೆ,

ಡೀಪ್ ಟೆಕ್ ಅನುಷ್ಠಾನದ ಸವಾಲುಗಳು ಸರ್ಕಾರದ 600 ಕೋಟಿ ರೂ. ಡೀಪ್ ಟೆಕ್ ಯೋಜನೆ ಸ್ವಾಗತಾರ್ಹ. ಆದರೆ ಕೇವಲ ಒಂದು ತಿಂಗಳಲ್ಲಿ 11 ಸಂಸ್ಥೆಗಳಿಗೆ 110 ಕೋಟಿ ಹಂಚಿರುವುದು ಅನುದಾನದ ಪಾರದರ್ಶಕತೆಯ ಬಗ್ಗೆ ಪ್ರಶ್ನೆ ಮೂಡಿಸುತ್ತದೆ. ಈ ಹಣ ಸಂಶೋಧನೆಗೆ ಬಳಕೆಯಾಗುತ್ತಿದೆಯೇ ಅಥವಾ ಕೇವಲ ಆಡಳಿತಾತ್ಮಕ ವೆಚ್ಚಕ್ಕೋ ಎಂಬ ಸ್ಪಷ್ಟತೆಯಿಲ್ಲ.ಬೆಂಗಳೂರನ್ನು ಕೇಂದ್ರೀಕರಿಸಿದ ಇಂತಹ ಯೋಜನೆಗಳು ರಾಜ್ಯದ ಇತರೆ ಜಿಲ್ಲೆಗಳಲ್ಲಿ ಡಿಜಿಟಲ್ ಕಂದಕ ನಿರ್ಮಿಸುತ್ತಿವೆ. 4,600 ಚಾರ್ಜಿಂಗ್ ಕೇಂದ್ರಗಳ ನಿರ್ವಹಣೆ ಮತ್ತು ವಿದ್ಯುತ್ ಜಾಲದ ಗುಣಮಟ್ಟ ಸುಧಾರಿಸದಿದ್ದರೆ 10,000 ಇವಿ ಬಸ್‌ಗಳ ನಿರ್ವಹಣೆ ಹೇಗೆ ಸಾಧ್ಯ. ಅಲ್ಲದೆ 20 ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಗಿಂತ ಪ್ರಸ್ತುತ ಇರುವ ಕಾಲೇಜುಗಳಲ್ಲಿ ಪರಿಣಿತ ಬೋಧಕರ ಕೊರತೆ ನೀಗಿಸುವುದು ತುರ್ತು ಅಗತ್ಯ. ತಂತ್ರಜ್ಞಾನ ಕೇವಲ ಅಂಕಿಅಂಶಗಳಿಗೆ ಸೀಮಿತವಾಗದೆ ಜನಸಾಮಾನ್ಯರ ಮೂಲಸೌಕರ್ಯ ವೃದ್ಧಿಸುವಂತಿರಲಿ. ಸಾರ್ವಜನಿಕ ಹಣದ ಪ್ರತಿ ಪೈಸೆಗೂ ಉತ್ತರದಾಯಿತ್ವ ಇರಲಿ. **-ಡಾ.ವಿಜಯಕುಮಾರ ಎಚ್.ಕೆ, ಮೈಸೂರು.**

ಕೇರಳದಲ್ಲಿ ಉಚಿತ ಶಿಕ್ಷಣ ಶ್ಲಾಘನೀಯ

ಮಾನ್ಯರೆ,

ಇಂದು ಶಿಕ್ಷಣ ಎನ್ನುವುದು ವ್ಯಾಪಾರೀಕರಣವಾಗಿದೆ. ಬಡವರಿಗೆ ನಿಲುಕದ ವ್ಯವಸ್ಥೆ ನಿರ್ಮಾಣವಾಗಿದೆ. ಮಕ್ಕಳ ಭವಿಷ್ಯಕ್ಕಾಗಿ ಕೆಲವು ಪೋಷಕರು ತಮ್ಮ ಹಳ್ಳಿಗಳನ್ನು ಬಿಟ್ಟು ನಗರಕ್ಕೆ ಬಂದು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ದುಡಿಯುತ್ತಿದ್ದಾರೆ. ಇಂತಹ ವರ್ತಮಾನ ಕಾಲದಲ್ಲಿ ಕೇರಳ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ 1ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಅಪಘಾತ ವಿಮಾ ಸೌಲಭ್ಯ, ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಕಲ್ಪಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಪದವಿ ಹಂತದ ಶಿಕ್ಷಣದ ಹೊರೆಯನ್ನು ಇಳಿಸಿದೆ. ದೇಶದಲ್ಲೇ ಪ್ರಪ್ರಥಮ ಬಾರಿಗೆ ಪದವಿ ಹಂತದವರೆಗೂ ಉಚಿತ ಶಿಕ್ಷಣ ಜಾರಿ ಮಾಡಿರುವ ಕೇರಳದ ಸಿಎಂ ಪಿಣರಾಯಿ ವಿಜಯನ್ ದಿಟ್ಟ ಹೆಜ್ಜೆ ಶ್ಲಾಘನೀಯ.

- ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಮೌನ ಅರಿವಿಗೆ ದಾರಿ...

ಮಾತಿಗಿಂತ ಮೌನ ಶ್ರೇಷ್ಠ. Speech is silver, silence is gold. ಮಾತು ಬೆಳ್ಳಿ, ಮೌನ ಬಂಗಾರ. ಸಭೆಯಲ್ಲಿ ಗಂಟೆಗಟ್ಟಲೇ ಮಾತನಾಡಿದವನಿಗಿಂತ ಮೌನ ವಹಿಸಿ ಕೇಳಿದವನು ಜ್ಞಾನಿಯಾಗುತ್ತಾನೆ. ಪ್ರಕೃತಿಯನ್ನು ಮೌನದಿಂದ ವೀಕ್ಷಿಸುತ್ತಿದ್ದರೆ ಅದೇ ಎಷ್ಟೋ ಪಾಠಗಳನ್ನು ಕಲಿಸುತ್ತದೆ. ಮುದ್ದುರಾಮ ಹೇಳುತ್ತಾನೆ-


ಒಬ್ಬನೇ ನೀ ಸಂಜೆ ಕಡಲತೀರದಿ ನಡೆಯೊ
ತೋಟದಲಿ ಕುಳಿತು ನೀ ನೋಡು ಹೂ ಚೆಲುವ.
ಮೌನವೊಂದರಮನೆಯೊ! ಇರು ಅಲ್ಲಿ ಹಾಯಾಗಿ
ಮೌನ ಅರಿವಿಗೆ ದಾರಿ – ಮುದ್ದುರಾಮ

ಇಬ್ಬರು ಸೇರಿದರೆ ಮಾತಿನ ಮಳೆ ಸುರಿಯಲಾರಂಭಿಸುತ್ತದೆ. ಮೂವರು ಸೇರಿದರೆ ಹರಟೆ ಶುರುವಾಗುತ್ತದೆ. ನಾಲ್ವರು ಸೇರಿಬಿಟ್ಟರೆ ಗೊಂದಲ, ಗೌಜು, ಚಿಂತನೆ ಮಾಡಬೇಕಾಗಿದ್ದರೆ ಒಬ್ಬನೇ ಇದ್ದರೆ ಒಳ್ಳೆಯದು. ಇದನ್ನೇ ಭಗವದ್ಗೀತೆ ಏಕಾಕೀ ಯತ ಚಿತ್ತಾತ್ಮಾ ಎಂದು ಕರೆದಿದೆ. ಒಬ್ಬನೇ ಸಂಜೆ ಕಡಲ ತೀರದಲ್ಲಿ ನಡೆಯಬೇಕು. ಸಾಗರದ ಭೀಷಣ ವಿಶಾಲತೆ ಗೋಚರವಾಗುತ್ತದೆ. ಮೇಲೆ ವಿಶಾಲಾಕಾಶ. ನಸುಗತ್ತಲಾದರೆ ನಭೋಮಂಡಲದಲ್ಲಿ ಚಂದ್ರ, ಗ್ರಹಗಳು, ನಕ್ಷತ್ರಗಳು, ತಾರಾಪುಂಜಗಳು. ಅವುಗಳೇ ವಿಶ್ವದ ಪಾಠವನ್ನು ಹೇಳುತ್ತವೆ.

ಹಾಗೆಯೇ ತೋಟದಲ್ಲಿ ನಿಶ್ಶಬ್ಧವಾಗಿ ಕುಳಿತು ನಾಗರಿಕ ಜೀವನದ ಜಂಜಾಟವನ್ನು ಮರೆತು ಹೂವಿನ ಚೆಲುವನ್ನು ನೋಡುತ್ತಿದ್ದರೆ ಎಷ್ಟು ಪಾಠಗಳನ್ನು ಕಲಿಯಬಹುದು. ಕಲ್ಲು ಮಣ್ಣುಗಳ ನೆಲ. ಅವುಗಳಲ್ಲಿ ಬೆಳೆದ ಗಿಡಕ್ಕೆ ಅವುಗಳಲ್ಲಿಲ್ಲದ ಹಸಿರು ಬಣ್ಣ ಹೇಗೆ ಬಂತು? ಬಣ್ಣದ ಹೂವನ್ನು ಸೃಷ್ಟಿಸುವ ಶಕ್ತಿಯನ್ನು ಗಿಡಕ್ಕೆ ಕೊಟ್ಟವರಾರು? ಒಂದೊಂದ ಗಿಡದ ಹೂವಿನ ಬಣ್ಣ, ಆಕಾರ ಬೇರೆ ಬೇರೆ. ಅದೇಕೆ? ಮಲ್ಲಿಗೆಯಂತೆ ಪಾರಿಜಾತವಿಲ್ಲ, ಪಾರಿಜಾತದಂತೆ ಸಂಪಿಗೆ ಇಲ್ಲ. ಇಷ್ಟು ವೈವಿಧ್ಯವನ್ನು ತಂದವರು ಯಾರು? ಅರಿವೇ ಇಲ್ಲದ ಪ್ರಕೃತಿ ಇದೆಲ್ಲವನ್ನು ಮಾಡಿದ್ದು ಹೇಗೆ? ಈ ನೂರಾರು ಪ್ರಶ್ನೆಗಳೆಂಬ ಭಟರು ತುಂಬಿದ ಅರಮನೆಯೇ ಮೌನ. ಮಾತನಾಡಬೇಕು, ಭಾಷಣ ಮಾಡಬೇಕು ಎನ್ನುವ ಚಪಲತೆಯನ್ನು ಬಿಟ್ಟು ಮೌನವನ್ನಾಶ್ರಯಿಸಬೇಕು. ಅಲ್ಲಿ ಹಾಯಾಗಿದ್ದರೆ ಆ ಮೌನವೇ ಅರಿವಿನ ದಾರಿಯಾಗುತ್ತದೆ. ಮಾತು, ಅದರಲ್ಲಿ ಒಬ್ಬರು ಇನ್ನೊಬ್ಬರಿಗಿಂತ ಚೆನ್ನಾಗಿ ಮಾತನಾಡಿದ ಎನಿಸಿಕೊಳ್ಳಬೇಕೆಂಬ ಪೈಪೋಟಿ, ಇತ್ಯಾದಿಗಳಿಗಿಂತ ಮೌನ ಉತ್ತಮ ಗುರು ಎಂಬುದು ಮುದ್ದುರಾಮನ ನುಡಿ.

ರವಿ ಚಂದ್ರ ನಕ್ಷತ್ರ ಬಿಳಿಮುಗಿಲ ಆಕಾಶ
ನದಿ ಕಡಲು ಗಿಡ ಬಳ್ಳಿ ಮಾತನಾಡುವುದೇ?
ಕೊಡುಗೆ ಎಲ್ಲೆಲ್ಲಿದೆಯೊ ಮಾತಲ್ಲಿ ಬಲು ಕಡಿಮೆ
ಮೌನ ಶಕ್ತಿಯ ಮೂಲ ಮುದ್ದುರಾಮ.

ಸೂರ್ಯ, ಚಂದ್ರ, ನಕ್ಷತ್ರ, ಬೆಳ್ಳಿ ಮೋಡ, ಮುಗಿಲು, ಹೊಳೆ, ಕಡಲು, ಗಿಡ, ಬಳ್ಳಿ-ಇವೆಲ್ಲ ಮಾತುಗಳನ್ನಾಡದೆ ಸೇವೆಯನ್ನು ಮಾಡುತ್ತಿವೆ. ಅವು ಮೌನದ ವ್ರತವನ್ನು ಹಿಡಿದಿವೆ. ಸೂರ್ಯ ಬೆಳಕನ್ನು,



ಚಂದ್ರ ಬೆಳದಿಂಗಳನ್ನು, ನಕ್ಷತ್ರ ಶಾಂತಿಯನ್ನು, ಬಿಳಿಮುಗಿಲು ತಂಪನ್ನು, ಆಕಾಶ ಅವಕಾಶವನ್ನು, ನದಿ ನೀರನ್ನು, ಕಡಲು ಮುತ್ತುರತ್ನಗಳನ್ನು, ಗಿಡ ನೆರಳನ್ನು, ಬಳ್ಳಿ ಹೂವನ್ನು ಕೊಡುತ್ತಿವೆ. ಕೊಡುಗೆ ಎಲ್ಲೆಲ್ಲಿದೆಯೋ ಅಲ್ಲಿ ಮಾತು ಕಡಿಮೆ. ಅವೆಲ್ಲ ಅಷ್ಟು ಶಕ್ತಿಯ ಮೂಲವಾಗಿರುವುದಕ್ಕೆ ಕಾರಣ ಅವುಗಳ ಮೌನ.

ಪ್ರಪಂಚದಲ್ಲಿಂದು ಎಲ್ಲೆಲ್ಲೂ ಸದ್ದುಗದ್ದಲ. ಗುಂಪು ಗುಂಪಾಗಿ ಸೇರಿದ ಜನ ಮಾತಿನ ಮಳೆ ಸುರಿಸುತ್ತಾರೆ. ಮತ್ತೆ ನೂರಾರು ವಾಹನಗಳ ಓಡಾಟದಬ್ಬರ. ಜನರ ಮಾತಿನ ಗಲಾಟೆ ಸಾಲದೆಂಬಂತೆ ಧ್ವನಿವರ್ಧಕಗಳ ಅಬ್ಬರ. ಪ್ರಚಾರ ಮಾಡುವವರ ಏರಿದ ದನಿಯ ಕೂಗಾಟ. ಎಲ್ಲೆಲ್ಲೂ ಸಂತೆ, ಪರಿಷೆ, ಜಾತ್ರೆ, ಶಬ್ಧವೇ ಶಬ್ಧ. ಹೀಗಾಗಿ ಶಾಂತಿ ಕನಸಿನ ಗಂಟು. ಮುದ್ದುರಾಮ ಹೇಳುತ್ತಾನೆ -

ಮುಗಿಲ ಮಾರಿಯ ಹಾಗೆ ಸದ್ದು ಮಳೆ ಬೀಳುತಿರೆ
ಮನೆ ಮನದಲ್ಲೆಲ್ಲಿದೆಯೋ ನೀರವತೆ ಶಾಂತಿ?
ಗದ್ದಲವ ಹೊರ ಹಾಕಿ ಸ್ವಾಗತಿಸು ನಿಶ್ಶಬ್ಧ
ಮೌನಧಾರಣೆ ಮಿಗಿಲು ಮುದ್ದುರಾಮ.

ಆಕಾಶದಲ್ಲಿ ಮೇಘಸ್ಫೋಟವಾಗಿ ಮಾರಿ ಮಳೆ ಬೀಳುವಂತೆ ನಮ್ಮ ಮೇಲೆ ಸತತವಾಗಿ ಸದ್ದಿನ ಮಳೆ ಬೀಳುತ್ತಿರುವಾಗ ಮನಸ್ಸೆಂಬ ಮನೆಯಲ್ಲಿ ಶಾಂತಿ ಇರುವುದು ಹೇಗೆ ಸಾಧ್ಯ? ಇಂದು ಜಲಮಾಲಿನ್ಯ, ಆಹಾರ ಮಾಲಿನ್ಯ, ವಾಯುಮಾಲಿನ್ಯ ಇರುವಂತೆ ಶಬ್ದಮಾಲಿನ್ಯ ಜನರಿಗೆ ದೊಡ್ಡ ಸಮಸ್ಯೆಯಾಗಿದೆ. ಗಣೇಶನ ಹಬ್ಬ ಬಂತೆಂದರೆ ಬೀದಿ ಬೀದಿಯಲ್ಲೂ ಚಲನಚಿತ್ರ ಗೀತೆಗಳ ಹಾವಳಿ. ದೀಪಾವಳಿ ಹಬ್ಬದಲ್ಲಿ ಎಲ್ಲೆಲ್ಲೂ ಎದೆಯನ್ನು ನಡುಗಿಸುವ ಪಟಾಕಿಗಳ ಘೋರ ಶಬ್ಧ. ಚುನಾವಣೆಯ ಕಾಲದಲ್ಲಿ ಪಕ್ಷಗಳ ಪ್ರಚಾರದ ಗಡಿಬಿಡಿ. ವಾಹನಗಳ ಹಾರನ್ ಶಬ್ಧ. ಹೀಗಿರುವಾಗ ನೀರವತೆಗೆ ಸ್ಥಾನವೆಲ್ಲಿ? ಶಾಂತಿಗೆ ಸ್ಥಳವೆಲ್ಲಿ? ಪ್ರತಿ ಯೊಬ್ಬರೂ ಮಾತನ್ನು ಕಡಿಮೆ ಮಾಡಿ ಮೌನ ವಹಿಸಿದರೆ ಶಾಂತಿಗೆ ಸ್ವಲ್ಪ ತಾವು ಸಿಕ್ಕೀತು. ಗದ್ದಲವನ್ನು ಹೊರ ಹಾಕಿ ನಿಶ್ಶಬ್ಧತೆಯನ್ನು ಸ್ವಾಗತಿಸೋಣ. ಸಂಸ್ಕೃತದಲ್ಲಿ 'ಮಹೀಯಾಂಸ : ಪ್ರಕೃತ್ಯಾ ಮಿತ ಭಾಷಿಣಃ' ಎಂಬ ಮಾತಿದೆ. ದೊಡ್ಡವರು ಸ್ವಭಾವದಿಂದಲೇ ಮಿತಭಾಷಿಗಳು ಎಂದು ಅದರ ಅರ್ಥ. ಮಿತವಾದ ಮಾತು ದೊಡ್ಡವರ ಲಕ್ಷಣ. ಆದ್ದರಿಂದ ಮೌನಧಾರಣೆ ಮಾತಿಗಿಂತ ಮಿಗಿಲಾದದ್ದು.

ಪ್ರಕೃತಿಯಲ್ಲಿ ಒಳ್ಳೆಯ ಕೆಲಸಗಳಾಗುವಾಗ ಮೌನವಿರುವುದನ್ನು ಮುದ್ದುರಾಮ ಹೂವಿನ ಉದಾಹರಣೆಯಿಂದ ತೋರಿಸುತ್ತಾನೆ.-

ಸದ್ದು ಮಾಡದೆ ಮೊಗ್ಗು ತಾನೆ ಹೂವಾಗುವುದು
ಕಂಪನೆರವುದು ಹೂವು ಇನಿತು ತೋರ್ಗೊಡದೆ
ಆ ಮಲರ ಪರಿಮಳವ ಮೆಲ್ಲನೊಯ್ವುದು ಎಲರು
ಇದೆ ಹಿರಿಮೆ ಮೌನದಲಿ ಮುದ್ದುರಾಮ

ಗಿಡದಲ್ಲಿ ಮೊಗ್ಗು ಅರಳುವಾಗ ಸದ್ದಿಲ್ಲದೆ ಮೌನದಿಂದ ಅರಳಿ ಹೂವಾಗುವುದು. ಹಾಗೆ ಅರಳಿದ ಹೂವು ಸನಿಹದಲ್ಲಿರುವ ಎಲ್ಲರಿಗೂ ಕಂಪನ್ನು ಬೀರುತ್ತದೆ. ನಾನು ಪರಿಮಳವನ್ನು ಲೋಕಕ್ಕೆ ಹಂಚುತ್ತಿದ್ದೇನೆ ಎಂದು ಕೂಗಿ ಹೇಳಿ ಗದ್ದಲವನ್ನು ಮಾಡುವುದಿಲ್ಲ. ಹಾಗೆಯೇ ಹೂವಿನ ಸೌರಭವನ್ನು ನಾನಾ ದಿಕ್ಕುಗಳಿಗೆ ಒಯ್ಯುವ ಗಾಳಿ ಸದ್ದಿಲ್ಲದೆ ತನ್ನ ಕೆಲಸವನ್ನು ಮಾಡುವುದು. ಈ ಮೌನ ಕರ್ತವ್ಯದಲ್ಲೇ ಹಿರಿಮೆಯಿದೆ. ಮನುಷ್ಯರು ಮಾತ್ರ ಕೆಲಸಕ್ಕಿಂತ ಅದರ ಪ್ರಚಾರದ ಸದ್ದಿಗೇ ಹೆಚ್ಚು ಗಮನ ಕೊಡುತ್ತಾರೆ. ಹೆಚ್ಚು ವೆಚ್ಚ ಮಾಡುತ್ತಾರೆ. ಮಾಡುವುದಕ್ಕಿಂತ ಹೇಳಿಕೊಳ್ಳುವುದು ಹೆಚ್ಚು ಮಾನವರಲ್ಲಿ – ಎಂಬುದು ಎಲ್ಲರಿಗೂ ತಿಳಿದ ವಿಷಯ.

ಅನೇಕ ಜನರಿಗೆ ಸಭೆಗಳಲ್ಲಿ ಭಾಗವಹಿಸಿ ಹಾರ ತುರಾಯಿ ಹಾಕಿಸಿಕೊಳ್ಳುವ ತವಕ. ತಾವು ವೇದಿಕೆಯ ಮೇಲೆ ಕಾಣಿಸಿಕೊಳ್ಳಬೇಕು, ಸ್ವಾಗತ ಭಾಷಣವನ್ನೋ, ಪರಿಚಯ ಭಾಷಣವನ್ನೋ ಮಾಡುವವರು ತಮ್ಮನ್ನು ಹೊಗಳಬೇಕು, ಸಭಾಸದರು ಚಪ್ಪಾಳೆ ಹೊಡೆದು ಗೌರವವನ್ನು ಸೂಚಿಸಬೇಕು ಎಂದು ಅಂತಹ ಜನರು ಅಪೇಕ್ಷೆಪಡುತ್ತಾರೆ. ಆದರೆ ಅದೆಲ್ಲ ಸುಳ್ಳು ಪ್ರಶಂಸೆ. ಅದರಲ್ಲಿ ಸತ್ಯವಾಗಲಿ ಸತ್ತ್ವವಾಗಲಿ ಇರುವುದಿಲ್ಲ. ಅಲ್ಲಿ ಗೌರವವನ್ನು ತತ್ಕಾಲದಲ್ಲಿ ಪಡೆದರೂ ಅದರಿಂದ ನೆಮ್ಮದಿ ದೊರಕದು. ಅಂತಹವರಿಗೆ ಮುದ್ದುರಾಮನ ಹಿತವಚನ-

ಎಲ್ಲೊ ಹಾರ ತುರಾಯಿ ನೂರು ಭಜನೆ ಪರಾಕು
ಅಲ್ಲಿ ನೆಮ್ಮದಿಯೆಲ್ಲಿ ಗಲಭೆ ಕೂಟದಲಿ?
ಸಂತೆಮಾಳದಿ ಇಹುದೆ ತಾನಪಲ್ಲವಿನಾದ?
ಪಡೆ ಸುಖವ ಮೌನದಲಿ ಮುದ್ದುರಾಮ॥

ಹಾರ, ತುರಾಯಿ, ಪೇಟ ಹಾಕುವ ಸಮಾರಂಭಗಳಲ್ಲಿ ಗಲಭೆಯೋ ಗಲಭೆ. ಸನ್ಮಾನಿತರನ್ನು ಸಾಲಾಗಿ ಕೂಡಿಸಿರುತ್ತಾರೆ. ಅವರಲ್ಲಿ ಒಬ್ಬೊಬ್ಬರ ಅಭಿಮಾನಗಳದು ಒಂದೊಂದು ಗುಂಪು. ಒಬ್ಬರಿಗೆ ಒಬ್ಬ ಪರಿಚಯಕಾರ. ವ್ಯವಸ್ಥಾಪಕರು ಹಾರ ತುರಾಯಿ, ಪೇಟ, ಸ್ಮರಣಿಕೆಗಳನ್ನು ಕೊಟ್ಟಾದ ಮೇಲೆ ಅಭಿಮಾನಿಗಳಿಂದ ಶಾಲು, ಹಾರ ಇತ್ಯಾದಿಗಳನ್ನು ಹಾಕಲು, ಫೋಟೋ ವೀಡಿಯೋ ತೆಗೆಸಿಕೊಳ್ಳಲು ನೂಕು ನುಗ್ಗಲು, ಇದರಿಂದ ಗಲಭೆ. ಅಂತಹ ಸಭೆಗಳಲ್ಲಿ ಸನ್ಮಾನ ಮಾಡಿಸಿಕೊಂಡರೂ ಅದರಿಂದ ಯಾವ ನೆಮ್ಮದಿ? ಗಲಭೆ ಕೂಟದಲ್ಲಿ ನೆಮ್ಮದಿ ಸಾಧ್ಯವೆ? ಸಂತೆಯ ಮಾಳದಲ್ಲಿ ಗಲಾಟೆ ಸಹಜ. ಅಲ್ಲಿ ತಾಳ-ಪಲ್ಲವಿಗಳ ನಾದಕ್ಕೆ ಅವಕಾಶವಿರುವುದೇ? ಅದು ಹೇಗೆ ಅಸಾಧ್ಯವೋ ಹಾಗೆ ಈ ಗಲಭೆ ಕೂಟಗಳಲ್ಲಿ ಹಾರ ತುರಾಯಿಗಳ ಅಬ್ಬರದಲ್ಲಿ ಶಾಂತಿಯು ಅಸಾಧ್ಯ. ಮೌನದಿಂದ ಮನೆಯಲ್ಲಿ ಕುಳಿತು ಶಾಂತಿಯನ್ನು ಪಡೆಯುವುದು ಒಳಿತು ಎಂಬುದು ಮುದ್ದುರಾಮನ ಸಲಹೆ.

ತಿರುಪತಿ ಲಡ್ಡು ಪ್ರಸಾದ ತಯಾರಿಕೆಯಲ್ಲಿ ಕಲಬೆರಕೆ: ಇಡಿ ಎಫ್‌ಐಆರ್

ಅಮರಾವತಿ/ನವದೆಹಲಿ: ತಿರುಮಲ ತಿರುಪತಿ ದೇಗುಲದ ಲಡ್ಡು ಪ್ರಸಾದ ತಯಾರಿಕೆಯಲ್ಲಿ ಕಲಬೆರಕೆ ತುಪ್ಪ ಬಳಕೆ ಮಾಡಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇಡಿ) ಹಣ ಅಕ್ರಮ ವರ್ಗಾವಣೆ ಪ್ರಕರಣವನ್ನು ದಾಖಲಿಸಿಕೊಂಡಿದೆ.

ಆರೋಪಿಗಳು ಹಣ ಅಕ್ರಮ ವರ್ಗಾವಣೆ ನಡೆಸಿದ್ದಾರೆಯೇ ಮತ್ತು ಕಲಬೆರಕೆ ತುಪ್ಪದ ಮೂಲಕ ಅಕ್ರಮವಾಗಿ ಹಣ ಗಳಿಸಿದ್ದಾರೆಯೇ ಎಂಬ ಬಗ್ಗೆ ಇ.ಡಿಯು ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆ (ಪಿಎಂಎಲ್‌ಎ) ಅಡಿ ತನಿಖೆ ನಡೆಸುತ್ತಿದೆ. ಆರೋಪಿಗಳು ಹವಾಲ ವ್ಯವಹಾರದಲ್ಲಿ ತೊಡಗಿದ್ದಾರೆ ಮತ್ತು ಹಣವನ್ನು ಬೇರೆ ಮಾರ್ಗಗಳ ಮೂಲಕ ಬಳಸಿಕೊಳ್ಳುತ್ತಿದ್ದಾರೆ ಎಂಬ ಶಂಕೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡ(ಎಸ್‌ಐಟಿ) ದಾಖಲಿಸಿಕೊಂಡಿರುವ ಎಫ್‌ಐಆರ್, ಸಂಗ್ರಹಿಸಿರುವ ದಾಖಲೆ ಮತ್ತು ಸಲ್ಲಿಸಿರುವ ದೋಷಾರೋಪ ಪಟ್ಟಿಯನ್ನು ಇ.ಡಿ ಪರಿಶೀಲಿಸುತ್ತಿದೆ. ತಿರುಪತಿ ದೇಗುಲದ ಒಂಬತ್ತು ಅಧಿಕಾರಿಗಳು ಸೇರಿದಂತೆ 36 ಮಂದಿಯನ್ನು ಪ್ರಕರಣದ ಆರೋಪಿಗಳು ಎಂದು ಎಸ್‌ಐಟಿ ಪರಿಗಣಿಸಿದೆ. ದೇಗುಲಕ್ಕೆ ತುಪ್ಪದ ರೂಪದಲ್ಲಿ ನೀಡಲಾದ ವಸ್ತುವು ರಾಸಾಯನಿಕ ವಸ್ತುಗಳಿಂದ ತಯಾರಾಗಿತ್ತು ಎಂದು ಎಸ್‌ಐಟಿ ದೃಢಪಡಿಸಿತ್ತು.

ಫೆ.16, ಅಪ್ರೆಂಟಿಸ್‌ಶಿಪ್ ಮೇಳ

ಮೈಸೂರು: ಎನ್.ಆರ್.ಮೊಹಲ್ಲಾದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಫೆ.16ರಂದು ಅಪ್ರೆಂಟಿಸ್‌ಶಿಪ್ ಮೇಳ ಹಮ್ಮಿಕೊಳ್ಳಲಾಗಿದೆ. ವಿವಿಧ ಪ್ರತಿಷ್ಠಿತ ಉದ್ದಿಮೆಗಳು ಪಾಲ್ಗೊಳ್ಳುತ್ತಿವೆ. ಮೇಳದಲ್ಲಿ ಎಸ್‌ಎಸ್‌ಎಲ್‌ಸಿ/ಪಿಯುಸಿ/ಐಟಿಐ/ಬಿಇ/ಸೇರಿದಂತೆ ಇತರೆ ಪದವಿಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಸಂಸ್ಥೆಯ ಉಪಪ್ರಾಚಾರ್ಯ ಬೋಪಯ್ಯ ಮೊ.9945711787, ನಾಗೇಶ್, ತರಬೇತಿ ಅಧಿಕಾರಿ ಮೊ.9945616088 ಅವರನ್ನು ಸಂಪರ್ಕಿಸಬಹುದು.

ಮಾದಕ ವಸ್ತುಗಳ ಹಾವಳಿ ನಿಯಂತ್ರಣಕ್ಕೆ ಪೊಲೀಸರ ಮಹತ್ವದ ಹೆಜ್ಜೆ

ಸಾರ್ವಜನಿಕರು, ವಿದ್ಯಾರ್ಥಿಗಳಲ್ಲಿ ಡ್ರಗ್ಸ್ ಬಗ್ಗೆ ಜಾಗೃತಿ; ಮಾದಕ ವಸ್ತು ಸಂದೇಹಾಸ್ಪದ ವ್ಯಕ್ತಿಗಳ ಬಗ್ಗೆ ಮಾಹಿತಿಗೆ ವಾಟ್ಸಾಪ್ 8277948080





ಮೈಸೂರು,ಫೆ10(ಎಂಕೆ)- ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಆತಂಕ ಸೃಷ್ಟಿಸಿರುವ ಡ್ರಗ್ಸ್(ಮಾದಕ ವಸ್ತುಗಳು) ಹಾವಳಿ ನಿಯಂತ್ರಣಕ್ಕೆ ಕೈಗಾರಿಕೆಗಳು ಸೇರಿದಂತೆ ನಗರದೆಲ್ಲೆಡೆ ವ್ಯಾಪಕ ತಪಾಸಣೆ ನಡೆಸುತ್ತಿರುವ ಪೊಲೀಸರು, ಸಾರ್ವಜನಿಕರು, ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಡ್ರಗ್ಸ್ ಬಳಕೆಯಿಂದಾಗುವ ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲು ಹಾಗೂ ಸಂದೇಹಾಸ್ಪದ ವ್ಯಕ್ತಿ ಅಥವಾ ಸ್ಥಳಗಳು ಕಂಡು ಬಂದಲ್ಲಿ ಕೂಡಲೇ ವಾಟ್ಸ್‌ಆಪ್ (8277948080) ಮೂಲಕ ಮಾಹಿತಿ ನೀಡುವಂತೆ 'ವಿಮುಕ್ತಿ' ಅಭಿಯಾನ ಆರಂಭಿಸಿದ್ದಾರೆ.

ಮೈಸೂರಿನ ಎಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳು, ಬಸ್ ನಿಲ್ದಾಣ, ಹೋಟೆಲ್‌ಗಳು, ಶಾಲಾ-ಕಾಲೇಜುಗಳ ಬಳಿ ವಿಮುಕ್ತಿ ಅಭಿಯಾನದ ಪೋಸ್ಟರ್‌ಗಳನ್ನು ಅಳವಡಿಸಲಾಗುತ್ತಿದ್ದು, ಮೈಸೂರನ್ನು ಡಗ್ಸ್ ಮುಕ್ತ ನಗರವನ್ನಾಗಿಸಲು ಕೈ ಜೋಡಿಸುವಂತೆ ಕೋರಲಾಗಿದೆ.

ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರ ಸಹಕಾರದೊಂದಿಗೆ ಹಮ್ಮಿಕೊಂಡಿರುವ ಈ ವಿಮುಕ್ತಿ ಅಭಿಯಾನ, ಮಾದಕ ಮುಕ್ತ ಮೈಸೂರಿನತ್ತ ಇಟ್ಟಿರುವ ಒಂದು ಮಹತ್ವದ ಹೆಜ್ಜೆಯಾಗಿದೆ. ಹಾಗೆಯೇ ಶಾಲಾ-ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ವಿದ್ಯಾರ್ಥಿಗಳನ್ನು ಮಾದಕ ವಸ್ತುಗಳಿಂದ ದೂರವಿಡುವ ಪ್ರಯತ್ನವೂ ಇದಾಗಿದೆ.

> ಡ್ರಗ್ಸ್ ವಿಮುಕ್ತಿ ಅಭಿಯಾನದ ಅಂಗವಾಗಿ ಮೈಸೂರಿನ ಎಲ್ಲಾ ಕಾಲೇಜುಗಳ ನೋಟಿಸ್ ಬೋರ್ಡ್‌ನಲ್ಲಿ ಪೋಸ್ಟರ್ ಅಂಟಿಸಲಾಗುತ್ತಿದೆ. ಎಲ್ಲೆಡೆ ವಾಟ್ಸ್‌ಅಪ್ ನಂಬರ್ ನೀಡಲಾಗುತ್ತಿದ್ದು, ಅಭಿಯಾನದಲ್ಲಿ ಶಿಕ್ಷಕರು, ಪೋಷಕರು ಸೇರಿದಂತೆ ಪ್ರತಿಯೊಬ್ಬರು ಯಾವುದೇ ಅಂಜಿಕೆ ಇಲ್ಲದೆ ಭಾಗವಹಿಸಬೇಕು. ಡ್ರಗ್ಸ್ ಹಾವಳಿಗೆ ಕಡಿವಾಣ ಹಾಕಬೇಕು.
>
> **-ಸೀಮಾ ಲಾಟ್ಕರ್, ಆಯುಕ್ತರು, ಮೈಸೂರು ನಗರ ಪೊಲೀಸ್**

ಮುಖ್ಯವಾಗಿ ಪದವಿ ಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಕಾಲೇಜುಗಳ ನೋಟಿಸ್ ಬೋರ್ಡ್‌ನಲ್ಲಿರುವ ವಿಮುಕ್ತಿ ಅಭಿಯಾನದ ಪೋಸ್ಟರ್‌ಗಳನ್ನು ಅಂಟಿಸಲಾಗುತ್ತಿದೆ. ಕಾನೂನು, ಇಂಜಿನಿಯರಿಂಗ್, ಮೆಡಿಕಲ್ ಕಾಲೇಜು ಸೇರಿದಂತೆ ಎಲ್ಲಾ ಕಾಲೇಜುಗಳಲ್ಲಿನ ಪ್ರಾಂಶುಪಾಲರನ್ನು ಭೇಟಿ ಮಾಡಿ, ಅಭಿಯಾನದ ಕುರಿತು ಮಾಹಿತಿ ನೀಡಿ, ಸಹಕಾರ ನೀಡುವಂತೆ ಕೋರಲಾಗುತ್ತಿದೆ.

ಭಯಪಡುವ ಅಗತ್ಯವಿಲ್ಲ: ಡ್ರಗ್ಸ್ ವಿಮುಕ್ತಿ ಅಭಿಯಾನದಲ್ಲಿ ಅನುಮಾನಾಸ್ಪದ ವ್ಯಕ್ತಿ ಅಥವಾ ಸ್ಥಳದ ಬಗ್ಗೆ ವಾಟ್ಸ್‌ಅಪ್ ಮೂಲಕ ಮಾಹಿತಿ ನೀಡುವವರು ಯಾರೆಂಬುದನ್ನು ಗೌಪ್ಯವಾಗಿಡಲಾಗುವುದು. ಅಲ್ಲದೆ ಮಾಹಿತಿ ನೀಡುವವರಿಗೆ ಯಾವುದೇ ತೊಂದರೆಯಾಗದಂತೆಯೂ ಕ್ರಮವಹಿಸಲಾಗುತ್ತದೆ. ಭಯಪಡುವ ಅಗತ್ಯವಿಲ್ಲ. ಮೈಸೂರನ್ನು ಡ್ರಗ್ಸ್ ಮುಕ್ತ ನಗರ ಪ್ರತಿಯೊಬ್ಬರು ಕೈಜೋಡಿಸುವಂತೆ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ 'ಮೈಸೂರು ಮಿತ್ರ'ನ ಮೂಲಕ ಮನವಿ ಮಾಡಿದ್ದಾರೆ.

ಪರಿಶೀಲಿಸಿ ಕ್ರಮ: ಈಗಾಗಲೇ ಹಲವರಿಂದ ಮಾಹಿತಿಗಳು ಬರುತ್ತಿದ್ದು, ಸತ್ಯಾಸತ್ಯತೆ ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ. ಜೊತೆಗೆ ಎಂದಿನಂತೆ ಸಂಜೆ 6 ಗಂಟೆಯಿಂದ ರಾತ್ರಿ 11ರವರೆಗೆ ತಪಾಸಣೆ ಮುಂದುವರೆಯಲಿದೆ ಎಂದರು.


ಮಹಾರಾಣಿ ವಿಜ್ಞಾನ ಕಾಲೇಜಲ್ಲಿ ಅರಿವು ಕಾರ್ಯಕ್ರಮ...



ಮೈಸೂರು: ಲಕ್ಷ್ಮಿಪುರಂ ಪೊಲೀಸ್ ಠಾಣೆ ವತಿಯಿಂದ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಡ್ರಗ್ಸ್ ವಿಮುಕ್ತಿ ಅಭಿಯಾನದ ಅಂಗವಾಗಿ ಮಾದಕ ದ್ರವ್ಯ ವಿರೋಧಿ ದಿನ ಆಚರಿಸಲಾಯಿತು. ಈ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಲಕ್ಷ್ಮಿಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರವಿಶಂಕರ್, ಮೈಸೂರಿನಲ್ಲಿ ಡ್ರಗ್ಸ್ ವಿಮುಕ್ತಿ ಅಭಿಯಾನ ಆರಂಭವಾಗಿದ್ದು, ಅನುಮಾನಾಸ್ಪದ ಸ್ಥಳ ಮತ್ತು ವ್ಯಕ್ತಿಗಳು ಕಂಡು ಬಂದಲ್ಲಿ ಮಾಹಿತಿ ನೀಡುವಂತೆ ತಿಳಿಸಿದರು. ಕಳೆದ 2 ವರ್ಷದಿಂದ ಡ್ರಗ್ಸ್ ಸಂಬಂಧ 200ಕ್ಕೂ ಹೆಚ್ಚು ದಾಳಿಗಳನ್ನು ನಡೆಸಿ, ಸುಮಾರು 514 ಕೆ.ಜಿ.ಗಾಂಜಾ ವಶಪಡಿಸಿಕೊಳ್ಳಲಾಗಿದೆ. 519 ಪ್ರಕರಣ ದಾಖಲಿಸಿ, 713 ಜನರನ್ನು ಬಂಧಿಸಲಾಗಿದೆ. ಸಾಮಾಜಿಕ ಪಿಡುಗಾಗಿರುವ ಡ್ರಗ್ಸ್ ಮುಕ್ತ ಮೈಸೂರು ನಿರ್ಮಾಣಕ್ಕೆ ವಿದ್ಯಾರ್ಥಿನಿಯರು ಸಹಕಾರ ನೀಡಬೇಕು ಎಂದು ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜನಾಕ್ರೋಶದ ನಡುವೆಯೂ ಕಾಮಗಾರಿ...



ಚಾಮುಂಡಿಬೆಟ್ಟದಲ್ಲಿ ಕೇಂದ್ರ ಸರ್ಕಾರದ 'ಪ್ರಸಾದ್' ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಯು ಜನರ ವಿರೋಧದ ನಡುವೆಯೂ ಮುಂದುವರೆದಿದೆ. ಸ್ಥಳೀಯರ ವಿರೋಧದ ಮಧ್ಯೆ ಪಿಲ್ಲರ್ ಹಾಕುವ ಕಾರ್ಯ ಸಾಗಿದೆ.

ಶ್ರೀ ಹನುಮಾನ್ ಚಾಲೀಸ್ ಪಾರಾಯಣ



ಮೈಸೂರು: ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಗಣಪತಿ ಸಚ್ಚಿದಾನಂದ ಆಶ್ರಮದ ವತಿಯಿಂದ ಆಯೋಜಿಸಿರುವ ಶ್ರೀ ಹನುಮಾನ್ ಚಾಲೀಸ್ ಪಾರಾಯಣ ಮಹಾಯಜ್ಞ ಕಾರ್ಯಕ್ರಮ ಫೆ.14ರಂದು ನಡೆಯಲಿರುವ ಹಿನ್ನಲೆಯಲ್ಲಿ ಅಹೋ ಬಲ ಮಠ, ಪರಕಾಲ ಮಠ, ರಾಘವೇಂದ್ರ ಮಠ ಹಾಗೂ ವಿವಿಧ ದೇವಸ್ಥಾನಗಳಿಗೆ ತೆರಳಿ ಭಕ್ತರಿಗೆ ಹನುಮಾನ್ ಚಾಲೀಸ್ ಪಾರಾಯಣದ ಕರಪತ್ರ ವಿತರಣೆ, ಭಿತ್ತಿಪತ್ರಗಳನ್ನು ಅಂಟಿಸುವ ಮೂಲಕ ಪ್ರಚಾರ ಮಾಡಲಾಯಿತು. ಈ ವೇಳೆ ವೀರ ಸಾವರ್ಕರ್ ಯುವ ಬಳಗದ ಅಧ್ಯಕ್ಷ ರಾಕೇಶ್ ಭಟ್, ಬ್ರಾಹ್ಮಣ ಮಹಾಸಭಾ ಕೇಂದ್ರ ಕಾರ್ಯಕಾರಣಿ ಸದಸ್ಯ ಟಿ.ಎಸ್ ಅರುಣ್, ಮುಖಂಡರಾದ ಶಿವು ಪಟೇಲ್, ಡಿ.ರಾಘವೇಂದ್ರ, ಚೇತನ್ ಹಾಗೂ ಧರ್ಮೇಂದ್ರ ಭಾಗವಹಿಸಿದ್ದರು.

ಇಂದು ಬಾಲ್ಯ ವಿವಾಹ ಮುಕ್ತ ಜಾಗೃತಿ ಕಾರ್ಯಕ್ರಮ

ಮೈಸೂರು,ಫೆ.10–ಮಕ್ಕಳ ಹಕ್ಕು ನಿರ್ದೇಶನಾಲಯ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ, ಚೈಲ್ಡ್ ಫಂಡ್ ಹಾಗೂ ಇತರೆ ಸ್ವಯಂ ಸೇವಾ ಸಂಸ್ಥೆಗಳ ವತಿಯಿಂದ ಫೆ.11ರಂದು ಬಾಲ್ಯ ವಿವಾಹ ಮುಕ್ತ ಸಂಕಲ್ಪ ಅಭಿಯಾನದ ಅಂಗವಾಗಿ ಜಾಗೃತಿ ಕಾರ್ಯಕ್ರಮವನ್ನು ಬೆಳಗ್ಗೆ 10:30ಕ್ಕೆ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 9.30 ಗಂಟೆಗೆ ಹಳೇ ಜಿಲ್ಲಾಧಿಕಾರಿ ಕಚೇರಿಯಿಂದ ಕಲಾಮಂದಿರದವರೆಗೆ ಜಾಥಾ ಹಮ್ಮಿಕೊಳ್ಳಲಾಗಿದೆ.


ಮೈಸೂರು ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಎಸ್.ಮಂಜು ಉಪಸ್ಥಿತಿಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಉಷಾರಾಣಿ ಕಾರ್ಯಕ್ರಮವನ್ನು ಉದ್ಘಾಟಿಸುವರು. ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅಧ್ಯಕ್ಷತೆ ವಹಿಲಿದ್ದಾರೆ. ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಅಮರ್‌ನಾಥ್ ಕೆ.ಕೆ, ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಉಪಸ್ಥಿತರಿರಲಿದ್ದಾರೆ.

ಮಕ್ಕಳ ಸಂರಕ್ಷಣೆ ವಿಷಯ ತಜ್ಞರು ಹಾಗೂ ಯುನಿಫ್ ಮಕ್ಕಳ ಸಂರಕ್ಷಣಾ ಯೋಜನೆಯ ಪ್ರಾದೇಶಿಕ ಸಂಯೋಜಕ ಕೆ.ರಾಘವೇಂದ್ರ ಭಟ್ ಬೆಳಗ್ಗೆ 11 ಗಂಟೆಗೆ ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ಪೋಕ್ಸೋ ಕಾಯ್ದೆಯ ಬಗ್ಗೆ ಹಾಗೂ ಗ್ರಾಮೀಣ ಶಿಕ್ಷಣ ಆರೋಗ್ಯ ಸಂಸ್ಥೆಯ ಹಿರಿಯ ಯೋಜನಾ ವ್ಯವಸ್ಥಾಪಕ ಸಂಪತ್ತು ಸಂಜೆ 4 ಗಂಟೆಗೆ ಪ್ರಚಲಿತ ಮಕ್ಕಳ ಸಮಸ್ಯೆಗಳ ಕುರಿತು ಚರ್ಚೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕರಾದ ಸ್ನೇಹ ಸಿ.ವಿ, ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು. ಪಿ, ಉಪ ಪೊಲೀಸ್ ಆಯುಕ್ತರು, ಅಪರಾಧ ಮತ್ತು ಸಂಚಾರಿ ವಿಭಾಗದ ಕೆ.ಎಸ್.ಸುಂದರ್‌ರಾಜ್, ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಬಸವರಾಜು ಆಗಮಿಸಲಿದ್ದಾರೆ.

ಇಂದು, ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.10– ವಿ.ವಿ. ಮೊಹಲ್ಲಾ ಉಪವಿಭಾಗ ವ್ಯಾಪ್ತಿಯ 11 ಕೆ.ವಿ ಮಯೂರ ಮತ್ತು 11 ಕೆ.ವಿ ಬೃಂದಾವನ ವಿದ್ಯುತ್ ಮಾರ್ಗಗಳಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಫೆ.11ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಹೆಬ್ಬಾಳ್ 2ನೇ ಹಂತ, 1ರಿಂದ 8ನೇ ಕ್ರಾಸ್, ಯಜಮಾನ ಸರ್ಕಲ್, ಚಿತ್ರಾ ರೆಸಿಡೆನ್ಸಿ ಹಾಗೂ ಸುತ್ತಮುತ್ತ. ಮಥುರ ನಗರ, ಲೋಕನಾಯಕ ನಗರ, ಜಯದೇವ ನಗರ, ಹೆಬ್ಬಾಳ್ ಮುಖ್ಯರಸ್ತೆ, ಮೇಟಗಳ್ಳಿ ಪೋಸ್ಟ್ ಆಫೀಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.



ಹಾಗೆಯೇ 66/11 ಕೆ.ವಿ ರಾಜೀವ್‌ನಗರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಫೆ.12ರಂದು ಬೆಳಿಗ್ಗೆ 10 ರಿಂದ ಸಂಜೆ 5:30ರವರೆಗೆ ರಾಜೀವ ನಗರ 2ನೇ ಹಂತ, ಎನ್.ಜಿ ಕರೀಂ ಬ್ಲಾಕ್, ಗುಪ್ತಾ ಸ್ಟೋರ್, ಅಲ್–ಬದರ್ ವೃತ್ತ, ಖುಬಾ ಮಸೀದಿ ಸುತ್ತ–ಮುತ್ತಾ, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ದಸ್ತಗಿರಿ ಫಂಕ್ಷನ್ ಹಾಲ್, ಕ್ರಿಶ್ಚಿಯನ್ ಕಾಲೋನಿ, ನಾಗರಾಜಪ್ಪ ಬಡಾವಣೆ, ಸದಾನಂದ ಆಸ್ಪತ್ರೆ, ರೇಷಮ್ ಉದ್ಯೋಗ್ ಆಸ್ಪತ್ರೆ, ಪ್ರಜ್ವಲ್ ಆಸ್ಪತ್ರೆ, RTO–55, ಅಬ್ದುಲ್ ಕಲಾಂ ಬಡಾವಣೆ, ರಿಂಗ್ ರಸ್ತೆ ಹಾಗೂ ಸುತ್ತ–ಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಅಪರಿಚಿತ ಮೃತ ಗಂಡಸಿನ ಶವ ಪತ್ತೆ

ಮೈಸೂರು,ಫೆ.10– ಸುಮಾರು 50 ವರ್ಷದ ಅಪರಿಚಿತ ಮೃತ ಗಂಡಸು ಫೆ.9ರಂದು ನಾಗನಹಳ್ಳಿ ಪಾಂಡವಪುರ ರೈಲು ನಿಲ್ದಾಣಗಳ ನಡುವೆ ರೈಲ್ವೇ ಕಿ.ಮೀ. 127/400–500 ಆಫ್‌ಲೈನ್‌ನಲ್ಲಿ ಸುಮಾರು 50 ವರ್ಷದ ಗಂಡಸು ರೈಲು ಗಾಡಿಗೆ ಆಕಸ್ಮಿಕವಾಗಿ ಸಿಕ್ಕಿ ಮೃತಪಟ್ಟಿರುತ್ತಾರೆ. ಮೃತದೇಹವು ಮಂಡ್ಯ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿರುತ್ತದೆ. ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತನ ಚಹರೆ: ವಯಸ್ಸು ಸುಮಾರು 50–55 ವರ್ಷ, ಎತ್ತರ– 5.6 ಅಡಿ ಎತ್ತರ, ಧೃಡಕಾಯ ಶರೀರ, ಗೋಧಿ ಮೈಬಣ್ಣ, ದುಂಡನೆ ಮುಖ, ದಪ್ಪನೆಯ ಮೂಗು, ತಲೆಯಲಿ 01 ಇಂಚು ಕಪ್ಪು ಕೂದಲು, ಕಪ್ಪು, ಬಿಳಿ ಮಿಶ್ರಿತ ಕುರುಚಲು ಗಡ್ಡ–ಮೀಸೆ. ಬಟ್ಟೆ ಪಿಂಕ್ ಬಣ್ಣದ ತುಂಬು ತೋಳಿನ ಶರ್ಟ್.ಹಸಿರು ಬಣ್ಣದ ಬನಿಯಾನ್.ಕ್ಲಾಸಿಕ್ ಎಂದು ಬರೆದಿರುವ ನೀಲಿ ಬಣ್ಣದ ಅಂಡರವೇರ್, ಬ್ಲಾಕ್ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಮೃತನ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂ.ಸಂ –0821–2516579, 9480802122 ಸಂಪರ್ಕಿಸಬೇಕೆಂದು ಆರಕ್ಷಕ, ಉಪನಿರೀಕ್ಷಕರು ರೈಲ್ವೆ ಪೊಲೀಸ್ ಠಾಣೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಸಿಬಿ ಪೊಲೀಸರಿಂದ ಅಂತಾರಾಜ್ಯ ಖದೀಮನ ಬಂಧನ; ಮಹೇಂದ್ರ ಥಾರ್ ಜೀಪ್ ವಶಕ್ಕೆ

ದೇವರಾಜ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಕಳವು ಪ್ರಕರಣದ ಪ್ರಮುಖ ಆರೋಪಿ; ಇನ್ನೂ ನಾಲ್ವರ ಪತ್ತೆಗೆ ಶೋಧ

ಮೈಸೂರು,ಫೆ.10(ಎಂಟಿವೈ)– ಮೈಸೂರಿನ ದೇವರಾಜ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪೆಟ್ ಮೆಡಿಕಲ್ ಸ್ಟೋರ್ ದೋಚಿದ್ದ ಅಂತರರಾಜ್ಯ ಖದೀಮರ ತಂಡದ ಓರ್ವನನ್ನು ಮೈಸೂರು ಸಿಸಿಬಿ ಪೊಲೀಸರು ಬಂಧಿಸಿ, 14 ಲಕ್ಷ ರೂ. ಮೌಲ್ಯದ ಮಹೇಂದ್ರ ಥಾರ್ ಜೀಪ್ ಅನ್ನು ವಶಪಡಿಸಿಕೊಂಡು, ತಲೆ ಮರೆಸಿಕೊಂಡಿರುವ ನಾಲ್ವರಿಗೆ ಶೋಧ ಮುಂದುವರೆಸಿದ್ದಾರೆ.

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಹೆಬ್ಬಾಣಿ ಗ್ರಾಮದ ಅರುಣ್ ಕುಮಾರ್ ಅಲಿಯಾಸ್ ಅರುಣ್ ಬಿನ್ ನರಸಿಂಹಯ್ಯ(33) ಬಂಧಿತ ಅಂತರರಾಜ್ಯ ಕಳ್ಳನಾಗಿದ್ದು, ಆತನಿಂದ 12 ಲಕ್ಷ ರೂ. ಮೌಲ್ಯದ ಒಂದು ಥಾರ್ ಜೀಪ್ ಅನ್ನು ವಶಪಡಿಸಿಕೊಂಡಿದ್ದಾರೆ.

ಏನಿದು ಪ್ರಕರಣ: ಮೈಸೂರಿನ ದೇವರಾಜ ಪೊಲೀಸ್ ಠಾಣಾ ವ್ಯಾಪ್ತಿಯ ಗೌಡ್ರು ಪೆಟ್ ಮೆಡಿಕಲ್ ಸ್ಟೋರ್‌ನಲ್ಲಿ ಕಳೆದ ತಿಂಗಳು ಕಳ್ಳತನವಾಗಿತ್ತು. ಶೆಲ್ಟರ್ ಮೀಟಿ ಒಳನುಗ್ಗಿ 1.80 ಲಕ್ಷ ರೂ. ನಗದು, 60 ಗ್ರಾಂ ಚಿನ್ನ, 36 ಗ್ರಾಂ ಬೆಳ್ಳಿ ನಾಣ್ಯ ಸೇರಿದಂತೆ 9 ಲಕ್ಷ ರೂ. ಮೌಲ್ಯದ ವಸ್ತು ಕಳ್ಳತನ ಮಾಡಿದ್ದರು. ದೇವರಾಜ ಠಾಣೆಯಲ್ಲಿ ದಾಖಲಾಗಿದ್ದ ಈ ಪ್ರಕರಣವನ್ನು ಸಿಸಿಬಿಗೆ ವರ್ಗಾಯಿಸಲಾಗಿತ್ತು. ತನಿಖೆ ಕೈಗೊಂಡ ಸಿಸಿಬಿ ಪೊಲೀಸರಿಗೆ ಮೆಡಿಕಲ್ ಸ್ಟೋರ್ ಕಳ್ಳತನ ಮಾಡಿರುವುದು ಅಂತರ ರಾಜ್ಯ ಕಳ್ಳ ಅರುಣ್ ಕುಮಾರ್ ತಂಡ ಎಂಬುದು ಸುಳಿವು ದೊರಕಿತ್ತು.

ಡಾಂಗಲ್ ಮೂಲಕ ವಾಟ್ಸಪ್ ಕರೆಯಲ್ಲೇ ಪ್ಲಾನ್: ಕಳ್ಳತನ ಮಾಡಲು ಐವರು ಆರೋಪಿಗಳ ತಂಡ ಮೊಬೈಲ್ ಕರೆ ಮಾಡದೆ, ಡಾಂಗಲ್ ಮೂಲಕ ವಾಟ್ಸಪ್‌ನಲ್ಲಿ ಕಾಲ್ ಮಾಡಿ ಪರಸ್ಪರ ಸಮಾಲೋಚಿಸುತ್ತಿದ್ದರು. ಇದರಿಂದ ಪೊಲೀಸರಿಗೆ ಸುಳಿವು ಸಿಗುತ್ತಿರಲಿಲ್ಲ. ಸಿಕ್ಕ ಸಣ್ಣ ಮಾಹಿತಿ ಆಧರಿಸಿ ಕಾರ್ಯಾಚರಣೆ ಆರಂಭಿಸಿದ್ದ ಸಿಸಿಬಿ ಪೊಲೀಸರು ಬೆಂಗಳೂರಲ್ಲಿ ಆರೋಪಿ ಅರುಣ್‌ಕುಮಾರ್‌ನನ್ನು ಪತ್ತೆ ಮಾಡಿ ಬಂಧಿಸಿದ್ದಾರೆ.

ಥಾರ್ ಕಳವು ಪ್ರಕರಣ ಬೆಳಕಿಗೆ: ಖದೀಮ ಅರುಣ್‌ಕುಮಾರ್‌ನನ್ನು ವಶಕ್ಕೆ ಪಡೆದ ಸಿಸಿಬಿ ಪೊಲೀಸರು ವಿಚಾರಣೆ ನಡೆಸುತ್ತಿದ್ದ ವೇಳೆ ಬೆಂಗಳೂರಿನ ಅನ್ನಪೂರ್ಣೇಶ್ವರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಥಾರ್ ಜೀಪ್ ಕಳುವಾಗಿದ್ದ ಪ್ರಕರಣ ಬೆಳಕಿಗೆ ಬಂದಿದೆ. ಆರೋಪಿ ಅರುಣ್, ಟಿಎಸ್ 07, ಹೆಚ್‌ಎನ್ 7676 ಸಂಖ್ಯೆ ಕಪ್ಪು ಬಣ್ಣದ ಥಾರ್ ಜೀಪನ್ನು ಕಳವು ಮಾಡಿ ಆಂಧ್ರಪ್ರದೇಶದ ಕೊಕ್ಕಂಟಿ ಕ್ರಾಸ್‌ನಲ್ಲಿನ ಕೃಷ್ಣಮೂರ್ತಿ ಎಂಬಾತನಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ್ದಾನೆ. ಕೂಡಲೇ ಸ್ಥಳಕ್ಕೆ ತೆರಳಿ ಥಾರ್ ಜೀಪ್ ವಶಪಡಿಸಿಕೊಂಡು, ಕಳವು ಮಾಡಿದ ಜೀಪು ಖರೀದಿಸಿದ್ದ ಕೃಷ್ಣಮೂರ್ತಿಯನ್ನು ವಶಕ್ಕೆ ಪಡೆದಿದ್ದಾರೆ.



ವಶಪಡಿಸಿಕೊಂಡ ಥಾರ್ ಜೀಪ್.

32 ಕೇಸ್: ಆರೋಪಿ ಅರುಣ್ ತನ್ನೊಂದಿಗೆ ತನ್ನ ಸಹೋದರ, ಬೆಂಗಳೂರಿನ ನಿವಾಸಿ ಹಾಗೂ ಚಿಕ್ಕಬಳ್ಳಾಪುರ, ರಾಯಚೂರಿನ ತಲಾ ಒಬ್ಬರನ್ನು ಸಂಘಟಿಸಿ ಕಳ್ಳತನಕ್ಕೆ ತಂಡವೊಂದನ್ನು ರಚಿಸಿಕೊಂಡಿದ್ದ. ಈತನ ವಿರುದ್ಧ ಒಟ್ಟು 32 ಕೇಸ್ ಇದ್ದು, ಈ ಹಿಂದೆ ಬೆಂಗಳೂರಿನ ಹೆಚ್‌ಎಸ್‌ಆರ್ ಲೇಔಟ್ ಪೊಲೀಸರು ಈತನಿಂದ 21 ಕಾರುಗಳನ್ನು ವಶಪಡಿಸಿಕೊಂಡಿದ್ದರು.



ಅರುಣ್‌ಕುಮಾರ್

ಅಂತರರಾಜ್ಯ ಕಳ್ಳರು: ಈ ತಂಡ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಪಾಂಡಿಚೇರಿ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಕೈಚಳಕ ತೋರಿಸಿದೆ. ಕೆಲವು ಪ್ರಕರಣಗಳಲ್ಲಿ ಶಿಕ್ಷೆ ಅನುಭವಿಸಿದ್ದು, ಮತ್ತಷ್ಟು ಪ್ರಕರಣ ವಿಚಾರಣೆ ಹಂತದಲ್ಲಿವೆ. ಮುಖ್ಯ ಆರೋಪಿ ಅರುಣ್ ಕುಮಾರ್ ತಮಿಳುನಾಡಿನಲ್ಲಿ ಜ್ಯುವೆಲರಿ ಶಾಪ್‌ವೊಂದರಲ್ಲಿ ಆಭರಣ ದೋಚಿ, ಸಿಕ್ಕಿಬಿದ್ದಿದ್ದ.

ಸುಳಿವಿಲ್ಲದ ಪ್ರಕರಣ: ಖದೀಮರು ಬೇರೆ ಬೇರೆ ಕಡೆ ವಾಸಿಸುತ್ತಿದ್ದು, ಕಳ್ಳತನ ಮಾಡುವ ವೇಳೆ ವಾಟ್ಸಪ್ ಕಾಲ್ ಮಾಡಿ ಸಮಾಲೋಚಿಸಿ ಉದ್ದೇಶಿತ ಸ್ಥಳದಲ್ಲಿ ಸೇರಿ ಕೈಚಳಕ ತೋರಿ ಪರಾರಿಯಾಗುತ್ತಿದ್ದರು. ಮೆಡಿಕಲ್ ಸ್ಟೋರ್‌ನಲ್ಲಿ ಕಳವು ಮಾಡಿ ನಗದು ಸೇರಿದಂತೆ 9 ಲಕ್ಷ ರೂ. ಮೌಲ್ಯದ ವಸ್ತುಗಳ ಕಳ್ಳತನ ಪ್ರಕರಣದಲ್ಲಿ ಬಂಧಿತನಿಂದ ಕೇವಲ 1500 ರೂ. ಮಾತ್ರ ವಶಕ್ಕೆ ಪಡೆಯಲಾಗಿದ್ದು, ಉಳಿದ ಹಣ ಹಾಗೂ ಆಭರಣದೊಂದಿಗೆ ತಲೆ ಮರೆಸಿಕೊಂಡಿರುವ ನಾಲ್ವರ ಬಳಿ ಇದೆ ಎಂದು ಆರೋಪಿ ತಿಳಿಸಿದ್ದಾನೆ. ಈ ಹಿನ್ನೆಲೆಯಲ್ಲಿ ತಲೆ ಮರೆಸಿಕೊಂಡಿರುವ ನಾಲ್ವರ ಬಂಧನಕ್ಕೆ ಸಿಸಿಬಿ ಪೊಲೀಸರು ಬಲೆ ಬೀಸಿದ್ದಾರೆ.

ಕಾರ್ಯಾಚರಣೆಯಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ನಾರಾಯಣಸ್ವಾಮಿ, ಸಬ್ ಇನ್ಸ್‌ಪೆಕ್ಟರ್ ಎನ್.ಅನಿಲ್‌ಕುಮಾರ್, ಎಎಸ್‌ಐ ಆರ್.ಸುರೇಶ್ ಸಿಬ್ಬಂದಿಗಳಾದ ಜಗದೀಶ್, ಟಿ.ಪ್ರಕಾಶ್, ಜಯರಾಮ್, ರಾಘವೇಂದ್ರ ಹಾಗೂ ಇತರೆ ಸಿಬ್ಬಂದಿ ಪಾಲ್ಗೊಂಡಿದ್ದರು. ಪ್ರಕರಣ ಭೇದಿಸಿರುವ ಸಿಸಿಬಿ ತಂಡಕ್ಕೆ ನಗರ ಪೊಲೀಸ್ ಆಯುಕ್ತರು ಶ್ಲಾಘಿಸಿದ್ದಾರೆ.

ಬಜೆಟ್‌ನಲ್ಲಿ ಅಹಿಂದ ವರ್ಗಕ್ಕೆ 300 ಕೋಟಿ ಅನುದಾನಕ್ಕೆ ಆಗ್ರಹ

ಮೈಸೂರು,ಫೆ10(ಜಿಎ)–ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಅಹಿಂದ ವರ್ಗಕ್ಕೆ ಹೆಚ್ಚಿನ ಆದ್ಯತೆ ನೀಡಿ, ಅಹಿಂದ ವರ್ಗದ ಎಲ್ಲಾ ನಿಗಮ ಮಂಡಳಿಗೆ ಕನಿಷ್ಠ 300 ಕೋಟಿ ಅನುದಾನ ನೀಡುವಂತೆ ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಗೌರವಾಧ್ಯಕ್ಷ ಎನ್.ಆರ್.ನಾಗೇಶ್ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಅಹಿಂದ ವರ್ಗದ ಜನರಿಂದ ಅಧಿಕಾರಕ್ಕೆ ಬಂದಿದ್ದು, ಈ ಹಿನ್ನೆಲೆಯಲ್ಲಿ ಅಹಿಂದ ವರ್ಗಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಈ ಸಮುದಾಯಗಳು ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಆರ್ಥಿಕ ಸೌಲಭ್ಯವನ್ನು ನೀಡುವ ಮೂಲಕ ಸಬಲೀಕರಣ ಮಾಡಬೇಕಿರುವುದು ಸರ್ಕಾರದ ಕರ್ತವ್ಯ. ಆದ್ದರಿಂದ ಹಿಂದುಳಿದ ಎಲ್ಲಾ ನಿಗಮ ಮಂಡಳಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗದ ನಿಗಮ ಮಂಡಳಿಗೆ ಹೆಚ್ಚಿನ ಅನುದಾನ ಮೀಸಲಿಡಬೇಕೆಂದು ಆಗ್ರಹಿಸಿದರು.

ಪ್ರಮುಖವಾಗಿ ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತ ನಿಗಮಗಳಿಂದ ನೀಡುವ ನೇರ ಸಾಲ ಯೋಜನೆಯನ್ನು ಗರಿಷ್ಠ 2 ಲಕ್ಷಕ್ಕೆ ಹೆಚ್ಚಳ ಮಾಡಬೇಕು, ಮಹಿಳಾ ಸಬಲೀಕರಣಕ್ಕೆ ಅನುಕೂಲವಾಗುವಂತೆ ಪ್ರತ್ಯೇಕ ಅನುದಾನ ಘೋಷಿಸಬೇಕು, ಯುವಕ, ಯುವತಿಯರು ಸ್ವಯಂ ಉದ್ಯೋಗದಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಶೇ.75ರಷ್ಟು ಸಹಾಯಧನದಡಿ ನಿವೇಶನ ಹಾಗೂ ಕೈಗಾರಿಕೆ ಸ್ಥಾಪಿಸಲು ನಿಗಮದಿಂದ ಸಾಲ ನೀಡುವ ಯೋಜನೆ ರೂಪಿಸಬೇಕು. ಉನ್ನತ ಶಿಕ್ಷಣಕ್ಕೆ ಅನುಕೂಲವಾಗುವಂತೆ ಪ್ರತ್ಯೇಕ ಅನುದಾನ ಘೋಷಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ, ಬಿ.ಜಿ.ಕೇಶವ, ಡಾ.ಶಾಂತರಾಜೇಅರಸ್, ಗೀತಾ, ಮೀನಾಕ್ಷಿ, ಸಿದ್ದರಾಜು, ಶ್ರೀಕಾಂತ ಯಾದವ್, ರವಿಕುಮಾರ್, ಮಹದೇವಪ್ಪ, ಮಹೇಶ್, ಲಕ್ಷ್ಮೀ, ಪವಿತ್ರ ಉಪಸ್ಥಿತರಿದ್ದರು.

ಬ್ರಾಹ್ಮಣ ಸಮುದಾಯದ ಸುನೀಲ್‌ಕುಮಾರ್ ವಿರುದ್ಧ ಅಟ್ರಾಸಿಟಿ ಕಾಯ್ದೆಯಡಿ ಸುಳ್ಳು ದೂರು ಆರೋಪ

ಮೈಸೂರು, ಫೆ.10(ಜಿಎ)–ಹೆಚ್.ಡಿ. ಕೋಟೆ ಕಸಬಾ ಹೋಬಳಿಯ ಸರ್ವೆ ನಂಬರ್ 80/2ರಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಸುನಿಲ್ ಕುಮಾರ್ ಎಂಬುವವರ 5 ಎಕರೆ ಜಮೀನಿಗೆ ಅಕ್ರಮವಾಗಿ ನುಗ್ಗಿದ ಕೆಲವರು ತೀವ್ರ ಹಲ್ಲೆ ನಡೆಸಿ, ತಾವೇ ತಂದಿದ್ದ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿ, ಸುನಿಲ್ ಕುಮಾರ್ ಅವರ ವಿರುದ್ಧ ಅಟ್ರಾಸಿಟಿ ಕಾಯ್ದೆ ಅಡಿಯಲ್ಲಿ ಸುಳ್ಳು ದೂರು ಸಲ್ಲಿಸಿದ್ದಾರೆ ಎಂದು ಹೆಚ್.ಡಿ.ಕೋಟೆ ತಾಲೂಕಿನ ಜಿಪಂ ಮಾಜಿ ಸದಸ್ಯ ಹೆಚ್.ಸಿ.ಲಕ್ಷ್ಮಣ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಮೀನಿಗೆ ಸಂಬಂಧಿಸಿದಂತೆ ಸುನಿಲ್ ಕುಮಾರ್ ಹಾಗೂ ಮೌಸಸ್ ಎಂಬುವವರ ನಡುವೆ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ. ಆದರೂ ಒಂದು ಸಮುದಾಯಕ್ಕೆ ಸೇರಿದ ಕಟ್ಟೆ ಮನುಗನಹಳ್ಳಿಯ ರವಿಕುಮಾರ್, ಜಯಣ್ಣ ಪ್ರವೀಣ್, ಮಧು ಮತ್ತು ಕಿರಣ್ ಎಂಬುವವರು ಫೆ.4ರಂದು ಜಮೀನಿಗೆ ಏಕಾಏಕಿ ನುಗ್ಗಿ ಸುನೀಲ್‌ಕುಮಾರ್ ಅವರ ಮೇಲೆ ತೀವ್ರ ಹಲ್ಲೆ ನಡೆಸಿ, ಡಾ.ಅಂಬೇಡ್ಕರ್ ಭಾವಚಿತ್ರ ತಾವೇ ವಿರೂಪಗೊಳಿಸಿ, ದೂರು ನೀಡಿದ್ದಾರೆ ಎಂದು ದೂರಿದರು.

ಈ ವೇಳೆ ಕೆಲ ದಲಿತ ಮುಖಂಡರು ಮಾತನಾಡಿ, ಕೆಲವರು ಅಟ್ರಾಸಿಟಿ ಕೇಸ್ ದುರ್ಬಳಕೆ ಮಾಡಿಕೊಳ್ಳುತ್ತಿರುವುದರಿಂದ ದಲಿತ ಸಮುದಾಯಕ್ಕೆ ಕೆಟ್ಟ ಹೆಸರು ಬರುತ್ತಿದೆ. ಆರೋಪಿಗಳು ತಾವೇ ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದ್ದನ್ನು ನಾವೆಲ್ಲ ನೋಡಿದ್ದೇವೆ. ಹೀಗಾಗಿ ಸುನಿಲ್ ಕುಮಾರ್ ವಿರುದ್ಧ ದಾಖಲಿಸಿರುವ ದೂರು ರದ್ದುಪಡಿಸಬೇಕು, ಆರೋಪಿಗಳ ವಿರುದ್ಧ ಡಾ. ಬಿ.ಆರ್.ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದ್ದಕ್ಕಾಗಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಡಿಎಸ್‌ಎಸ್‌ನ ಸೋಮಣ್ಣ, ಶ್ರೀಧರ್, ಪುಟ್ಟರಾಜು, ಜವರಯ್ಯ, ಕೃಷ್ಣ, ಲೋಕೇಶ್ ಉಪಸ್ಥಿತರಿದ್ದರು.

ಮಹಾಜನ ಕಾಲೇಜಲ್ಲಿ ಜಿಐಎಸ್ ಕಾರ್ಯಾಗಾರ



ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ಎರಡು ದಿನಗಳ ಕಾರ್ಯಾಗಾರ ನಡೆಯಿತು.

ಮೈಸೂರು, ಫೆ.10– ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ 'ರೀಸೆಂಟ್ ಟ್ರೆಂಡ್ಸ್ ಅಂಡ್ ಅಡ್ವಾನ್ಸ್ ಮ್ಯಾಪಿಂಗ್ ಟೆಕ್ನಿಕ್ಸ್ ಇನ್ ಜಿಐಎಸ್' ವಿಷಯ ಕುರಿತು ಕಾರ್ಯಾಗಾರವನ್ನು ನಾಗಮಂಗಲದ ಶ್ರೀ ಆದಿಚುಂಚನಗಿರಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ರವಿಕುಮಾರ್ ಕಾರ್ಯಾಗಾರವನ್ನು ಉದ್ಘಾಟಿಸಿದರು.

ನಂತರ ಮಾತನಾಡಿ, ಭೌಗೋಳಿಕ ಮಾಹಿತಿ ವ್ಯವಸ್ಥೆಯ ಉಗಮ ಮತ್ತು ಅದನ್ನು ಯಾವ ರೀತಿಯಾಗಿ ವರ್ಗೀಕರಿಸಬಹುದು, ಅದರ ಘಟಕಾಂಶಗಳು ಹಾಗೂ ಅನ್ವಯ ಕ್ಷೇತ್ರಗಳು, ಅದರ ಬಳಕೆಯಿಂದ ನೈಜ ಪ್ರಪಂಚದಲ್ಲಿ ಯಾವ ರೀತಿ ಅನುಕೂಲವಾಗುತ್ತದೆ ಎಂಬುದನ್ನು ತಿಳಿಸಿದರು.

ಜಿಐಎಸ್ ಸಾಫ್ಟ್‌ವೇರ್‌ನ ಮೂಲಕ ಅದನ್ನು ಹೇಗೆ ಅಭ್ಯಾಸ ಮಾಡಲಾಗುತ್ತದೆ ಹಾಗೂ ಈ ಜಿಪಿಎಸ್ ತಂತ್ರಜ್ಞಾನದಿಂದ ಜಾಗತಿಕ ಸ್ಥಾನ ನಿರ್ಧಾರಣೆ ಮಾಡಲು ಹೇಗೆ ಸಾಧ್ಯವಾಗುತ್ತದೆ. ಮುಂದಿನ ದಿನಗಳಲ್ಲಿ ನಿಮ್ಮ ಪದವಿ ಮುಗಿದ ನಂತರ ಸರ್ಕಾರಿ ಕಚೇರಿಗಳಲ್ಲಿ, ವಿವಿಧ ಕಂಪನಿಗಳಲ್ಲಿ ಜಿಪಿಎಸ್ & ಜಿಐಎಸ್ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ಭೂಗೋಳಶಾಸ್ತ್ರದ ವಿದ್ಯಾರ್ಥಿಗಳು ಏನನ್ನು ಕಲಿಯುತ್ತೀರೋ ಅದು ಪರಿಪೂರ್ಣವಾಗಿರಬೇಕು. ಅದರ ಬಗ್ಗೆ ನಿಮಗೆ ಸಂಪೂರ್ಣ ತಿಳಿದಿರಬೇಕು. ಇಂದಿನ ಸಂದರ್ಭದಲ್ಲಿ ಒಂದು ಕಡೆ ಮಾಹಿತಿ ತಂತ್ರಜ್ಞಾನ ಹೇಗೆ ಪ್ರತಿನಿತ್ಯದ ಬದುಕಿನಲ್ಲಿ ಬೆರೆತುಹೋಗಿದೆ. ಎಂಬುದು ಬಹಳ ಮುಖ್ಯ. ಪ್ರಮುಖವಾಗಿ ಪರಿಸರ ಎಲ್ಲಾ ಕಾಲಕ್ಕೂ ಮೂಲಭೂತವಾದುದ್ದು. ತಂತ್ರಜ್ಞಾನವನ್ನು ಪರಿಸರಕ್ಕೆ ಪೂರಕವಾಗಿ ಅಳವಡಿಸಿಕೊಂಡರೆ ಸಬಲೀಕರಣವಾಗಬಹುದು. ಆ ನಿಟ್ಟಿನಲ್ಲಿ ಈ ರೀತಿಯ ಕಾರ್ಯಾಗಾರಗಳು ಜಿಐಎಸ್ ತಂತ್ರಜ್ಞಾನದೊಂದಿಗೆ ಉದ್ಯೋಗಕ್ಕೆ, ಬದುಕಿಗೆ, ಸಮಾಜಕ್ಕೆ ಮತ್ತು ಪರಿಸರಕ್ಕೆ ಪೂರಕವಾಗಿರುತ್ತದೆ. ಇದರಿಂದ ನಗರಾಭಿವೃದ್ಧಿ, ಆರೋಗ್ಯ ಕ್ಷೇತ್ರ ಮತ್ತು ವಿಪತ್ತುಗಳ ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ. ನಿಷ್ಠೆಯಿಂದ ಬದ್ಧತೆಯಿಂದ ಮತ್ತು ಕೌಶಲ್ಯದಿಂದ ಕಲಿತರೆ ಬದುಕು ಸಾರ್ಥಕವಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸೋಮಶೇಖರ ಕೆ.ಕೆ. ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ದೊಡ್ಡರಸಯ್ಯಜಿ ವಂದಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ.ಸಿದ್ದರಾಜು, ಡಾ.ಭುವನೇಶ್ ಹಾಜರಿದ್ದರು. ಅಧ್ಯಾಪಕಿ ಯಶಸ್ವಿನಿ ಪಂಡಿತ್ ಪ್ರಾರ್ಥಿಸಿದರು. ಕು. ಅಂಕಿತ ನಿರೂಪಿಸಿದರು. ಭೂಗೋಳಶಾಸ್ತ್ರ ಅಂತಿಮ ಬಿಎ. ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಎಚ್.ವಿ.ಅನಂತಸುಬ್ಬರಾವ್ ಅವರಿಗೆ ಶ್ರದ್ಧಾಂಜಲಿ.....



ಹಿರಿಯ ಕಾರ್ಮಿಕ ಮುಖಂಡ ಎಚ್.ವಿ.ಅನಂತಸುಬ್ಬರಾವ್ ನಿಧನರಾದ ಹಿನ್ನೆಲೆಯಲ್ಲಿ ಮೈಸೂರು ಬನ್ನಿಮಂಟಪದ ಗ್ರಾಮಾಂತರ ಘಟಕ–3ರಲ್ಲಿ ಸಾರಿಗೆ ನೌಕರರು ಶ್ರದ್ಧಾಂಜಲಿ ಅರ್ಪಿಸಿದರು. ಈ ವೇಳೆ ಕಾರ್ಮಿಕ ಮುಖಂಡರಾದ ಎಸ್.ಡಿ.ಬಂಡಿ, ಮುರುಗೇಶ್, ಪ್ರೇಮ್‌ಕುಮಾರ್, ಮಹಾಂತೇಶ್, ಅಮರೇಶ್, ಶಂಕರಲಿಂಗಾರೆಡ್ಡಿ, ಮೊಹಮ್ಮದ್ ಸಾಬ್ ನದಾಫ್, ಬಾಲಪ್ಪ, ಅರಬಾವಿ, ಆರ್.ಆರ್.ಗಾಣಿಗೇರ್, ವಿಶ್ವನಾಥ್ ರೈ ಸೇರಿದಂತೆ ಇತರರಿದ್ದರು.

ಇಂದು ಮೈಸೂರಲ್ಲಿ ಅಂಗನವಾಡಿ ಹಬ್ಬ

ಮೈಸೂರು: ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ಜಾಗೃತಿ ಸಹಯೋಗದಿಂದ ಅಂಗನವಾಡಿಗಳಲ್ಲಿ ಬಾಲ್ಯದ ಆರೈಕೆ ಮತ್ತು ಶಿಕ್ಷಣ ಆಚರಣೆ ಸಂಭ್ರಮದ ಪ್ರಯುಕ್ತ ಫೆ.11ರಂದು ಅಂಗನವಾಡಿ ಹಬ್ಬವನ್ನು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ವಿಜಯನಗರದ 2ನೇ ಹಂತದಲ್ಲಿರುವ ಮಹರ್ಷಿ ವಾಲ್ಮೀಕಿ ಭವನದಲ್ಲಿ ಆಯೋಜಿಸಲಾಗಿದೆ.

ಶಿವಶರಣರು ವಚನಗಳ ಮೂಲಕ ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದರು

- ಶಾಸಕ ಹರೀಶ್‌ಗೌಡರಿಂದ ಶಿವಶರಣರ ಸ್ಮರಣೆ
- ವಿದ್ಯಾರ್ಥಿಗಳಿಗೆ ಶರಣರ ವಚನಗಳ ತಿಳಿಸುವ ಕಾರ್ಯವಾಗಬೇಕು

ಮೈಸೂರು,ಫೆ.10(ಎಂಟಿವೈ)– ಶಿವಶರಣರು ವಚನಗಳ ಮೂಲಕ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಪ್ರಯತ್ನಿಸಿ ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದು, ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೆ ಶರಣರ ವಚನಗಳ ಸಾರವನ್ನು ಪಠ್ಯಕ್ರಮಗಳ ಮೂಲಕ ತಿಳಿಸಲು ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಕೆ.ಹರೀಶ್ ಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಲಾಗಿದ್ದ 'ಕಾಯಕ ಶರಣರ ಜಯಂತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಂದಿನ ಪೀಳಿಗೆಗೆ ಶಿವ ಶರಣರ ವಿಚಾರಧಾರೆ ತಿಳಿಸಬೇಕು. ವಚನ ಇತಿಹಾಸವು ಮರೆಯಾಗುತ್ತಿದ್ದು, ಪ್ರವಚನ ಪ್ರಶ್ನೋತ್ತರ ಮತ್ತು ವಚನಗಳು ಪುಸ್ತಕಗಳನ್ನು ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ವಚನ ಇತಿಹಾಸವನ್ನು ಬೋಧನೆ ಮಾಡಬೇಕು. ವಚನಕಾರರ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಸಮಾಜದಲ್ಲಿ ಸುಧಾರಣೆ ತರಲು ಸಾಧ್ಯ ಎಂದರು.



ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ 'ಕಾಯಕ ಶರಣರ ಜಯಂತಿ' ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್ ಗೌಡ ಕಾಯಕ ಶರಣರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ಇತಿಹಾಸವನ್ನು ತಿದ್ದಲು ಸಾಧ್ಯವಿಲ್ಲ. ಅದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಭಾಷೆ, ಧರ್ಮ ಜಾತಿಯನ್ನು ಸಮಾಜದಲ್ಲಿ ಸಮಸ್ಯೆಗಳನ್ನಾಗಿ ನಾವೇ ಸೃಷ್ಟಿಸಿಕೊಂಡಿದ್ದೇವೆ. ಏಳು–ಬೀಳುಗಳನ್ನು ತಿಳಿದು ಜೀವನ ನಡೆಸುವುದು ಅತ್ಯಗತ್ಯ. ನಾವು ಸಮಾಜದಲ್ಲಿ ಬೇರೆಯವರೊಂದಿಗೆ ಪೈಪೋಟಿಗೆ ಬಿದ್ದು ಜೀವನ ಮಾಡುತ್ತಿದ್ದೇವೆ. ಮಾನವ ಅತಿಯಾದ ದುರಾಸೆಗೆ ಒಳಗಾಗಿ ಶಾಂತಿ–ನೆಮ್ಮದಿ ಕಳೆದು ಕೊಳ್ಳುವಂತಾಗಿದೆ ಎಂದು ವಿಷಾದಿಸಿದರು.

ಸಂವಿಧಾನದ ಆಶಯದಂತೆ ಬದುಕಬೇಕು: ಜನರು ಅವರ ಅವಶ್ಯಕತೆಗೆ ತಕ್ಕಂತೆ ಬದುಕು ಕಟ್ಟಿಕೊಳ್ಳಬೇಕು. ಸಂವಿಧಾನದ ಆಶಯದಡಿ ಎಲ್ಲರೂ ಜೀವನದಲ್ಲಿ ಮುಂದೆ ಬರಬೇಕು. ಹುಟ್ಟು ದೇವರ ಸೃಷ್ಟಿ, ಹುಟ್ಟಿದ ಮೇಲೆ ಜೀವನ ಹೇಗೆ ನಡೆಸಿಕೊಂಡು ಹೋಗುತ್ತೇವೆ ಎಂಬುದು ಬಹಳ ಮುಖ್ಯ. ತಮ್ಮ ಕೆಲಸ ಯಾವುದೇ ಇರಲಿ ಭೇದ–ಭಾವ, ಕೀಳರಿಮೆ ಇಲ್ಲದೆ ಬದುಕನ್ನು ಸಾಗಿಸಬೇಕು. ಸಮಾಜದಲ್ಲಿ ಸೌಲಭ್ಯಗಳಿಂದ ವಂಚಿತರಾದವರು ಶಿಕ್ಷಣದಿಂದ ಮೇಲೆ ಬರಲಿಕ್ಕೆ ಸಾಧ್ಯ. ಆದ್ದರಿಂದ ಮಕ್ಕಳ ಉಜ್ವಲ ಭವಿಷ್ಯಕ್ಕೆ ಶಿಕ್ಷಣ ಅಗತ್ಯ. ನಮ್ಮ ಜೀವನ ಬೇರೆಯವರಿಗೆ ಪ್ರೇರಣೆಯಾಗಿರಬೇಕು ಎಂದು ಹೇಳಿದರು.

ಮನುಷ್ಯನ ಮನಸ್ಥಿತಿಯಿಂದಷ್ಟೇ ಜಾತಿ ನಾಶ: ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಮಾತನಾಡಿ, ಜೀವನದಲ್ಲಿ ಸುಳ್ಳು, ಮೋಸ, ವಂಚನೆ ಇಲ್ಲದೆ ದುಡಿದು ತಿನ್ನುವವರೇ ಕಾಯಕ ಸಮಾಜ. ಸಮಾಜದಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಸಾಧ್ಯವಾಗಿರಲಿಲ್ಲ. ಹಲವಾರು ಶರಣ ವಚನಕಾರರು ಹೋರಾಟ ನಡೆಸಿ, ಸಮಾಜದಲ್ಲಿ ಸುಧಾರಣೆ ತರಲು ಮುಂದಾದರು. ಸಮಸಮಾಜ ನಿರ್ಮಾಣ, ದೈಹಿಕ, ಮಾನಸಿಕ, ಸಾಮಾಜಿಕವಾಗಿ ಜನ ಸದೃಢವಾಗಿರಬೇಕೆಂಬ ಆಶಯ ಹೊಂದಿದ್ದರು. ಶರಣ ಸಂದೇಶ ಅಳವಡಿಸಿಕೊಂಡರೆ ಸಮಾಜ ಸುಧಾರಣೆಯಾಗಲು ಸಾಧ್ಯ. ಜಾತಿ ವ್ಯವಸ್ಥೆಯನ್ನು ನಾಶ ಮಾಡಲು ಯಾವುದೇ ಔಷಧಿ ಇಲ್ಲ ಮನುಷ್ಯನ ಮನಸ್ಥಿತಿಯಿಂದ ಹೋಗಲಾಡಿಸಲು ಮಾತ್ರ ಸಾಧ್ಯ. ಇಂದಿನ ಸ್ವಾಮೀಜಿಗಳು ಸಮಾಜವನ್ನು ತಿದ್ದುವ ಕೆಲಸ ಮಾಡಬೇಕು. ಜೀವನದಲ್ಲಿ ಪ್ರತಿಯೊಬ್ಬರು ಅವಕಾಶ ಬಂದಾಗ ಅದನ್ನು ಉಪಯೋಗಿಸಿಕೊಳ್ಳಬೇಕು. ಸಮಾಜದಲ್ಲಿ ಮಕ್ಕಳಿಗೆ ಶಿಕ್ಷಣ ನೀಡಿ, ವಿದ್ಯಾವಂತರನ್ನಾಗಿ ಮಾಡುವಂತೆ ಸಲಹೆ ನೀಡಿದರು.

ಇದೇ ವೇಳೆ ಲೇಖಕ ಕೆ.ಪಿ.ರಾಜಯ್ಯ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಶಿವ ಶರಣರ ಹರಳಯ್ಯ ಮಹಾಸಂಸ್ಥಾನ ಮಠದ ಶ್ರೀ ಶ್ರೀ ರುದ್ರಪ್ಪ ಹರಳಯ್ಯ ಸ್ವಾಮೀಜಿ, ವಿಧಾನಸಭಾ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್, ಮುಖಂಡರಾದ ಮೂಗೂರು ನಂಜುಂಡಸ್ವಾಮಿ, ಹೆಚ್.ಕೆ.ರಾಮು, ಎಡತೊರೆ ನಿಂಗರಾಜು, ಪಾಳ್ಯ ರಾಜಪ್ಪ, ಕೆ.ಆರ್.ನಗರದ ಮಹದೇವ ಇನ್ನಿತರರು ಉಪಸ್ಥಿತರಿದ್ದರು.

ಅರ್ಹರಿಂದ ಅರ್ಜಿ ಸ್ವೀಕರಿಸಿ ಸೈಟು ಹಂಚಿಕೆಗೆ ಕ್ರಮ ಕೈಗೊಳ್ಳಿ

ಅಧಿಕಾರಿಗಳಿಗೆ ಶಾಸಕ ದರ್ಶನ್ ತಾಕೀತು



ಸಭೆಯಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿದರು.

ಪಾಂಡವಪುರ, ಫೆ.10– ಪುರಸಭೆ ವ್ಯಾಪ್ತಿಯ ಹಾರೋಹಳ್ಳಿ ಬಳಿಯ 178 ಸೈಟುಗಳ ಹಂಚಿಕೆ ಸಂಬಂಧ ನಿವೇಶನ ರಹಿತ ಅರ್ಹ ವ್ಯಕ್ತಿಗಳಿಂದ ಅರ್ಜಿ ಸ್ವೀಕರಿಸಿ, ಹಲವು ಮಾನದಂಡ ರೂಪಿಸಿ ಸೈಟ್ ಹಂಚಿಕೆಗೆ ಕ್ರಮ ಕೈಗೊಳ್ಳಿ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ಸತೀಶ್ ಕುಮಾರ್ ಸೈಟು ಹಂಚಿಕೆ ಕುರಿತು ಶಾಸಕರಲ್ಲಿ ಅನುಮತಿ ಕೋರಿದರು. ಈ ವೇಳೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಪುರಸಭೆ ವ್ಯಾಪ್ತಿಯಲ್ಲಿ ನಿವೇಶನ ಇಲ್ಲದ ಬಡವರಿಗೆ ಸೈಟು ಹಂಚಿಕೆ ಮಾಡಲು ಮಾನದಂಡ ರಚಿಸಿ ಅದರ ಅನುಸಾರವಾಗಿ ಅರ್ಜಿ ಸ್ವೀಕರಿಸಿ ಎಂದು ಸೂಚನೆ ನೀಡಿದರು.

ಪಟ್ಟಣ ವ್ಯಾಪ್ತಿಯ ಕೆಲವಡೆ ರಸ್ತೆ ನಿರ್ಮಾಣಕ್ಕಾಗಿ ಮೂವರು ತಮ್ಮ ನಿವೇಶನಗಳನ್ನು ಬಿಟ್ಟು ಕೊಟ್ಟಿದ್ದಾರೆ. ಹಾರೋಹಳ್ಳಿ ಬಳಿ ಹಂಚಿಕೆ ಮಾಡಲಾಗುತ್ತಿರುವ 178 ನಿವೇಶನಗಳ ಪೈಕಿ ಮೂವರಿಗೆ ಒಂದೊಂದು ನಿವೇಶನ ಕಾಯ್ದಿರಿಸಿ ಉಳಿಕೆ 175 ಸೈಟುಗಳನ್ನು ಹಂಚಿಕೆ ಮಾಡಬೇಕು. ನಿವೇಶನ ಹಂಚಿಕೆಗೂ ಮುನ್ನ ಅಲ್ಲಿಗೆ ಬೇಕಿರುವ ಮೂಲ ಸೌಕರ್ಯಗಳಾದ ರಸ್ತೆ, ಚರಂಡಿ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಕಲ್ಪಿಸಿ ನಂತರ ನಿವೇಶನ ಹಂಚಿಕೆ ಮಾಡಬೇಕು ಎಂದು ಪುರಸಭೆ ಮುಖ್ಯಾಧಿಕಾರಿಗೆ ಸೂಚಿಸಿದರು.

ಪುರಸಭೆ ಸದಸ್ಯ ವಕೀಲ ಮುರುಳೀಧರ್ ಮಾತನಾಡಿ, ಪುರಸಭೆ ವ್ಯಾಪ್ತಿಯ ಸಾಕಷ್ಟು ಸರ್ಕಾರಿ ಜಾಗಗಳನ್ನು ಉಳ್ಳವರು ಅತಿಕ್ರಮಣ ಮಾಡಿಕೊಂಡಿದ್ದಾರೆ. ಹಾಗಾಗಿ ಶಾಸಕರು ನಮ್ಮ ವ್ಯಾಪ್ತಿಯ ಸರ್ಕಾರ ಹಾಗೂ ಪುರಸಭೆ ಆಸ್ತಿಯನ್ನು ಗುರುತಿಸಿ ಅಲ್ಲಿ ಮತ್ತಷ್ಟು ನಿವೇಶನಗಳನ್ನು ಹಂಚಿಕೆ ಮಾಡಲು ಕ್ರಮ ವಹಿಸಬೇಕು. ಪಟ್ಟಣದ ರೋಟರಿ ಪಕ್ಕದಲ್ಲಿರುವ ಸರ್ಕಾರಿ ಜಾಗವನ್ನು ಕಲಾಮಂದಿರ ನಿರ್ಮಾಣಕ್ಕೆ ಬಳಸಿಕೊಳ್ಳಬೇಕು. ಜೊತೆಗೆ ಪುರಸಭೆ ಆಸ್ತಿ ಎಲ್ಲಿವೆ? ಕೋರ್ಟ್‌ನಲ್ಲಿ ಎಷ್ಟು ಪ್ರಕರಣಗಳಿವೆ ಎನ್ನುವ ಕುರಿತು ಮಾಹಿತಿ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ರೋಟರಿ ಶಾಲೆ ಪಕ್ಕದಲ್ಲಿರುವ ಸರ್ಕಾರಿ ಖಾಲಿ ಜಾಗವನ್ನು ಈಗಾಗಲೇ ಸರ್ವೆ ಇಲಾಖೆಗೆ ಮೀಸಲಿರಿಸಲಾಗಿದೆ. ಕಲಾ ಮಂದಿರ ನಿರ್ಮಾಣಕ್ಕೆ ಬೇರೆಡೆ 5 ಎಕರೆ ಜಮೀನು ಗುರುತಿಸಲಾಗಿದೆ. ಜೊತೆಗೆ 15 ಎಕರೆಯಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲು ಚಂದ್ರೆ ಬಡಾವಣೆ ಬಳಿ ಸರ್ಕಾರಿ ಜಾಗ ಗುರುತಿಸಲಾಗಿದೆ. ಗ್ರಂಥಾಲಯ ನಿರ್ಮಾಣಕ್ಕೆ 1 ಎಕರೆ ಜಾಗ ಗುರುತಿಸಲಾಗಿದೆ. ಪುರಸಭೆ ವ್ಯಾಪ್ತಿಯ ಆಸ್ತಿ, ಕೋರ್ಟ್‌ನಲ್ಲಿರುವ ಪ್ರಕರಣಗಳು, ಹೈಕೋರ್ಟ್‌ನಲ್ಲಿ ಪುರಸಭೆ ಪರವಾಗಿ ಆದೇಶ ಬಂದಿರುವ ಪ್ರಕರಣಗಳ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ನೀಡಬೇಕು. ಜೊತೆಗೆ ಪುರಸಭೆ ವ್ಯಾಪ್ತಿಯಲ್ಲಿ ಅಭಿವೃದ್ಧಿಗೊಳ್ಳದ ರಸ್ತೆಗಳ ಪಟ್ಟಿ ಮಾಡಿ ಅದರ ಅಂದಾಜು ಪಟ್ಟಿ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪುರಸಭೆ ಮುಂಭಾಗದ ಸಂತೆ ಮೈದಾನದಲ್ಲಿ 70 ಕೋಟಿ ವೆಚ್ಚದಲ್ಲಿ 72 ಅಂಗಡಿ ಮಳಿಗೆ ನಿರ್ಮಿಸಲು ಚಿಂತಿಸಲಾಗಿದೆ. ಇದಕ್ಕೆ ಸರ್ಕಾರದಿಂದ ಅನುದಾನ ಸಿಗುವುದು ಕಷ್ಟವಾಗಿರುವುದರಿಂದ ಕೆಯುಐಡಿಎಫ್‌ಸಿ ವತಿಯಿಂದ ಶೇ.70ರಷ್ಟು ಸಾಲ ಪಡೆದು ಉಳಿದ ಹಣವನ್ನು ಪುರಸಭೆಯಿಂದ ಬಳಸಿಕೊಳ್ಳಬಹುದು. ಸಾಲ ಪಡೆದ ಹಣದ ಪಾವತಿ ಬಗ್ಗೆ ಪುರಸಭೆಯಿಂದ ಕೆಯುಐಡಿಎಫ್‌ಸಿಗೆ ಮಾಹಿತಿ ಸಲ್ಲಿಸಬೇಕು. ಇನ್ನೂ 10ನೇ ಹಣಕಾಸಿನಲ್ಲಿ ನಿರ್ಮಿಸಿರುವ 26 ಮಳಿಗೆ ಹರಾಜು ಮಾಡುವ ಪ್ರಕ್ರಿಯೆಗೆ ಸಭೆಯಲ್ಲಿ ಅನುಮತಿ ನೀಡಲಾಯಿತು.

ಕಾವೇರಿ ಪಕ್ಕದಲ್ಲಿದ್ದರೂ ಪಟ್ಟಣದ ಕೆಲವು ಬಡಾವಣೆಗೆ ಕುಡಿಯಲು ಕಾವೇರಿ ನೀರು ಇಲ್ಲ. ಹಾಗಾಗಿ ಕಾವೇರಿಯಿಂದ ಹೆಚ್ಚುವರಿ ಪೈಪ್‌ಲೈನ್ ಅಳವಡಿಕೆ ಮಾಡಿ ಕುಡಿಯಲು ಕಾವೇರಿ ನೀರು ಪೂರೈಕೆ ಮಾಡಲು ಕ್ರಮವಹಿಸಬೇಕು. ಪುರಸಭೆಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಒಬ್ಬರೇ ಎರಡು ಮೂರು ಜವಾಬ್ದಾರಿ ಹೊತ್ತು ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಕ್ರಮ ವಹಿಸಬೇಕೆಂದು ಸದಸ್ಯ ಮುರುಳೀಧರ್ ಶಾಸಕರಲ್ಲಿ ಮನವಿ ಮಾಡಿದರು. ಸಭೆಯಲ್ಲಿ ಉಪವಿಭಾಗಾಧಿಕಾರಿ ಶ್ರೀನಿವಾಸ್, ಮುಖ್ಯಾಧಿಕಾರಿ ಸತೀಶ್ ಸೇರಿದಂತೆ ನಿರ್ದೇಶಕರು ಹಾಜರಿದ್ದರು.

ಮಹಿಳೆಯರಿಗೆ ಗರ್ಭ ಕಂಠದ ಕ್ಯಾನ್ಸರ್ ಅರಿವು ಅಗತ್ಯ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ಕಾರ್ಯಕ್ರಮವನ್ನು ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ನಾಗಮಂಗಲ, ಫೆ.10– ಮಹಿಳೆಯರಿಗೆ ಗರ್ಭ ಕಂಠದ ಕ್ಯಾನ್ಸರ್ ಅರಿವು ಅಗತ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಗರ್ಭ ಕಂಠದ ಕ್ಯಾನ್ಸರ್ ಜಾಗೃತಿ ಮಾಸ ಹಾಗೂ ಜಂತು ಹುಳು ನಿವಾರಣೆ ದಿನದ ಅಂಗವಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಮಂಡ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞವೈದ್ಯರ ಸಂಘದಿಂದ ಆಯೋಜಿಸಿದ್ದ ಗರ್ಭ ಕಂಠ ಕ್ಯಾನ್ಸರ್ ಜಾಗೃತಿ ಅಭಿಯಾನ ಮತ್ತು ಜಂತು ಹುಳು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗರ್ಭ ಕಂಠ ಕ್ಯಾನ್ಸರ್ ಬಗ್ಗೆ ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಇಲಾಖೆಯವರು ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗೆ ತಿಳಿಸಿ ಅರಿವು ಮೂಡಿಸಬೇಕು ಎಂದರು.

ಗ್ರಾಮೀಣ ಜನರ ಆರೋಗ್ಯದ ಹಿತದೃಷ್ಟಿಯಿಂದ ಮುಗುಳು ನಗೆ ದಂತ ಚಿಕಿತ್ಸೆ, ಹೃದಯ ವೈಶಾಲ್ಯ ಚಿಕಿತ್ಸೆ ಸೇರಿದಂತೆ ಅನೇಕ ಆರೋಗ್ಯ ಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದೇವೆ. 14 ವರ್ಷದ ಹೆಣ್ಣು ಮಕ್ಕಳಿಗೆ ವ್ಯಾಕ್ಸಿನೇಷನ್ ಹಾಕುವ ವ್ಯವಸ್ಥೆ ಮಾಡಲಾಗಿದೆ. ಪ್ರತಿಯೊಬ್ಬರೂ ವ್ಯಾಕ್ಸಿನೇಷನ್ ಪಡೆದು ಆರೋಗ್ಯವಂತಾಗಿರಬೇಕು. 18 ವರ್ಷ ಮೇಲ್ಪಟ್ಟ ಮಹಿಳೆಯರು ಮೂರು ವರ್ಷಕ್ಕೆ ಒಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಈ ವೇಳೆ ಆರೋಗ್ಯದ ಸಮಸ್ಯೆ ಕಂಡು ಬಂದರೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಿ ಎಂದರು.

ಭಾರತೀಯ ಮಹಿಳೆಯರು ಎದುರಿಸುವ ತೀವ್ರವ ಗಂಭೀರ ಅನಾರೋಗ್ಯ ಸಮಸ್ಯೆಗಳಲ್ಲಿ ಗರ್ಭ ಕಂಠದ ಕ್ಯಾನ್ಸರ್ ಕೂಡ ಒಂದಾಗಿದೆ. ಮಹಿಳೆಯರು ನಿಯಮಿತವಾಗಿ ವೈದ್ಯಕೀಯ ತಪಾಸಣೆಗೆ ಒಳಗಾದಲ್ಲಿ ಈ ಕ್ಯಾನ್ಸರ್‌ನಿಂದ ದೂರವಿರಬಹುದು ಎಂದರು. ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ.ಕೃಷ್ಣ, ಡಿಹೆಚ್‌ಓ ಮೋಹನ್, ಟಿಹೆಚ್‌ಓ ನಾರಾಯಣ, ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಸನ್ನ ನಾಗಮಂಗಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ.ರಾಜೇಶ್, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಡಿವೈಎಸ್‌ಪಿ ಚಲುವರಾಜು, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್ ಚಲುವರಾಯಸ್ವಾಮಿ, ಮಂಡ್ಯ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರ ಸಂಘದ ಸದಸ್ಯರು ಉಪಸ್ಥಿತರಿದ್ದರು.

ನೀರು ಸರಬರಾಜಿನಲ್ಲಿ ವ್ಯತ್ಯಯ

ಮಂಡ್ಯ, ಫೆ.10– ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆಯಡಿ ಶ್ರೀರಂಗಪಟ್ಟಣ ಸಮೀಪದ ಮೂಲ ಸ್ಥಾವರಕ್ಕೆ ವಿದ್ಯುತ್ ಸರಬರಾಜು ಮಾಡುವ ಶ್ರೀರಂಗಪಟ್ಟಣ ತಾಲೂಕು ವ್ಯಾಪ್ತಿಯ 66/11 ಕೆವಿ ವಿದ್ಯುತ್ ಉಪ ವಿತರಣಾ ಕೇಂದ್ರದ ನಿರ್ವಹಣಾ ಕಾಮಗಾರಿಯನ್ನು ಫೆ.11 ರಂದು ಹಮ್ಮಿಕೊಂಡಿರುವುದರಿಂದ ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಅನ್ನು ಕಡಿತಗೊಳಿಸುವುದಾಗಿ ತಿಳಿಸಿದ್ದಾರೆ. ಹೀಗಾಗಿ ಫೆ.11ರಂದು ಮಂಡ್ಯ ನಗರಕ್ಕೆ ನೀರನ್ನು ಪಂಪು ಮಾಡಲು ಸಾಧ್ಯವಿಲ್ಲದ ಕಾರಣ ಮಂಡ್ಯ ನಗರದ ಸಾರ್ವಜನಿಕರಿಗೆ ಫೆ.11 ಮತ್ತು 12ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಮಾಜದ ಏಳಿಗೆಗೆ ಶಿಕ್ಷಣ, ಒಗ್ಗಟ್ಟು ಅಗತ್ಯ

ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ ಅಧ್ಯಕ್ಷ ಗಂಗಾಧರ್



ಕಾರ್ಯಕ್ರಮವನ್ನು ರೇಷ್ಮೆ ಮಾರುಕಟ್ಟೆ ಮಂಡಳಿ ಅಧ್ಯಕ್ಷ ಗಂಗಾಧರ್ ಉದ್ಘಾಟಿಸಿದರು.

ಶ್ರೀರಂಗಪಟ್ಟಣ, ಫೆ10– ಪ್ರಸ್ತುತ ಸಮಾಜದ ಏಳಿಗೆ ಹಾಗೂ ಹಕ್ಕುಗಳನ್ನು ಪಡೆಯಲು ಶಿಕ್ಷಣದ ಜೊತೆಗೆ ಜನರ ಒಗ್ಗಟ್ಟು ಅಗತ್ಯ ಎಂದು ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ ಅಧ್ಯಕ್ಷ ಗಂಗಾಧರ್ ಅಭಿಪ್ರಾಯಪಟ್ಟರು.

ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ತಾಲೂಕು ಗಂಗಾಮತಸ್ಥರ (ಬೆಸ್ತರ್) ಸಂಘದಿಂದ ನಡೆದ ಶ್ರೀನಿಜಶರಣ ಅಂಬಿಗರ ಚೌಡಯ್ಯ ಅವರ 906ನೇ ಜಯಂತೋತ್ಸವವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ದೊಡ್ಡದು. ಹೀಗಾಗಿ ಯುವ ಶಕ್ತಿಯನ್ನು ಎಲ್ಲಾ ಕಾರ್ಯಕ್ರಮಗಳಲ್ಲಿ ಬಳಸಿಕೊಳ್ಳುವ ಮೂಲಕ ಅವರಲ್ಲಿ ಒಗ್ಗಟ್ಟು ಮೂಡಿಸಬೇಕು. ಇತರ ಮುಂದುವರಿದ ಸಮುದಾಯಗಳಂತೆ ನಮ್ಮ ಸಮಾಜವೂ ಬೆಳೆಯಬೇಕು. ಸರ್ಕಾರದಿಂದ ಸಿಗುವ ಅನುದಾನ ಹಾಗೂ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಲು ಎಲ್ಲರೂ ಕೈಜೋಡಿಸಬೇಕು ಎಂದರು.

ಇದಕ್ಕೂ ಮುನ್ನಾ ಪಟ್ಟಣದ ಕುವೆಂಪು ವೃತ್ತದಿಂದ ಅಂಬಿಗರ ಚೌಡಯ್ಯನವರ ಭಾವಚಿತ್ರವನ್ನು ಬೆಳ್ಳಿ ರಥದಲ್ಲಿರಿಸಿ, ಮಂಗಳ ವಾದ್ಯ ಹಾಗೂ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಲಾಯಿತು. ಈ ಮೆರವಣಿಗೆ ಪ್ರಮುಖ ರಸ್ತೆಗಳ ಮೂಲಕ ಸಾಗಿ ಶ್ರೀರಂಗನಾಥಸ್ವಾಮಿ ದೇವಾಲಯ ತಲುಪಿತು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಮಾತನಾಡಿದರು. ತಾಲೂಕು ಗಂಗಾಮತಸ್ಥರ ಸಂಘದ ಅಧ್ಯಕ್ಷ ಚಂದ್ರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧ್ಯಕ್ಷ ರಮೇಶ್, ಜಿಪಂ ಮಾಜಿ ಅಧ್ಯಕ್ಷ ಬಿ.ಲಿಂಗಯ್ಯ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಪುಟ್ಟಮಾದಯ್ಯ, ಮೇಳಾಪುರ ಗ್ರಾಪಂ ಅಧ್ಯಕ್ಷೆ ಸುನಂದಾ, ಜಿಪಂ ಮಾಜಿ ಸದಸ್ಯೆ ಪ್ರಭಾವತಿ, ಪುರಸಭೆ ಮಾಜಿ ಸದಸ್ಯ ರಾಜು, ಜಿಲ್ಲಾ ಉಪಾಧ್ಯಕ್ಷ ಸಿದ್ದಪ್ಪ ಸೇರಿದಂತೆ ಇತರರಿದ್ದರು.

ಶೀಳನೆರೆ ಸರ್ಕಾರಿ ಶಾಲೆಯಲ್ಲಿ ಮಕ್ಕಳ ಸಂತೆ

ಮಕ್ಕಳಿಂದ ತರಕಾರಿ, ತಿಂಡಿ ತಿನಿಸು ಮಾರಾಟ



ಶೀಳನೆರೆ ಸರ್ಕಾರಿ ಶಾಲೆಯಲ್ಲಿ ನಡೆದ ಮಕ್ಕಳ ಸಂತೆಯಲ್ಲಿ ಭರ್ಜರಿ ವ್ಯಾಪಾರ ನಡೆಯಿತು.

ಕೆ.ಆರ್.ಪೇಟೆ, ಫೆ.10– ಅಕ್ಕಾ ಬನ್ನಿ.. ಅಣ್ಣಾ ಬನ್ನಿ.. ಬನ್ನಿ ಸಾರ್ ಬನ್ನಿ.. ತಾಜಾ ತರಕಾರಿ... ತಾಜಾ ಸೊಪ್ಪು... ತಾಜಾ ಹಣ್ಣು. ಇವೆ.. ನಮ್ಮಲ್ಲಿ ತಗೊಳ್ಳಿ ಕಡಿಮೆ ಬೆಲೆ.. ಬನ್ನಿ ಬೇಗ ಬನ್ನಿ.. ಎಂದು ಕೂಗುತ್ತಾ ತಾವು ಮನೆಯಿಂದ ತಂದಿರುವ ತರಕಾರಿ, ಸೊಪ್ಪು ಸೇರಿದಂತೆ ಬಗೆ ಬಗೆಯ ವಸ್ತುಗಳು ಹಾಗೂ ತಿಂಡಿ–ತಿನಿಸುಗಳನ್ನು ಪ್ರದರ್ಶನ ಮಾಡಿ ಗ್ರಾಹಕರನ್ನು ಆಕರ್ಷಿಸಿ ಮಾರಾಟ ಮಾಡುವ ಮೂಲಕ ವಿದ್ಯಾರ್ಥಿಗಳು ಲಾಭ–ನಷ್ಟದ ಲೆಕ್ಕಾಚಾರ ಮತ್ತು ಗ್ರಾಹಕರನ್ನು ಸೆಳೆಯುವ ಕಲೆ ಕಲಿತುಕೊಂಡರು.

ತಾಲೂಕಿನ ಶೀಳನೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಮಕ್ಕಳ ಸಂತೆ ಕಾರ್ಯಕ್ರಮದಲ್ಲಿ ತಾಜಾ ತರಕಾರಿ ಇದೆ ಬನ್ನಿ, ಟೊಮೋಟೋ ಇದೆ, ಮೂಲಂಗಿ ಇದೆ. ಕ್ಯಾರೆಟ್–ಬಿಟ್ರೂಟ್, ಅವರೇಕಾಯಿ, ಕೊತ್ತಂಬರಿ ಸೊಪ್ಪು, ದಂಟಿನಸೊಪ್ಪು, ಬಿನೀಸ್, ಬದನೇಕಾಯಿ, ಈರುಳ್ಳಿ, ಬೆಳ್ಳುಳ್ಳಿ ಇದೆ ಬನ್ನಿ ತಗೊಳಿ ತುಂಬಾ ಕಡಿಮೆ ಬೆಲೆ ಎಂದು ಕೂಗುತ್ತಾ ಪೈಪೋಟಿ ಮೇಲೆ ಗ್ರಾಹರಕರನ್ನು ಕರೆದು ಭರ್ಜರಿ ವ್ಯಾಪಾರ ಮಾಡಿದರು. ಇದರ ಜೊತೆಗೆ ಬೇಲ್‌ಪುರಿ, ರವೆ ಉಂಡೆ, ಚುರುಮುರಿ, ಬಜ್ಜಿ, ಬೊಂಡಾ, ಡ್ರೈ ಜಾಮೂನು, ಎಳೆನೀರು ಮಾರಾಟ ಜೋರಾಗಿಯೇ ನಡೆಯಿತು.

ಗ್ರಾಹಕರಾದ ಪೋಷಕರು ಮಕ್ಕಳೊಂದಿಗೆ ಚೌಕಾಸಿ ಮಾಡಿ ಖರೀದಿ ಮಾಡಿ ಒಂದು ತಗೊಂಡ್ರೆ ಎಷ್ಟು, 10 ತಗೊಂಡ್ರೆ ಎಷ್ಟು ಆಗುತ್ತೆ ಎಂಬ ಲೆಕ್ಕಾಚಾರದ ಅರಿವನ್ನು ಮಕ್ಕಳಲ್ಲಿ ಮೂಡಿಸಿದರು.

ಶಾಲೆ ಮುಖ್ಯ ಶಿಕ್ಷಕ ಹೆಚ್.ಜಿ.ಅನಂತು ಮಾತನಾಡಿ, ವ್ಯಾಪಾರ ವಹಿವಾಟಿನಿಂದ ಮಕ್ಕಳಲ್ಲಿ ನಿತ್ಯ ಜೀವನದ ಅನುಭವವಾಗುತ್ತದೆ. ತಂದೆ, ತಾಯಿ ಅಂಗಡಿಗೆ ಹೋಗಿ ತರಕಾರಿ ತರಲು ತಿಳಿಸಿದರೆ ಯಾವ ರೀತಿ ವ್ಯಾಪಾರ ಮಾಡಬೇಕೆಂಬ ಅರಿವು ಸಿಗುತ್ತದೆ. ಮಕ್ಕಳು ಕೇವಲ ಆಟ ಪಠಕ್ಕೆ ಸೀಮಿತವಾಗದೆ ಲೋಕ ಜ್ಞಾನ, ವ್ಯವಹಾರಿಕ ಜ್ಞಾನ ತಿಳಿದುಕೊಳ್ಳಲು ಮಕ್ಕಳಸಂತೆ ಸಹಕಾರಿ. ಹಾಗಾಗಿ ನಮ್ಮ ಶಾಲೆಯಲ್ಲಿ ಹಲವು ವರ್ಷಗಳಿಂದ ಸರ್ಕಾರಿ ನಿಯಮದ ಪ್ರಕಾರ ಮಕ್ಕಳ ಸಂತೆ ಆಯೋಜಿಸಲಾಗುತ್ತಿದೆ ಎಂದರು.

ರಾಜ್ಯ ಸಹಕಾರ ಮಹಾ ಮಂಡಲದ ನಿರ್ದೇಶಕ ಎಸ್.ಎಲ್.ಮೋಹನ್ ಮಾತನಾಡಿ, ಮಕ್ಕಳಿಗೆ ತಮ್ಮ ಪೋಷಕರ ಕಷ್ಟ ಸುಖಗಳು ತಿಳಿಯಬೇಕು. ಹೊರ ಜಗತ್ತಿನಲ್ಲಿ ಹೇಗೆ ಜೀವನ ರೂಪಿಸಿಕೊಳ್ಳಬೇಕು ಎಂಬುದನ್ನು ತಿಳಿಸುವ ಉದ್ದೇಶದಿಂದ ಶಿಕ್ಷಣ ಇಲಾಖೆ ಮಕ್ಕಳ ಸಂತೆ ಆಯೋಜಿಸುತ್ತಿದೆ ಎಂದರು.

ಶಿಕ್ಷಣ ಸಂಯೋಜಕ ಜೆ.ಎಸ್.ಸುರೇಶ್, ಎಸ್‌ಡಿಎಂಸಿ ಅಧ್ಯಕ್ಷ ಕುಮಾರ್, ಉಪಾಧ್ಯಕ್ಷ ನಾಗೇಶ್, ಗ್ರಾಪಂ ಅಧ್ಯಕ್ಷ ಯುವರಾಜ್, ಉಪಾಧ್ಯಕ್ಷ ಎಸ್.ಕೆ.ಪ್ರಕಾಶ್, ಶಿಕ್ಷಣ ಸಂಯೋಜಕ ಸುರೇಶ್, ಸಿಆರ್‌ಪಿ ಅಣ್ಣಯ್ಯ, ಮಹೇಶ್, ಶಿಕ್ಷಕರಾದ ರಾಧ.ಸಿ, ಚಂದ್ರಕಲಾ, ವೀಣಾ, ಸುನೀತ, ಶ್ರೀನಿವಾಸ್, ಅನಿತ, ಚಂದನ ಇತರರಿದ್ದರು.

ಮೂರನೇ ಪುಟದಿಂದ

ನಿವೇಶನದಾರರಿಗೆ ಲೋಕಾಯುಕ್ತ ನೋಟಿಸ್

ಈ 50:50 ಅನುಪಾತದಲ್ಲಿ 1,055 ನಿವೇಶನಗಳು ಅಕ್ರಮವಾಗಿ ಮಂಜೂರಾಗಿದ್ದು, ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಭಾರೀ ಹಗರಣ ನಡೆದಿದೆ ಎಂಬ ಆರೋಪ ಕೇಳಿ ಬಂದಿತ್ತು ಈ ಸಂಬಂಧ 'ಮೈಸೂರು ಮಿತ್ರ' ದಾಖಲಾತಿ ಆಧರಿಸಿ ಸರಣಿ ವರದಿ ಮಾಡಿತ್ತು.

ಈ ಬಗ್ಗೆ ಮೈಸೂರು ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಿದ್ದು, 134 ಪ್ರಕರಣಗಳನ್ನು ದಾಖಲಿಸಿದ್ದಾರೆ. ಈಗ ಶೇಕಡ 50:50 ಅನುಪಾತದಲ್ಲಿ ನಿವೇಶನ ಪಡೆದ 40 ಮಂದಿಗೆ ವಿಚಾರಣೆಗೆ ಹಾಜರಾಗುವಂತೆ ಲೋಕಾಯುಕ್ತರು ನೋಟಿಸ್ ಜಾರಿ ಮಾಡಿದ್ದಾರೆ.

2016ರಿಂದ 2024ರ ಅವಧಿಯಲ್ಲಿ 1,055 ನಿವೇಶನಗಳನ್ನು ಶೇಕಡ 50:50 ಅನುಪಾತದ ಯೋಜನೆಯಲ್ಲಿ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ ನಿವೇಶನಗಳನ್ನು ಭೂ ಮಾಲೀಕರಿಗೆ ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ.

ಅಂದು ಮುಡಾ ಆಯುಕ್ತರಾಗಿದ್ದ ನಟೇಶ್ ಹಾಗೂ ದಿನೇಶ್ ಕುಮಾರ್ ಅವರು ಈ ಹಗರಣದ ಮೂಲ ರೂವಾರಿಗಳು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ನಟೇಶ್ ಹಾಗೂ ದಿನೇಶ್ ಕುಮಾರ್ ಅವರನ್ನು ಲೋಕಾಯುಕ್ತರು ಮಾತ್ರವಲ್ಲದೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ. ಈ ಪ್ರಕರಣದಲ್ಲಿ ದಿನೇಶ್ ಕುಮಾರ್ ಇನ್ನೂ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಈ ಪ್ರಕರಣದ ಬಗ್ಗೆ ತನಿಖೆ ನಡೆಸಲು ಲೋಕಾಯುಕ್ತರು ಈಗಾಗಲೇ ಹೈಕೋರ್ಟ್ ಅನುಮತಿ ಪಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ಅಕ್ರಮವಾಗಿ ನಿವೇಶನ ಮಂಜೂರು ಮಾಡಿಸಿಕೊಂಡಿದ್ದ ರೈತರು, ಜಿಪಿಎ ಪಡೆದವರನ್ನು ಲೋಕಾಯುಕ್ತರು ಒಬ್ಬೊಬ್ಬರನ್ನಾಗಿ ಕರೆದು ವಿಚಾರಣೆ ಮಾಡುತ್ತಿದ್ದಾರೆ.

ಈಗ 40 ರೈತರಿಗೆ ನೋಟಿಸ್ ಜಾರಿ ಮಾಡಲಾಗಿದ್ದು, ವಿಚಾರಣೆಗೆ ಒಂದೊಂದು ದಿನಾಂಕವನ್ನು ನಿಗದಿ ಮಾಡಲಾಗಿದೆ. ಆ ದಿನಾಂಕದಂದು ದಾಖಲಾತಿ ಸಮೇತ ವಿಚಾರಣೆಗೆ ಬರುವಂತೆ ತಾಕೀತು ಮಾಡಲಾಗಿದೆ. ಬಡಾವಣೆ ನಿರ್ಮಾಣಕ್ಕಾಗಿ ಮುಡಾ ರೈತರಿಂದ ಭೂಮಿ ಸ್ವಾಧೀನ ಪಡಿಸಿಕೊಂಡಿದೆ. ಇದಕ್ಕಾಗಿ ರೈತರಿಗೆ ಪರಿಹಾರದ ಹಣ ಕೂಡ ನೀಡಿದೆ. ಆದರೆ ಕೆಲವರು ಪರಿಹಾರದ ಹಣ ಪಡೆದಿದ್ದರೂ ಮತ್ತೆ ಶೇ.50:50 ಅನುಪಾತದಲ್ಲಿ ಮತ್ತೆ ಅಕ್ರಮವಾಗಿ ನಿವೇಶನ ಮಂಜೂರು ಮಾಡಿಸಿಕೊಂಡಿದ್ದಾರೆ.

ದೇವನೂರು ಹಾಗೂ ಸಾತಗಳ್ಳಿ ಬಡಾವಣೆ ನಿರ್ಮಾಣಕ್ಕಾಗಿ ಭೂಮಿ ನೀಡಿದವರು ಅದೇ ಬಡಾವಣೆಯಲ್ಲೇ ಅಭಿವೃದ್ಧಿ ಹೊಂದಿದ ನಿವೇಶನ ಪಡೆಯಬೇಕು. ಆದರೆ ದೇವನೂರು ಹಾಗೂ ಸಾತಗಳ್ಳಿಗೆ ಬದಲಾಗಿ ಅಧಿಕ ಮಾರುಕಟ್ಟೆ ಮೌಲ್ಯ ವಿರುವ ವಿಜಯನಗರ 1, 2, 3 ಮತ್ತು 4 ನೇ ಹಂತದಲ್ಲಿ ಅಕ್ರಮವಾಗಿ ನಿವೇಶನ ಮಂಜೂರು ಮಾಡಿಸಿಕೊಂಡಿದ್ದಾರೆ. ಇದರಲ್ಲಿ ಕೂಡ ಭಾರೀ ಹಗರಣ ನಡೆದಿದೆ ಎಂಬ ಆರೋಪ ಕೇಳಿ ಬಂದಿತ್ತು ಇದರ ಬಗ್ಗೆ ಕೂಡ ಲೋಕಾಯುಕ್ತರು ಈಗ ತನಿಖೆ ನಡೆಸುತ್ತಿದ್ದಾರೆ.

ಮಾತ್ರವೇ ಸರ್ಕಾರದಲ್ಲಿ ಕೆಲಸ ಆಗುತ್ತೆ

ಈ ಮೂಲಕ ಲೂಟಿಯಲ್ಲಿ ತೊಡಗಿದ್ದಾರೆ. ಹಾಗಾಗಿ ಮಗನಿಂದ ಸಿದ್ದರಾಮಯ್ಯ ಅವರಿಗೆ ಹೆಜ್ಜೆ ಹೆಜ್ಜೆಗೂ ಮುಜುಗರವಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಯತೀಂದ್ರ ಟ್ಯಾಕ್ಸ್ ಕಡ್ಡಾಯವಾಗಿದೆ. ಸರ್ಕಾರದ ಮಟ್ಟದಲ್ಲಿ ಯಾವುದೇ ಕೆಲಸ ಆಗಬೇಕಾದರೂ ಯತೀಂದ್ರ ಟ್ಯಾಕ್ಸ್ ಕಟ್ಟಲೇಬೇಕು. ಇಲ್ಲವೆಂದರೆ ಕೆಲಸ ಆಗುವುದಿಲ್ಲ ಎಂದು ಪ್ರತಾಪ್ ಸಿಂಹ ಪುನರುಚ್ಚರಿಸಿದರು. ಯತೀಂದ್ರ ಅವರೇ ಯಾರಿಗಾಗಿ ಇಷ್ಟು ಆಸ್ತಿ ಮಾಡುತ್ತಿದ್ದೀರಾ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ ಅವರು, ಮನೆ, ತೋಟ ಸೇರಿ ಇತರೆ ಆಸ್ತಿ ಮಾಡಿದ್ದೀರಾ. ನಿಮ್ಮ ಅಣ್ಣನ ಕುಟುಂಬ ಕೂಡ ಆರ್ಥಿಕವಾಗಿ ಸದೃಢವಾಗಿದೆ. ಆದರೂ ಮತ್ತಷ್ಟು ಹಣ ಲೂಟಿಯಲ್ಲಿ ಏಕೆ ತೊಡಗಿದ್ದೀರಾ ಎಂದು ಪ್ರಶ್ನಿಸಿದರು.

ಸಣ್ಣ ವಿಚಾರಕ್ಕೂ ಎಲ್ಲರನ್ನು ಗದರಿಸುವ ಸಿದ್ದರಾಮಯ್ಯ ಅವರು ದೊಡ್ಡ ಪ್ರಮಾದ ಎಸಗುತ್ತಿರುವ ಪುತ್ರ ಯತೀಂದ್ರ ಅವರ ಹಣ ಲೂಟಿಗೆ ಏಕೆ ಕಡಿವಾಣ ಹಾಕುತ್ತಿಲ್ಲ ಎಂದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ವರ್ಷದಲ್ಲಿ ಮೂರು ದಿನ ಮಾತ್ರ ಕಾಣಿಸಿಕೊಳ್ಳುತ್ತಾರೆ. ಒಂದು ಸ್ವಾತಂತ್ರ್ಯ ದಿನಾಚರಣೆ, ಮತ್ತೊಂದು ಗಣರಾಜ್ಯೋತ್ಸವ, ಇನ್ನೊಂದು ದಸರಾದಲ್ಲಿ ಮಾತ್ರ ಮೈಸೂರಿನಲ್ಲಿ ಇರುತ್ತಾರೆ. ಉಳಿದ ಸಮಯ ಮೈಸೂರಿನತ್ತ ತಿರುಗಿಯೂ ನೋಡುವುದಿಲ್ಲ ಎಂದರು.

ಪುತ್ರ ಯತೀಂದ್ರ ಮೂಲಕ ರಾಜಕೀಯ ಸಂದೇಶ ರವಾನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜಕೀಯವಾಗಿ ಕೆಲವು ಸಂದೇಶವನ್ನು ಮಗನ ಮೂಲಕ ರವಾನಿಸುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಆಪಾದಿಸಿದರು. ಪೂರ್ಣಾವಧಿಗೆ ಸಿದ್ದರಾಮಯ್ಯ ಅವರೇ ಸಿಎಂ ಆಗಿರುತ್ತಾರೆ ಎಂಬುದು ಯತೀಂದ್ರ ಅವರ ಮಾತಲ್ಲ, ಬದಲಿಗೆ ಇದು ಸಿದ್ದರಾಮಯ್ಯ ಅವರ ಮನದಾಳದ ಮಾತು ಎಂದು ಆರೋಪಿಸಿದರು.

ವೀರೇಂದ್ರ ಪಾಟೀಲ್ ನಂತರ ಕಾಂಗ್ರೆಸ್‌ಗೆ ಬಂದ ಗತಿ ಈಗಲೂ ಬಂದಿದೆ. ಅಂದು ಕಾಂಗ್ರೆಸ್ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿ ಈಗಲೂ ಇದೆ. ನಾಳೆಯೇ ಗ್ರೇಟರ್ ಬೆಂಗಳೂರು ಹಾಗೂ ಗ್ರೇಟರ್ ಮೈಸೂರು ಚುನಾವಣೆಯಾದರೆ ಕಾಂಗ್ರೆಸ್ ಹೀನಾಯವಾಗಿ ಸೋತು ಧೂಳೀಪಟವಾಗುತ್ತದೆ ಎಂದು ಪ್ರತಾಪ್ ಸಿಂಹ ಭವಿಷ್ಯ ನುಡಿದರು.

ಈ ಪರಿಸ್ಥಿತಿಯನ್ನು ಬಳಸಿಕೊಳ್ಳುತ್ತಿರುವ ಯತೀಂದ್ರ ಅವರು ಇಡೀ ಜಿಲ್ಲೆಯ ಆಡಳಿತವನ್ನು ತನ್ನ ಕಪಿಮುಷ್ಟಿಗೆ ತೆಗೆದುಕೊಂಡಿದ್ದಾರೆ. ಇದರಿಂದ ಮೈಸೂರಿನ ಅಭಿವೃದ್ಧಿ ಶೂನ್ಯವಾಗಿದ್ದು, ವರ್ಗಾವಣೆ ದಂಧೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ ಎಂದು ಪ್ರತಾಪ್ ಸಿಂಹ ಆರೋಪಿಸಿದರು.

ಅಂತಿಮ; ಬಯಸಿದರೆ ದೆಹಲಿಗೆ ಹೋಗ್ತೇನೆ!

ಅಂಗವಾಗಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಸ್ಸಾಂ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದ ಸಮಾಲೋಚನೆಯಲ್ಲಿ ಪಾಲ್ಗೊಳ್ಳಬೇಕಿರುವ ಕಾರಣ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜ್ಯ ಬಜೆಟ್ ಸಿದ್ಧತಾ ಸಭೆಯಲ್ಲಿ ಭಾಗವಹಿಸಲು ಆಗುತ್ತಿಲ್ಲ ಎಂದರು. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ಗೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ತಕರಾರು ಅರ್ಜಿಗೆ ಸುಪ್ರೀಂಕೋರ್ಟ್, ಮತ ಪರಿಷ್ಕರಣೆ ಕಾರ್ಯಕ್ಕೆ ಅಡ್ಡಿಪಡಿಸುವುದನ್ನು ಸಹಿಸುವುದಿಲ್ಲ ಎಂಬುದಾಗಿ ಯಾವ ಸಂದರ್ಭಕ್ಕೆ ಹೇಳಿದೆ ಎಂಬ ಮಾಹಿತಿ ಪಡೆದು ಪ್ರತಿಕ್ರಿಯಿಸುವೆ ಎಂದರು. ರಾಜ್ಯದ ಪ್ರಥಮ ಚುನಾಯಿತ ಮುಖ್ಯಮಂತ್ರಿ ದಿವಂಗತ ಕೆಂಗಲ್ ಹನುಮಂತಯ್ಯ ಪ್ರಾಮಾಣಿಕ, ಧೀಮಂತ ರಾಜಕಾರಣಿ, ಭವ್ಯ ವಿಧಾನಸೌಧ ನಿರ್ಮಿಸಿದ ಕೀರ್ತಿ ಅವರದು, ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ನಾಯಕ, ಕೇಂದ್ರ ರೈಲ್ವೆ ಮಂತ್ರಿಯಾಗಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು ಎಂದು ಸ್ಮರಿಸಿದರು.

ಬಾಲಕನ ಮೇಲೆ ಚಿರತೆ ದಾಳಿ

ಗಾಯಾಳು ಬಾಲಕನ್ನು ಬಸ್ ಮೂಲಕವಾಗಿ ಮಹದೇಶ್ವರ ಬೆಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಮಹದೇಶ್ವರ ಬೆಟ್ಟ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪಾದಯಾತ್ರೆ ಸಾಗುತ್ತಿದ್ದ ಭಕ್ತರಿಗೆ ಒಂದು ಬೃಹತ್ ಚಿರತೆ ಹಾಗೂ ಮತ್ತೊಂದು ಮರಿ ಚಿರತೆ ಕಾಣಿಸಿಕೊಂಡಿದೆ. ಪಾದಯಾತ್ರೆಯಲ್ಲಿ ತೆರಳುವ ಭಕ್ತರು ಅರಣ್ಯ ಪ್ರದೇಶದ ಮಾರ್ಗ ಬಿಟ್ಟು ಮುಖ್ಯ ರಸ್ತೆ ಮೂಲಕವಾಗಿ ತೆರಳುವಂತೆ ಅರಣ್ಯ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ.

ವರಿಷ್ಠರ ಮುಂದೆಯೇ ಚರ್ಚೆಯಾಗಿದೆ

ಈ ವಿಚಾರದಲ್ಲಿ ಬೇರೆಯವರು ಆತಂಕಗೊಳ್ಳುವುದು ಹಾಗೂ ಹೇಳಿಕೆಗಳನ್ನು ನೀಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಅಧಿಕಾರ ಹಂಚಿಕೆ ಕುರಿತು ನನ್ನ ಪರ–ವಿರುದ್ಧ ಹೇಳಿಕೆಗಳನ್ನು ಶಾಸಕರು, ಮಂತ್ರಿಗಳು ಯಾರೇ ನೀಡಿದರೂ ಅದು ಪಕ್ಷಕ್ಕೆ ಹಾನಿ ಮಾಡುವ ಹೇಳಿಕೆಗಳಾಗುತ್ತವೆ. ಎಲ್ಲರೂ ಬಾಯಿಮುಚ್ಚಿಕೊಂಡು ಇದ್ದರೆ ಒಳ್ಳೆಯದು ಎಂಬುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಹೇಳಿದ್ದಾರೆ. ಅದನ್ನು ನಾವೆಲ್ಲರೂ ಪಾಲನೆ ಮಾಡುವ ಅಗತ್ಯವಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಯತೀಂದ್ರ ಪದೇ ಪದೇ ನೀಡುತ್ತಿರುವ ಹೇಳಿಕೆಗೆ ನಿಮ್ಮ ಪಕ್ಷದ ಶಾಸಕರೇ ಆಕ್ಷೇಪಿಸುತ್ತಿದ್ದಾರಲ್ಲ ಎಂಬ ಪ್ರಶ್ನೆಗೆ, ಈ ಬಗ್ಗೆ ದೆಹಲಿ ನಾಯಕರೇ ತೀರ್ಮಾನ ಕೈಗೊಳ್ಳಬೇಕು ಎಂದರು.

ದೆಹಲಿ ಭೇಟಿ ವೇಳೆ ಯಾವ ನಾಯಕರು ಸಿಗುತ್ತಾರೋ, ಅವರೆಲ್ಲರನ್ನೂ ಭೇಟಿ ಮಾಡಲಾಗುವುದು. ಕೇರಳಕ್ಕೆ ಹೋಗಿದ್ದೆ, ಅಸ್ಸಾಂಗೂ ತೆರಳಬೇಕು. ಇಂದು ಬಜೆಟ್ ಸಭೆಗೆ ಬರಲು ಸಾಧ್ಯವಿಲ್ಲ ಎಂಬುದಾಗಿ ತಿಳಿಸಿದ್ದು, ಇಲಾಖಾ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದು ಮುಖ್ಯಮಂತ್ರಿಗಳ ಮುಂಗಡ ಪತ್ರ ಸಮಾಲೋಚನೆ ವೇಳೆ ವಿವರ ನೀಡುತ್ತಾರೆ. ದೆಹಲಿಯಿಂದ ಹಿಂದಿರುಗಿದ ನಂತರ ಮಾತನಾಡುತ್ತೇನೆ ಎಂದರು.


'ಸುಪ್ರೀಂ' ಸೀರಿಯಸ್

ನೀಡಬಹುದು ಎಂದು ಹೇಳಿದೆ. ಹಿರಿಯ ವಕೀಲೆ ಅಪರ್ಣಾ ಭಟ್ ಅವರು ಕೇಂದ್ರ ಈ ಕ್ರಮ ಕೈಗೊಂಡಿದೆ ಮತ್ತು ದತ್ತಾಂಶವನ್ನು ಒದಗಿಸಲು ಎಲ್ಲಾ ರಾಜ್ಯಗಳಿಗೆ ನಿರ್ದೇಶನ ನೀಡಬೇಕೆಂದು ಹೇಳಿದರು.

'ಗುರಿಯಾ ಸ್ವಯಂ ಸೇವಿ ಸಂಸ್ಥಾನ' ಎಂಬ ಸರ್ಕಾರೇತರ ಸಂಸ್ಥೆ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಪೀಠವು ವಿಚಾರಣೆ ನಡೆಸುತ್ತಿತ್ತು, ಈ ಅರ್ಜಿ ಹಲವಾರು ರಾಜ್ಯಗಳಲ್ಲಿ ಪತ್ತೆಯಾಗದ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದನ್ನು ಎತ್ತಿ ತೋರಿಸಿತ್ತು.

ಡಿಸೆಂಬರ್ 9 ರಂದು, ಕಾಣೆಯಾದ ಮಕ್ಕಳ ಕುರಿತು ಆರು ವರ್ಷಗಳ ರಾಷ್ಟ್ರವ್ಯಾಪಿ ಡೇಟಾವನ್ನು ಒದಗಿಸುವಂತೆ ಮತ್ತು ಅಂತಹ ದತ್ತಾಂಶವನ್ನು ಸಂಗ್ರಹಿಸುವಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಪರಿಣಾಮಕಾರಿ ಸಮನ್ವಯವನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಗೃಹ ಸಚಿವಾಲಯದಲ್ಲಿ ಮೀಸಲಾದ ಅಧಿಕಾರಿಯನ್ನು ನೇಮಿಸುವಂತೆ ಸುಪ್ರೀಂಕೋರ್ಟ್ ಕೇಂದ್ರಕ್ಕೆ ನಿರ್ದೇಶನ ನೀಡಿತು. ಕಾಣೆಯಾದ ಮಕ್ಕಳ ಪ್ರಕರಣಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಅಂತಹ ವಿವರಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ನಡೆಸುವ ಪೋರ್ಟಲ್‌ನಲ್ಲಿ ತ್ವರಿತವಾಗಿ ಅಪ್‌ಲೋಡ್ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಸುಪ್ರೀಂ ಕೋರ್ಟ್ ಈ ಹಿಂದೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿತ್ತು.

ಸ್ಪೀಕರ್ ಓಂ ಬಿರ್ಲಾ ಪದಚ್ಯುತಿಗೆ ವಿರೋಧ ಪಕ್ಷಗಳಿಂದ ನೋಟಿಸ್



ಓಂ ಬಿರ್ಲಾ

ನವದೆಹಲಿ, ಫೆ.10– ಸ್ಪೀಕರ್ ಹುದ್ದೆಯಿಂದ ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸಲು ವಿರೋಧ ಪಕ್ಷಗಳು ಮಂಗಳವಾರ ನೋಟಿಸ್ ನೀಡಿವೆ.

ಓಂ ಬಿರ್ಲಾ ಪದಚ್ಯುತಗೊಳಿಸುವ ನೋಟಿಸ್‌ಗೆ 119 ಸಂಸದರು ಸಹಿ ಹಾಕಿದ್ದು, ಟಿಎಂಸಿ ಸಂಸದರು ಇದರಿಂದ ದೂರ ಉಳಿದಿದ್ದಾರೆ. ಸಂಸತ್ತಿನಲ್ಲಿ ಈ ಬಗ್ಗೆ ಚರ್ಚೆ ನಡೆದಾಗ ಬೆಂಬಲಿಸುವುದಾಗಿ ಟಿಎಂಸಿ ಮೂಲಗಳು ತಿಳಿಸಿವೆ. ನಿಯಮಗಳ ಪ್ರಕಾರ ನೋಟಿಸ್ ಸಲ್ಲಿಸಿದ 14 ದಿನಗಳ ಬಳಿಕವಷ್ಟೇ ಚರ್ಚೆಗೆ ಬರಲಿದೆ. ನೋಟಿಸ್ ಪುರಸ್ಕೃತವಾದ ಬಳಿಕವಷ್ಟೇ ಲೋಕಸಭೆಯಲ್ಲಿ ಚರ್ಚೆಗೆ ಬರಲಿದೆ. ಸಂವಿಧಾನದ 94ಸಿ ವಿಧಿಯಡಿ ನೋಟಿಸ್ ಸಲ್ಲಿಸಲಾಗಿದೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕ ಗೌರವ್ ಗೋಗೊಯ್ ತಿಳಿಸಿದ್ದಾರೆ. ಸ್ಪೀಕರ್ ಅವರನ್ನು ಪದ್ಯಚುತಗೊಳಿಸಬೇಕು ಎಂದು ನೋಟಿಸ್ ಸಲ್ಲಿಕೆಯಾಗುತ್ತಿರುವುದು ಇದು ನಾಲ್ಕನೇ ಬಾರಿ.

ಈ ಹಿಂದೆ 1954ರಲ್ಲಿ ಜಿ.ವಿ ಮವಳಂಕರ್ ಹಾಗೂ 1987ರಲ್ಲಿ ಬಲರಾಮ್ ಜಾಖರ್ ಅವರನ್ನು ಸ್ಪೀಕರ್ ಹುದ್ದೆಯಿಂದ ಪದಚ್ಯುತಗೊಳಿಸಬೇಕು ಎಂದು ನೋಟಿಸ್ ನೀಡಲಾಗಿತ್ತು ಆದರೆ ಅದಕ್ಕೆ ಸೋಲಾಗಿತ್ತು. 1966ರಲ್ಲಿ ಹುಕ್ಕಂ ಸಿಂಗ್ ಅವರ ವಿರುದ್ಧ ನೀಡಿದ್ದ ನೋಟಿಸ್‌ನಲ್ಲಿ ಕನಿಷ್ಠ 50 ಸಂಸದರ ಹೆಸರಿಲ್ಲದ ಕಾರಣ ಆ ನಿಲುವಳಿ ತಿರಸ್ಕೃತವಾಗಿತ್ತು.


ಮೈಸೂರು ನಗರ ಪೋಲೀಸರಿಂದ ವಿಶೇಷ ಗಸ್ತು...



ಮೈಸೂರು ನಗರದ ವಿವಿಧೆಡೆ ನಾಗರಿಕರ ಸುರಕ್ಷತೆ ಮತ್ತು ಸುಭದ್ರತೆ ದೃಷ್ಟಿಯಿಂದ ನಗರ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಮಂಗಳವಾರ ರಾತ್ರಿ ವಿಶೇಷ ಗಸ್ತು ನಡೆಸಿದರು.

ಹಿರಿಯ ಪತ್ರಕರ್ತ, ವಿಧಾನ ಪರಿಷತ್ ಮಾಜಿ ಸದಸ್ಯ

ಪಿ.ರಾಮಯ್ಯ ಇನ್ನಿಲ್ಲ



ಮೈಸೂರು,ಫೆ.10(ಪಿಎಂ)– ಹಿಂದೂ ರಾಮಯ್ಯ ಎಂದೇ ಜನಜನಿತರಾಗಿದ್ದ ಹಿರಿಯ ಪತ್ರಕರ್ತರೂ ಆದ ವಿಧಾನ ಪರಿಷತ್ತಿನ ಮಾಜಿ ಸದಸ್ಯ ಪಿ.ರಾಮಯ್ಯ (93) ಅವರು ಮಂಗಳವಾರ ರಾತ್ರಿ ನಿಧನ ಹೊಂದಿದರು.

ಬೆಂಗಳೂರಿನ ಮಲ್ಲಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪಿ.ರಾಮಯ್ಯ ಅವರು ವಿವಿಧ ಅಂಗಾಂಗ ವೈಫಲ್ಯದಿಂದ ರಾತ್ರಿ 9 ಗಂಟೆಗೆ ಆಸ್ಪತ್ರೆಯಲ್ಲಿ ಅಸುನೀಗಿದರು ಎಂದು ಅವರ ಪುತ್ರ ಡಾ.ಬಾಲಾಜಿ ತಿಳಿಸಿದ್ದಾರೆ. 1933ರ ಸೆಪ್ಟೆಂಬರ್ 12ರಂದು ಜನಿಸಿದ ರಾಮಯ್ಯ ಅವರು ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಸಾರ್ವಜನಿಕ ದರ್ಶನಕ್ಕಾಗಿ ಪಾರ್ಥಿವ ಶರೀರವನ್ನು ನಾಳೆ (ಫೆ.11ರ ಬುಧವಾರ) ಬೆಳಗ್ಗೆ 9 ಗಂಟೆಯಿಂದ ಬೆಂಗಳೂರಿನ ಸದಾಶಿವನಗರ ಕ್ಲಬ್ ಸಮೀಪದಲ್ಲಿ ಅವರು ವಾಸವಾಗಿದ್ದ ಮನೆ 295/12/17ನೇ ಮೇನ್ 16ನೇ ಕ್ರಾಸ್‌ನಲ್ಲಿ ಇರಿಸಲಾಗುವುದು ಎಂದು ಡಾ.ಬಾಲಾಜಿ ತಿಳಿಸಿದ್ದಾರೆ.

'ದಿ ಹಿಂದೂ' ಪತ್ರಿಕೆಯಲ್ಲಿ ಐದು ದಶಕಗಳ ಕಾಲ ವಿವಿಧ ಹುದ್ದೆಗಳಲ್ಲಿ ಪತ್ರಕರ್ತರಾಗಿ ಕರ್ತವ್ಯ ನಿರ್ವಹಿಸಿದ್ದ ರಾಮಯ್ಯ ಅವರು ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಾಧ್ಯಮ ಅಕಾಡೆಮಿ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿಗೆ ಪಾತ್ರರಾಗಿದ್ದ ರಾಮಯ್ಯ ಅವರು, ಪತ್ರಿಕಾ ಅಕಾಡೆಮಿ ಹಾಗೂ ವಿವಿಧ ಪತ್ರಕರ್ತ ಕಲ್ಯಾಣ ಸಮಿತಿ ಸದಸ್ಯರಾಗಿದ್ದರು. ಸಣ್ಣ ಪತ್ರಿಕೆಗಳ ಸಮಸ್ಯೆಗಳ ಅಧ್ಯಯನಕ್ಕಾಗಿ ರಚಿಸಲಾಗಿದ್ದ ಸಮಿತಿಯ ಅಧ್ಯಕ್ಷರಾಗಿದ್ದ ರಾಮಯ್ಯ, ಸಣ್ಣ ಪತ್ರಿಕೆಗಳ ಸಮಸ್ಯೆಗೆ ಪರಿಹಾರ ದೊರಕಿಸಿದ್ದರು.

ಹೆಚ್.ಡಿ.ಕುಮಾರಸ್ವಾಮಿ ಕಂಬನಿ: ಪಿ.ರಾಮಯ್ಯ ಅವರ ನಿಧನಕ್ಕೆ ಕೇಂದ್ರ ಬೃಹತ್ ಕೈಗಾರಿಕೆ ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಂಬನಿ ಮಿಡಿದಿದ್ದಾರೆ. ಕರ್ನಾಟಕ ಪತ್ರಿಕೋದ್ಯಮದ ಮಹಾವೃಕ್ಷ ಎಂದೇ ಹೆಸರಾಗಿದ್ದ ನನ್ನ ಗುರು, ಪಿತೃ ಸಮಾನರೂ ಆಗಿದ್ದ ಪಿ.ರಾಮಯ್ಯನವರು ನಿಧನರಾದರೆಂಬ ವಾರ್ತೆ ಕೇಳಿ ಬಹಳ ದುಃಖವಾಯಿತು. ಮಾನವೀಯತೆ, ಪ್ರಾಮಾಣಿಕತೆ, ಮೌಲ್ಯಾಧಾರಿತ ಪತ್ರಿಕಾ ಧರ್ಮದ ಶ್ರೇಷ್ಠ ಪತಿನಿಧಿಯಾಗಿದ್ದ ಅವರು, ಜನಮಾನಸದಲ್ಲಿ 'ಹಿಂದೂ ರಾಮಯ್ಯ' ಎಂದೇ ಜನಪ್ರಿಯರಾಗಿದ್ದರು.

ಅವರ ಮೇಲೆ ಅಪಾರ ಗೌರವ ನನಗೆ. ಹಾಗೆಯೇ ನನ್ನ ಬಗ್ಗೆಯೂ ಅವರು ವಿಶೇಷ ಮಮತೆ, ವಾತ್ಸಲ್ಯ ಹೊಂದಿದ್ದರು. ಈ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ, ಅದರಲ್ಲಿಯೂ ವಿಶೇಷವಾಗಿ ಅವರ ಧರ್ಮಪತ್ನಿ ಶ್ರೀಮತಿ ರಾಮಯ್ಯ ಅವರಿಗೆ ಮತ್ತು ಶ್ರೀಯುತರ ಅಭಿಮಾನಿಗಳಿಗೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

ಬುಧವಾರ 11 ಫೆಬ್ರವರಿ 2026

ನಾಳೆ ಮೈಸೂರಲ್ಲಿ ದಾಸ ಸಂಭ್ರಮ

ಮೈಸೂರು,ಫೆ.10(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದ ಬ್ರಹ್ಮ ಸಂಗೀತ ಸಭಾದಲ್ಲಿ ಫೆ.12ರಂದು ಸಂಜೆ 5 ಗಂಟೆಗೆ ಪುರಂದರದಾಸರು ಹಾಗೂ ಕನಕದಾಸರ 'ದಾಸ ಸಂಭ್ರಮ' ಹರಿದಾಸರ ಪದಗಳ ಗೀತ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಡಾ.ನಾಗರಾಜ್ ವಿ.ಭೈರಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿನಾದ ಯುಕ್ತ ಫೌಂಡೇಷನ್ ವತಿಯಿಂದ ದಾಸ ಸಂಭ್ರಮ–ಹರಿದಾಸರ ಪದಗಳ ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಹಿನ್ನೆಲೆ ಗಾಯಕ ಉಪ್ಪುಂದ ರಾಜೇಶ್ ಪಡಿಯಾರ್ ಹರಿದಾಸರ ಪದಗಳ ಗೀತ ಗಾಯನ ನಡೆಸಿಕೊಡಲಿದ್ದಾರೆ. ಕಾರ್ಯಕ್ರಮಕ್ಕೆ ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಹಿನ್ನೆಲೆ ಗಾಯಕ ಉಪ್ಪುಂದ ರಾಜೇಶ್ ಪಡಿಯಾರ್ ಮಾತನಾಡಿ, ಹರಿದಾಸರ ಪದಗಳ ಗೀತ ಗಾಯನ ಕಾರ್ಯಕ್ರಮ ವಿಭಿನ್ನವಾದ ಕಾರ್ಯಕ್ರಮವಾಗಿದೆ. ದಾಸ ಸಂಭ್ರಮದಲ್ಲಿ ಸುಮಾರು 20 ಗೀತೆಗಳನ್ನು ತಾವು ಹಾಡಲಿದ್ದು, ಡಾ.ದೀಪಿಕಾ ಪಾಂಡುರಂಗ ನಿರೂಪಿಸಲಿದ್ದಾರೆ. ಇದೊಂದು ರೀತಿಯ ಹಾಡುಗಳ ಕುರಿತ ವಿವರಣೆಯ ಸಂವಾದ ಕಾರ್ಯಕ್ರಮವೂ ಆಗಿರಲಿದೆ. ದಾಸರ ಪದಗಳ ಗಾಯನಕ್ಕೆ ಕೀಬೋರ್ಡ್‌ನಲ್ಲಿ ಪುರುಷೋತ್ತಮ್ ಕಿರಗಸೂರು, ಸಿತಾರ್‌ನಲ್ಲಿ ಸಿ.ಎಸ್.ವೇದಶ್ರೀ, ತಬಲದಲ್ಲಿ ಆತ್ಮರಾವ್ ನಾಯಕ್, ರಿದಮ್ ಕಾರ್ಯಕ್ರಮಕ್ಕೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪುರುಷೋತ್ತಮ್ ಕಿರಗಸೂರು, ಬೆಟ್ಟೇಗೌಡ ಉಪಸ್ಥಿತರಿದ್ದರು.

ನೆಟ್‌ಬಾಲ್‌ನಲ್ಲಿ ಬೆಳ್ಳಿ ಪದಕ ವಿಜೇತರು



ಶಾಲಾ ಶಿಕ್ಷಣ ಇಲಾಖೆ, ನಾಂದೇಡ್, ಮಹಾರಾಷ್ಟ್ರದಲ್ಲಿ ನಡೆದ ರಾಷ್ಟ್ರ ಮಟ್ಟದ ಶಾಲಾ ನೆಟ್ ಬಾಲ್ ಪಂದ್ಯಾವಳಿಯಲ್ಲಿ ಅವಿಲಾ ಕಾನ್ವೆಂಟ್ ಪ್ರೌಢಶಾಲೆಯ 14 ವಯೋಮಿತಿಯ ಬಾಲಕಿಯರು, ಸರ್ಕಾರಿ ಪ್ರೌಢಶಾಲೆ, ಮೇದಿನಿ, ಟಿ.ಎನ್.ಪುರ ತಾಲೂಕಿನ ವಿದ್ಯಾರ್ಥಿಗಳು ಕರ್ನಾಟಕ ತಂಡವನ್ನು ಪ್ರತಿನಿಧಿಸಿ ಬೆಳ್ಳಿ ಪದಕ ಮುಡಿಗೇರಿಸಿಕೊಂಡಿದ್ದಾರೆ. ದೈಹಿಕ ಶಿಕ್ಷಣ ಶಿಕ್ಷಕರಾದ ಎಲಿಯಾಸ್ ಅರುಳಪ್ಪ, ಮಹದೇವ ಪ್ರಸಾದ್, ಕ್ರೀಡಾಪಟುಗಳಾದ ತನುಶ್ರೀ, ಮಹಾಲಕ್ಷ್ಮಿ, ನೇಹಾ, ವೈಷ್ಣವಿ, ಲಕ್ಷ್ಮಿ ವಿಜೇತ ಕ್ರೀಡಾಪಟುಗಳಿಗೆ ಶಾಲಾ ಆಡಳಿತ ಮಂಡಳಿ, ಶಿಕ್ಷಕ ವೃಂದ ಅಭಿನಂದಿಸಿದೆ.

ಮಂಡನಹಳ್ಳಿ ಜೋಡಿಲಿಂಗ ಮಹದೇಶ್ವರ ಕೊಂಡೋತ್ಸವ



ಜಯಪುರ ಹೋಬಳಿಯ ಮಂಡನಹಳ್ಳಿ ಜೋಡಿಲಿಂಗ ಮಹದೇಶ್ವರ ಜಾತ್ರಾ ಮಹೋತ್ಸವದಲ್ಲಿ ಮಂಗಳವಾರ ಮುಂಜಾನೆ ಕೊಂಡೋತ್ಸವ ನಡೆಯಿತು.

ಮೈಸೂರು: ತಾಲೂಕು ಜಯಪುರ ಹೋಬಳಿಯ ಮಂಡನಹಳ್ಳಿ ಜೋಡಿಲಿಂಗ ಮಹದೇಶ್ವರ ಜಾತ್ರಾ ಮಹೋತ್ಸವದಲ್ಲಿ ಮಂಗಳವಾರ ಮುಂಜಾನೆ ಕೊಂಡೋತ್ಸವ 5 ವರ್ಷಗಳ ಬಳಿಕ ವಿಜೃಂಭಣೆಯಿಂದ ನಡೆಯಿತು.

ಮಹದೇಶ್ವರ ಸ್ವಾಮಿ, ವೀರಭದ್ರೇಶ್ವರ ಸ್ವಾಮಿ ದೇವರುಗಳ ಬಿರುದು ಹೊತ್ತ ಅರ್ಚಕರು ಕೊಂಡವನ್ನು ಹಾಯ್ದರು. ಸಾವಿರಾರು ಜನರು ಕೊಂಡೋತ್ಸವವನ್ನು ಕಣ್ತುಂಬಿಕೊಂಡರು. ಭಕ್ತರು ತೆಂಗಿನ ಕಾಯಿ ಮತ್ತು ದವಸಧಾನ್ಯಗಳನ್ನು ಕೊಂಡಕ್ಕೆ ಹಾಕಿ ಪೂಜೆ ಸಲ್ಲಿಸಿದರು.

ಸೋಮವಾರ ರಾತ್ರಿ ಹಾಲರವಿ ಉತ್ಸವಕ್ಕೆ ಗಂಗಸ್ಥಾನದಲ್ಲಿ ಪೂಜೆ ನಡೆಯಿತು. ಮಹದೇಶ್ವರ ಸ್ವಾಮಿ ಉತ್ಸವ ಮೂರ್ತಿ,ದೇವರ ಬಿರುದು ಬಾವಲಿಗಳು ಮೆರವಣಿಗೆಯಲ್ಲಿ ಸಾಗಿದವು. ತಮಟೆ, ಮಂಗಳವಾದ್ಯ ಸದ್ದಿಗೆ ವೀರಗಾಸೆ ನೃತ್ಯ ನಡೆಯಿತು. ಮೆರವಣಿಗೆಯಲ್ಲಿ ಪುರ ಮಠದ ಚಂದ್ರಶೇಖರ ಸ್ವಾಮೀಜಿ ಇನ್ನಿತರರು ಭಾಗವಹಿಸಿದ್ದರು.

ಮುಂಜಾನೆ 3 ಗಂಟೆ ವೇಳೆಗೆ ಕರ್ಪೂರದಿಂದ ಕೊಂಡವನ್ನು ಹಚ್ಚಲಾಯಿತು. ಸೂರ್ಯೋದಯಕ್ಕೂ ಮುನ್ನ ಕೊಂಡೋತ್ಸವ ಜರುಗಿತು. ಬಳಿಕ ಜೋಡಿಲಿಂಗ ಮಹದೇಶ್ವರ ಸ್ವಾಮಿಗೆ ಮಹಾ ಮಂಗಳಾರತಿ ನೆರವೇರಿಸಿ, ಭಕ್ತರಿಗೆ ದೇವರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಭಕ್ತರು ಸರತಿ ಸಾಲಿನಲ್ಲಿ ನಿಂತು ಜೋಡಿಲಿಂಗ ದರ್ಶನ ಪಡೆದು, ಹರಕೆ ಪೂಜೆ ಸಲ್ಲಿಸಿದರು. ಮಹಾ ಪ್ರಸಾದ ವಿನಿಯೋಗ ಮಾಡಲಾಯಿತು.

ಮಂಗಳವಾರ ಸಂಜೆಯ ವೇಳೆ ಹುಲಿ ವಾಹನ ಉತ್ಸವ ಮೂರ್ತಿ, ಮಹದೇಶ್ವರ ಸ್ವಾಮಿ ಉತ್ಸವ ಮೂರ್ತಿ ಮತ್ತು ಬಿರುದು ಬಾವಲಿಗಳನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ಜೋಡಿಲಿಂಗ ಮಹದೇಶ್ವರ ಜಾತ್ರಾ ಮಹೋತ್ಸವಕ್ಕೆ ಅಂತಿಮ ತೆರೆ ಬಿದ್ದಿತು.

ಅಸಾಧಾರಣ ಕನ್ನಡ ಕೌಶಲ್ಯ ಮೆರೆಯುವ ಪೋರಿ

ಕನ್ನಡ ವರ್ಣಮಾಲೆ ಅಕ್ಷರಗಳಿಗೆ ಗಾದೆ ಪೋಣಿಸುವ ಪಾಂಡಿತ್ಯ!

ಮೈಸೂರು, ಫೆ.10(ವಿವಿಹೆಚ್)– ಎಲ್ಲಾದರೂ ಇರು... ಎಂತಾದರೂ ಇರು... ಎಂದೆಂದಿಗೂ ನೀ ಕನ್ನಡವಾಗಿರು... ಕನ್ನಡವೇ ಸತ್ಯ, ಕನ್ನಡವೇ ನಿತ್ಯ... ಕುವೆಂಪು ಅವರ ವಾಣಿಯಂತೆ, ಕನ್ನಡದ ಕಂಪನ್ನು ಹರಡುವ ಕೆಲಸವನ್ನು ಪುಟ್ಟ ಪೋರಿಯೊಬ್ಬಳು ಮಾಡಿ ತೋರಿಸಿದ್ದಾಳೆ. ಆ ಮೂಲಕ ಕನ್ನಡವನ್ನು ತ್ಯಜಿಸಿ, ನವೀನ ತಂತ್ರಜ್ಞಾನಕ್ಕೆ ಹೊಂದಿಕೊಂಡ ಶಿಕ್ಷಣಬೇಕು ಎಂದು ಹಂಬಲಿಸುವ ಜನರ ನಡುವೆ ಕೇವಲ ನಾಲ್ಕನೇ ತರಗತಿ ವಿದ್ಯಾರ್ಥಿನಿಯೊಬ್ಬಳು ತನ್ನ ಅಸಾಧಾರಣ ಕೌಶಲ್ಯದಿಂದ ಕನ್ನಡದ ಮಹತ್ವವನ್ನು ಮತ್ತೊಮ್ಮೆ ಜಗತ್ತಿಗೆ ಸಾರಿದ್ದಾಳೆ.

ಮೈಸೂರಿನ ಜಯಪುರ ಹೋಬಳಿಯ ಮುಳ್ಳೂರು ಗ್ರಾಮದ ನಿವಾಸಿ ಎಂ.ಕೆ.ಕೃಷ್ಣೇಗೌಡ ಮತ್ತು ಚೈತ್ರಾ ದಂಪತಿ ಪುತ್ರಿ ಎಂ.ಕೆ.ಲಕ್ಷ್ಮಿತಾ ಕನ್ನಡ ವರ್ಣ ಮಾಲೆಯಲ್ಲಿನ ಎಲ್ಲಾ ಅಕ್ಷರಗಳಿಗೆ ಅನುಗುಣವಾದ ಗಾದೆಗಳನ್ನು ಪಠಿಸುವ ಮೂಲಕ ಕನ್ನಡ ಭಾಷೆಯ ಮೇಲಿನ ಅಸಾಧಾರಣ ಪಾಂಡಿತ್ಯವನ್ನು ಪ್ರದರ್ಶಿಸಿದ್ದಾಳೆ.

'ಅ' ಇಂದ 'ಳ' ವರೆಗಿನ ಎಲ್ಲಾ 49 ಅಕ್ಷರಗಳ ಮೇಲೆ ಗಾದೆಗಳನ್ನು (ನಾಣ್ಣುಡಿ) ಪಠಿಸುವ ಮೂಲಕ ತನ್ನ ಅಸಾಧಾರಣ ಸ್ಮರಣಶಕ್ತಿ, ಸ್ಪಷ್ಟ ಉಚ್ಚಾರಣೆ, ಕನ್ನಡದ ಅಭಿಮಾನವನ್ನು ತೋರಿಸಿದ್ದಾಳೆ. ಗಮನಾರ್ಹವಾಗಿ ಚಿಕ್ಕ ವಯಸ್ಸಿನಲ್ಲಿ ಭಾಷಾ ಮತ್ತು ಸಾಂಸ್ಕೃತಿಕ ಪರಂಪರೆಯ ನಡುವಿನ ಕೊಂಡಿಯನ್ನು ಅರಿಯುವ ಪ್ರಯತ್ನ ಮಾಡಿದ್ದಾಳೆ.

ಮೈಸೂರಿನ ಹೊರವಲಯದ ಜಯಪುರ ಬಳಿಯ ಮುಳ್ಳೂರಿನ ವಿನಾಯಕ ಜ್ಞಾನ ವಿದ್ಯಾ ಶಾಲೆಯಲ್ಲಿರುವ 10 ವರ್ಷದ ವಿದ್ಯಾರ್ಥಿನಿ ಲಕ್ಷ್ಮಿತಾಳ ಪ್ರತಿಭೆಯನ್ನು ಮೊದಲು ಗುರುತಿಸಿದವರು ಅವಳ ಕನ್ನಡ ಶಿಕ್ಷಕಿ ನಾಗಮ್ಮ. ಅವಳಲ್ಲಿನ ಈ ವಿಶಿಷ್ಟ ಕಲೆಯನ್ನು ಪ್ರೋತ್ಸಾಹಿಸಿ, ಇತರರಿಗೆ ಮಾದರಿಯಾಗುವಂತೆ ಮಾಡುವಲ್ಲಿ ಅವರ ಪಾತ್ರ ಬಹಳ ದೊಡ್ಡದಿದೆ.



ಪೋಷಕರೊಂದಿಗೆ ಬಾಲಕಿ ಎಂ.ಕೆ.ಲಕ್ಷ್ಮಿತಾ

ಈ ಬಗ್ಗೆ ಮಾತನಾಡಿದ ಶಿಕ್ಷಕಿ ನಾಗಮ್ಮ, ಅವಳ ಸ್ಮರಣಶಕ್ತಿ ಮತ್ತು ಭಾಷಾ ಪ್ರತಿಭೆ ಚೆನ್ನಾಗಿದೆ. ಕನ್ನಡ ಅಕ್ಷರಗಳಿಗೆ ಗಾದೆಗಳನ್ನು ರೂಪಿಸಿ ಅವಳಿಗೆ ಕಲಿಯಲು ಹೇಳಿದೆ. ಕೇವಲ ಮೂರು ದಿನಗಳಲ್ಲಿ, ಅವಳು ಎಲ್ಲಾ ಗಾದೆಗಳನ್ನು ಕಲಿತಳು. ನನ್ನ ಬಿಡುವಿನ ವೇಳೆಯಲ್ಲಿ, ನಾನು ಅವಳಿಗೆ ಕೆಲವು ಗಾದೆಗಳನ್ನು ನೆನಪಿಟ್ಟುಕೊಳ್ಳಲು ಹೇಳಿದೆ. ನಾನು ಅವಳಿಗೆ ಮೂರು ಕಲಿಯಲು ಹೇಳಿದರೆ ಅವಳು ಐದು ನಾಣ್ಣುಡಿಗಳನ್ನು ಕಂಠಪಾಠ ಮಾಡಿದಳು.

ಡಿಸೆಂಬರ್‌ನಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದಲ್ಲಿ ಕೇವಲ 3 ನಿಮಿಷ 44 ಸೆಕೆಂಡುಗಳಲ್ಲಿ ಎಲ್ಲಾ 49 ಗಾದೆಗಳನ್ನು ಪಠಿಸಿದಳು. ಅವಳ ಪ್ರತಿಭೆಯನ್ನು ಎಲ್ಲರೂ ಮೆಚ್ಚಿಕೊಂಡರು. ಅವಳ ಕಲೆಯನ್ನು ಗಮನಿಸಿದ ಡಾ.ಅಮರ್‌ಕುಮಾರ್ ಅವರು ತಮ್ಮದೇ 'ಸುಗ್ಗಿ ಸಂಭ್ರಮ' ಕಾರ್ಯಕ್ರಮದಲ್ಲಿ ಲಕ್ಷ್ಮಿತಾಳ ಕನ್ನಡ ಭಾಷಾ ಪಾಂಡಿತ್ಯವನ್ನು ಅನಾವರಣಗೊಳಿಸಲು ವೇದಿಕೆ ನೀಡಿದರು.

> “ಅವಳು ಎಲ್‌ಕೆಜಿಯಿಂದಲೂ ಟಾಪರ್ ಆಗಿದ್ದಳು ಮತ್ತು ಯಾವಾಗಲೂ ಕನ್ನಡದಲ್ಲಿ ಬಲವಾದ ಆಸಕ್ತಿಯನ್ನು ತೋರಿಸುತ್ತಿದ್ದಳು. ನಾವು ಪ್ರದರ್ಶನಗಳಿಗೆ ಹೋದಾಗಲೆಲ್ಲಾ ಅವಳು ಕನ್ನಡ ಕಥೆ ಪುಸ್ತಕಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಾಳೆ. ಅವಳಿಗೆ ತೀಕ್ಷ್ಣವಾದ ಸ್ಮರಣಾ ಶಕ್ತಿಯಿದೆ. ಅವಳ ಪ್ರತಿಭೆಗೆ, ನಾವು ಸದಾ ಬೆಂಬಲ ನೀಡುತ್ತೇವೆ.
> – ಲಕ್ಷ್ಮಿತಾ ತಂದೆ ಕೃಷ್ಣೇಗೌಡ



> ಮೊಬೈಲ್, ಸಾಮಾಜಿಕ ಜಾಲತಾಣದ ಪಿಡುಗುಗಳು, ಪರ ಭಾಷಾ ವ್ಯಾಮೋಹ ಕನ್ನಡವನ್ನು ಕೊಲ್ಲುತ್ತಿದೆ. ಜನಪದ ಸಾಹಿತ್ಯವನ್ನು ಉಳಿಸುವ ಮೂಲಕ ಕನ್ನಡ ಉಳಿಸುವ ಕೆಲಸ ಮಾಡಬೇಕಿದೆ. ಶಾಲಾ ಹಂತದಲ್ಲಿಯೂ ಮಕ್ಕಳಲ್ಲಿ ಕನ್ನಡದ ಅಭಿರುಚಿ ಬೆಳೆಸಬೇಕು.
> –ಪಿ.ನಾಗಮ್ಮ, ಕನ್ನಡ ಶಿಕ್ಷಕಿ

ತನ್ನ ಅಸಾಧಾರಣ ಸ್ಮರಣ ಶಕ್ತಿಯಿಂದ ಎಲ್ಲರಿಂದಲೂ ಸೈ ಎನಿಸಿಕೊಂಡು, ಎಲ್ಲಾ 49 ಕನ್ನಡ ಅಕ್ಷರಗಳಿಗೆ ಅನುಗುಣವಾದ ಗಾದೆಗಳನ್ನು ದೋಷರಹಿತವಾಗಿ ಪಠಿಸುವ ಮೂಲಕ ಕನ್ನಡ ಭಾಷೆಯ ಮೇಲೆ ಮತ್ತು ಅದರ ಸಾಂಪ್ರದಾಯಿಕ ಬುದ್ಧಿವಂತಿಕೆಯ ಮೇಲೆ ಅಸಾಧಾರಣ ಪಾಂಡಿತ್ಯವನ್ನು ಪ್ರದರ್ಶಿಸಿದ್ದಾಳೆ. ಆ ಮೂಲಕ ಇಂದು ಎಲ್ಲೆಡೆ ಗುರುತಿಸಿಕೊಂಡಿದ್ದಾಳೆ ಎಂದು ಸಂತಸ ವ್ಯಕ್ತಪಡಿಸಿದರು.

ಕನ್ನಡ ಮಾತನಾಡುವವರ ಸಂಖ್ಯೆ ದಿನೇ–ದಿನೆ ಗಣನೀಯವಾಗಿ ಇಳಿಕೆ ಕಾಣುತ್ತಿದೆ. ಇತರೆ ಭಾಷೆಗಳ ಪ್ರಭಾವ, ಕನ್ನಡದಲ್ಲಿ ಮೌಲ್ಯಯುತ ಶಿಕ್ಷಣ ದೊರೆಯದೇ ಇರುವುದು ಇದಕ್ಕೆಲ್ಲಾ ಮೂಲ ಕಾರಣವಾಗಿದೆ. ಶಾಲಾ ಹಂತದಲ್ಲಿಯೇ ಕಡ್ಡಾಯವಾಗಿ ಕನ್ನಡ ಜಾರಿಗೊಳಿಸಿ, ಕನ್ನಡದಲ್ಲಿಯೇ ತಂತ್ರಜ್ಞಾನ ವಿಷಯಗಳನ್ನು ಒದಗಿಸಿಕೊಡುವ ಮೂಲಕ ಕನ್ನಡ ಉಳಿಸಲು ದಿಟ್ಟ ಹೆಜ್ಜೆಯನ್ನಿಡಬೇಕು ಎನ್ನುತ್ತಾರೆ ಶಿಕ್ಷಕಿ ನಾಗಮ್ಮ.

ವಿಜೃಂಭಣೆಯ ಶ್ರೀ ಘನನೀಲಿ ಸಿದ್ದಪ್ಪಾಜಿ ಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವ...



ಮೈಸೂರಿನ ಮಂಚೇಗೌಡನಕೊಪ್ಪಲಿನಲ್ಲಿ ಶ್ರೀ ಘನನೀಲಿ ಸಿದ್ದಪ್ಪಾಜಿ ಸ್ವಾಮಿ ದೇವಸ್ಥಾನದ 5ನೇ ವರ್ಷದ ಜಾತ್ರಾ ಮಹೋತ್ಸವ ಮಂಗಳವಾರ ವಿಜೃಂಭಣೆಯಿಂದ ಜರುಗಿತು. ಜಾತ್ರೆಯ ಪ್ರಯುಕ್ತ ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಜಾತ್ರಾ ಮಹೋತ್ಸವಕ್ಕೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರು ಭೇಟಿ ನೀಡಿದ್ದರು. ಈ ವೇಳೆ ಮಂಚೇಗೌಡನಕೊಪ್ಪಲು ಘನನೀಲಿ ಸಿದ್ದಪ್ಪಾಜಿ ಸ್ವಾಮಿ ದೇವಸ್ಥಾನದ ಗುಡ್ಡಪ್ಪ ನಾಗರಾಜು (ಜೋಗಿ), ಮುಖಂಡರಾದ ರವಿಮಾಮ (ಡೆಲ್ಲಿ ರವಿ), ರವಿ, ಎನ್.ಶ್ರೀಧರ್, ಸತೀಶ್, ಕರಿಯಪ್ಪ, ಲೋಕೇಶ್, ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಪೌರ ಕಾರ್ಮಿಕರಿಗೆ ಶೌಚಾಲಯ ಬಳಕೆಗೆ ಅವಕಾಶ ಮಾಡಿಕೊಡಿ

ಸಾರ್ವಜನಿಕರಲ್ಲಿ ಪಾಲಿಕೆ ಮನವಿ

ಮೈಸೂರು, ಫೆ.10– ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ನಗರ ವ್ಯಾಪ್ತಿಯಲ್ಲಿರುವ ಎಲ್ಲಾ ಹೋಟೆಲ್‌ಗಳು, ಪೆಟ್ರೋಲ್ ಬಂಕ್, ವಾಣಿಜ್ಯ ಪ್ರತಿಷ್ಠಾನಗಳು ಹಾಗೂ ಸಾರ್ವಜನಿಕ ಸಂಸ್ಥೆಗಳಲ್ಲಿ ಶೌಚಾಲಯ ಬಳಕೆಗೆ ಅವಕಾಶ ನೀಡಬೇಕು ಎಂದು ನಗರ ಪಾಲಿಕೆ ಮನವಿ ಮಾಡಿದೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ಪೌರಕಾರ್ಮಿಕರು ದಿನದ ಬಹುಪಾಲು ಸಮಯವನ್ನು ನಗರ ಸ್ವಚ್ಛತೆ ಮತ್ತು ಸಾರ್ವಜನಿಕ ಆರೋಗ್ಯ ಕಾಪಾಡುವ ಕಾರ್ಯಕ್ಕೆ ಮುಡುಪಾಗಿಡುತ್ತಿದ್ದು, ಶೌಚಾಲಯ ಬಳಕೆಯಂತಹ ಮೂಲಭೂತ ಸೌಲಭ್ಯವನ್ನು ನಿರಾಕರಿಸುವುದು ಅವರ ಗೌರವಕ್ಕೆ ಹಾಗೂ ಮಾನವೀಯತೆಗೆ ವಿರುದ್ಧ ಎಂದು ಪಾಲಿಕೆ ತಿಳಿಸಿದೆ.

ಈ ಕುರಿತು ಸ್ಪಷ್ಟನೆ ನೀಡಿರುವ ಪಾಲಿಕೆ, ಪೌರಕಾರ್ಮಿಕರಿಗೆ ಶೌಚಾಲಯ ಬಳಕೆಯನ್ನು ನಿರಾಕರಿಸುವುದು 2013ರ 'ಮ್ಯಾನುಯಲ್ ಸ್ಕ್ಯಾವೆಂಜಿಂಗ್ ನಿಷೇಧ ಮತ್ತು ಪುನರ್ವಸತಿ ಕಾಯ್ದೆ'ಯ ಉದ್ದೇಶ, ಕೇಂದ್ರ ಸರ್ಕಾರದ 'ಸ್ವಚ್ಛ ಭಾರತ ಮಿಷನ್–ನಗರ' ಮಾರ್ಗಸೂಚಿಗಳು ಹಾಗೂ 1976ರ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆಯಡಿ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿರುವ ಅಧಿಕಾರಗಳಿಗೂ ವಿರುದ್ಧವಾಗಿದ್ದು, ಇಂತಹ ನಿರಾಕರಣೆ ಭಾರತ ಸಂವಿಧಾನದ 21ನೇ ವಿಧಿ ಅಡಿಯಲ್ಲಿ ನೀಡಲಾಗಿರುವ ಜೀವ ಮತ್ತು ಮಾನವ ಗೌರವದ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂದು ಸ್ಪಷ್ಟಪಡಿಸಿದೆ.

ಎಲ್ಲಾ ಪ್ರತಿಷ್ಠಾನಗಳು ಯಾವುದೇ ಭೇದಭಾವವಿಲ್ಲದೆ ಪೌರಕಾರ್ಮಿಕರಿಗೆ ಶೌಚಾಲಯ ಬಳಕೆಗೆ ಸಹಕಾರ ನೀಡಬೇಕು ಎಂದು ಮೈಸೂರು ನಗರ ಪಾಲಿಕೆ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಇಂಟರ್‌ನ್ಯಾಷನಲ್ ಬಿಗ್ ಕ್ಯಾಟ್ ಅಲೈಯನ್ಸ್ ಶೃಂಗ ಸಭೆ; 38 ವಿದೇಶಿ ಪ್ರತಿನಿಧಿಗಳು ತಾಂತ್ರಿಕ ಅಧಿವೇಶನದಲ್ಲಿ ಭಾಗಿ

ಮೈಸೂರು,ಫೆ.10(ಪಿಎಂ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಮ್ಮಿಕೊಂಡಿರುವ ಇಂಟರ್‌ನ್ಯಾಷನಲ್ ಬಿಗ್ ಕ್ಯಾಟ್ ಅಲೈಯನ್ಸ್ ಶೃಂಗ ಸಭೆಯ ಎರಡನೇ ದಿನವಾದ ಮಂಗಳವಾರ 20 ಬಿಗ್ ಕ್ಯಾಟ್‌ಗಳ ವ್ಯಾಪ್ತಿ ಹೊಂದಿರುವ ದೇಶಗಳಿಂದ ಆಗಮಿಸಿರುವ 38 ವಿದೇಶಿ ಪ್ರತಿನಿಧಿಗಳು ತಾಂತ್ರಿಕ ಅಧಿವೇಶನಗಳಲ್ಲಿ ಪಾಲ್ಗೊಂಡಿದ್ದರು.

'ಪರಿಸರ ವ್ಯವಸ್ಥೆಯ ಪುನಃಸ್ಥಾಪನೆ ಮತ್ತು ಆವಾಸಸ್ಥಾನ ನಿರ್ವಹಣೆ' ಕುರಿತು ಪ್ರಾಜೆಕ್ಟ್ ಟೈಗರ್ ಕರ್ನಾಟಕದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ರಮೇಶ್ ಕುಮಾರ್ ವಿಚಾರ ಮಂಡಿಸಿದರು. ಅಂತೆಯೇ 'ವನ್ಯಜೀವಿ ಸಂರಕ್ಷಣೆಗಾಗಿ ಶಾಸನಗಳು' ಕುರಿತು ಕರ್ನಾಟಕ ಪೊಲೀಸ್ ಇಲಾಖೆ ಸಿಐಡಿ ಅಪರಾಧ ತನಿಖಾ ವಿಭಾಗದ ಕಾನೂನು ಸಲಹೆಗಾರ ಹಾಗೂ ಸಾರ್ವಜನಿಕ ಅಭಿಯೋಜಕ ಮಹೇಶ್ ವಿ.ವೈದ್ಯ, 'ಪರಿಸರ ವ್ಯವಸ್ಥೆಯ ಮೌಲ್ಯಮಾಪನ' ಕುರಿತು ತಜ್ಞ ಸ್ವಪನ್ ಮೆಹ್ರಾ ಹಾಗೂ 'ಆವಾಸಸ್ಥಾನ ಪುನಃಸ್ಥಾಪನೆ' ಕುರಿತು ಭೂದೃಶ್ಯ ಪುನರ್ವಸತಿ ತಜ್ಞ ಡಾ.ತಾರ್ಶ್ ವಿಚಾರ ಮಂಡಿಸಿದರು.



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಮ್ಮಿಕೊಂಡಿರುವ ಇಂಟರ್‌ನ್ಯಾಷನಲ್ ಬಿಗ್ ಕ್ಯಾಟ್ ಅಲೈಯನ್ಸ್ ಶೃಂಗ ಸಭೆಯಲ್ಲಿ ಮಂಗಳವಾರ ತಾಂತ್ರಿಕ ಅಧಿವೇಶನ ನಡೆಯಿತು.

ಕ್ಷೇತ್ರ ಭೇಟಿ: ಮಧ್ಯಾಹ್ನದ ವೇಳೆಗೆ ಪ್ರತಿನಿಧಿಗಳು ಪ್ರಮುಖ ರಕ್ಷಣೆ ಮತ್ತು ಆವಾಸಸ್ಥಾನ ನಿರ್ವಹಣಾ ತಾಣಗಳಿಗೆ ಭೇಟಿ ನೀಡಿದರು. ನೆಲದ ಮೇಲಿನ ರಕ್ಷಣಾ ತಂತ್ರಗಳನ್ನು ಕಲಿಯಲು ಶಿಬಿರ ವೀಕ್ಷಕರೊಂದಿಗೆ ಸಮಾಲೋಚಿಸಿದರು. ನೀರಿನ ತೊಟ್ಟಿಗಳು, ಸೌರ–ಚಾಲಿತ ಬೋರ್‌ವೆಲ್‌ಗಳನ್ನು ವೀಕ್ಷಿಸಿದ ಪ್ರತಿನಿಧಿಗಳು, ಹುಲ್ಲುಗಾವಲು ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿದ್ದ ಆಕ್ರಮಣಕಾರಿ ಸಸ್ಯ ತೆರವುಗೊಳಿಸಿ ಸ್ಥಳೀಯ ಹುಲ್ಲುಗಾವಲು ಪುನಃಸ್ಥಾಪನಾ ಕಾರ್ಯದಲ್ಲಿ ಪಾಲ್ಗೊಂಡರು. ಈ ವೇಳೆ ಡಾ.ಪಿ.ರಮೇಶ್‌ಕುಮಾರ್ ಹಾಗೂ ಬಂಡೀಪುರ ಹುಲಿ ಮೀಸಲು ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್ ಅವರು ಪ್ರತಿನಿಧಿಗಳಿಗೆ ಹಲವು ವಿಚಾರಗಳನ್ನು ತಿಳಿಸಿಕೊಟ್ಟರು.

ಬಳಿಕ ನಡೆದ ಅಂತಿಮ ಅಧಿವೇಶನದಲ್ಲಿ 'ಇಮ್ಮರ್ಸಿವ್ ವೈಲ್ಡ್ ಲೈಫ್ ಟೂರಿಸಂ' ಕುರಿತು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿಜಯ್ ಮೋಹನ್‌ರಾಜ್ ವಿಚಾರ ಮಂಡಿಸಿದರು. ಪ್ರತಿನಿಧಿಗಳು ಬಂಡೀಪುರದಲ್ಲಿ ಗಮನಿಸಿದ ಜ್ಞಾನ ಮತ್ತು ಅಭ್ಯಾಸಗಳನ್ನು ತಮ್ಮ ದೇಶಗಳಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು ಮತ್ತು ಅನುಷ್ಠಾನಗೊಳಿಸಬಹುದು ಎಂಬುದರ ಕುರಿತು ಆಲೋಚನೆಗಳನ್ನು ವಿನಿಮಯ ಮಾಡಿಕೊಂಡರು. ಫೆ.11ರಂದು ಹೆಚ್ಚುವರಿ ಕ್ಷೇತ್ರ ಭೇಟಿಗಳು ಮತ್ತು ಸಮಾರೋಪ ಕಾರ್ಯಾಗಾರ ನಡೆಯಲಿದೆ.

ದೇಶ - ವಿದೇಶ

ಮಂಗಗಳಿಂದ ತಪ್ಪಿಸಿಕೊಳ್ಳುವಾಗ ತಾರಸಿಯಿಂದ ಕೆಳಗೆ ಬಿದ್ದು ವೃದ್ಧೆ ಸಾವು

ಅಮ್ರೋಹಾ: ಮಂಗಗಳ ದಾಳಿಯಿಂದ ತಪ್ಪಿಸಿಕೊಳ್ಳಲು ವೃದ್ಧೆಯೊಬ್ಬರು ಛಾವಣಿಯಿಂದ ಹಾರಿ ಪ್ರಾಣಬಿಟ್ಟಿರುವ ಘಟನೆ ಉತ್ತರ ಪ್ರದೇಶದ ಅಮ್ರೋಹಾ ಜಿಲ್ಲೆಯಲ್ಲಿ ನಡೆದಿದೆ. ಈ ದುರಂತ ಘಟನೆ ಆದಂಪುರ ಪೊಲೀಸ್ ಠಾಣಾ ವ್ಯಾಪ್ತಿಯ ಪಾಪ್ಸರಾ ಗ್ರಾಮದಲ್ಲಿ ಸಂಭವಿಸಿದೆ. ವರದಿಗಳ ಪ್ರಕಾರ, ಪಾಪ್ಸಾ ಗ್ರಾಮದ ನಿವಾಸಿ ಮುನ್ನಾ ಎಂಬುವವರು ತಮ್ಮ ಮನೆಯ ಛಾವಣಿಯ ಮೇಲೆ ಕುಳಿತಿದ್ದರು. ಮಧ್ಯಾಹ್ನ 2 ಗಂಟೆ ಸುಮಾರಿಗೆ ಪರಸ್ಪರ ಜಗಳವಾಡುತ್ತಿದ್ದ ಕೋತಿಗಳ ಗುಂಪು ಇದ್ದಕ್ಕಿದ್ದಂತೆ ಛಾವಣಿಯ ಮೇಲೆ ಓಡಿ ಬಂದಿದ್ದವು. ಆಗ ಮಹಿಳೆ ಭಯಭೀತರಾಗಿ ಎದ್ದು ನಿಂತಿದ್ದರು. ಅಷ್ಟರಲ್ಲಿ ಕೋತಿಗಳು ಅವರ ಮೇಲೆ ದಾಳಿ ಮಾಡಿದ್ದವು. ಗಾಬರಿಗೊಂಡ ಮಹಿಳೆ ಚಮೇಲಿ ಓಡಲು ಪ್ರಯತ್ನಿಸಿದ್ದಾರೆ. ಸಮತೋಲನ ಕಳೆದುಕೊಂಡು ನೇರವಾಗಿ ಕೆಳಗೆ ಬಿದ್ದಿದ್ದಾರೆ. ಬಿದ್ದ ಪರಿಣಾಮ ಅವರ ದೇಹದ ಹಲವು ಭಾಗಗಳು ಮತ್ತು ತಲೆಗೆ ಗಂಭೀರ ಗಾಯಗಳಾಗಿದ್ದವು. ಅವರ ಕುಟುಂಬವು ಕೂಡಲೇ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಿತ್ತು. ಆದರೆ ಮಾರ್ಗಮಧ್ಯದಲ್ಲೇ ಮೃತಪಟ್ಟಿದ್ದಾರೆ. ಘಟನೆ ಬಗ್ಗೆ ಮಾಹಿತಿ ಪಡೆದ ಪೊಲೀಸರು ಸ್ಥಳಕ್ಕೆ ಆಗಮಿಸಿ ವಿಷಯದ ಬಗ್ಗೆ ಮಾಹಿತಿ ಪಡೆದರು. ಆದರೆ ಕುಟುಂಬವು ಯಾವುದೇ ಕಾನೂನು ಕ್ರಮ ಕೈಗೊಳ್ಳಲು ನಿರಾಕರಿಸಿತು.



ಪುಣೆ ಮೇಯರ್ ಆಗಿ ಬಿಜೆಪಿಯ ಮಂಜುಷಾ ನಾಗ್ಪುರ್ ಅವಿರೋಧ ಆಯ್ಕೆ

ಪುಣೆ, ಫೆ.10– ಪುಣೆ ಮಹಾನಗರ ಪಾಲಿಕೆಯ (PMC) ನೂತನ ಮೇಯರ್ ಆಗಿ ಬಿಜೆಪಿ ಕಾರ್ಪೊರೇಟರ್ ಮಂಜುಷಾ ನಾಗ್ಪುರೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆರ್‌ಪಿಐ (ಎ) ನಾಯಕ ಪರಶುರಾಮ್ ವಾಡೇಕರ್ ಉಪಮೇಯರ್ ಆಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಮೇಯರ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಎನ್‌ಸಿಪಿಯ ಶೀತಲ್ ಸಾವಂತ್ ಮತ್ತು ಕಾಂಗ್ರೆಸ್ ನಾಯಕಿ ಅಶ್ವಿನಿ ಲಾಂಡ್‌ಗೆ ಅವರು ಕೊನೆಯ ಕ್ಷಣದಲ್ಲಿ ನಾಮಪತ್ರ ಹಿಂತೆಗೆದುಕೊಂಡರು. ಅದೇ ರೀತಿ, ಉಪಮೇಯರ್ ರೇಸ್‌ನಲ್ಲಿದ್ದ ಎನ್‌ಸಿಪಿ ಕಾರ್ಪೊರೇಟರ್ ದತ್ತಾತ್ರೇಯ ಬಹಿರತ್ ಮತ್ತು ಕಾಂಗ್ರೆಸ್‌ನ ಸಾಹಿಲ್ ಕೇದಾರಿ ಕೂಡ ಹಿಂದೆ ಸರಿದಿದ್ದರಿಂದ, ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಗಳ ಆಯ್ಕೆ ಸುಗಮವಾಯಿತು. ಸಿಂಹಗಡ ಪ್ರದೇಶದ ಕಾರ್ಪೊರೇಟರ್ ಆಗಿರುವ ಇವರು ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮೊದಲಿನಿಂದಲೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಜೊತೆ ನಿಕಟ ಸಂಬಂಧ ಹೊಂದಿದ್ದಾರೆ.

ಒಟ್ಟು 165 ಸದಸ್ಯ ಬಲದ ಪುಣೆ ಮಹಾನಗರ ಪಾಲಿಕೆಯಲ್ಲಿ ಬಿಜೆಪಿಯು 119 ಸ್ಥಾನಗಳನ್ನು ಗೆಲ್ಲುವ ಮೂಲಕ ಸ್ಪಷ್ಟ ಬಹುಮತ ಸಾಧಿಸಿದೆ.

ಸಮಾಜವಾದಿ ನಾಯಕನ ಮೇಲೆ ಗುಂಡು ಹಾರಿಸಲು ಯತ್ನ: ಅದೃಷ್ಟವಶಾತ್ ಪಾರು

ಲಖನೌ: ಉತ್ತರ ಪ್ರದೇಶದ ಮಾಜಿ ಸಚಿವ ಹಾಗೂ ಸಮಾಜವಾದಿ ಪಕ್ಷದ ನಾಯಕ ಮದನ್ ಚೌಹಾಣ್ ಅವರ ಹತ್ಯೆಗೆ ಯತ್ನ ನಡೆದಿದ್ದು, ಯಾವುದೇ ಅಪಾಯವಿಲ್ಲದೆ ಪಾರಾಗಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.



ಕಾರಿನಲ್ಲಿ ಬಂದ ಯುವಕರ ಗುಂಪು ಗುಂಡು ಹಾರಿಸಲು ಪ್ರಯತ್ನಿಸಿದೆ. ಆದರೆ ಅವರ ಬಂದೂಕಿನಿಂದ ಗುಂಡು ಹಾರದಿರುವುದರಿಂದ ಯತ್ನ ವಿಫಲವಾಗಿದೆ ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ. ಚೌಹಾಣ್ ಅವರು ಸಂಬಂಧಿಕರ ನಿಶ್ಚಿತಾರ್ಥ ಸಮಾರಂಭದಲ್ಲಿ ಪಾಲ್ಗೊಳ್ಳಲು ಕಾರಿನಲ್ಲಿ ತೆರಳುತ್ತಿದ್ದಾಗ, ಸೋಮವಾರ ರಾತ್ರಿ ಗರ್ಮುಕ್ತೇಶ್ವರ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಈ ಕುರಿತು ಮಾಹಿತಿ ಹಂಚಿಕೊಂಡಿರುವ ಚೌಹಾಣ್, ಮುಖ್ಯ ರಸ್ತೆಯಿಂದ ಗ್ರಾಮದ ರಸ್ತೆಗೆ ಪ್ರವೇಶಿಸುತ್ತಿದ್ದಂತೆ, ಕಾರಿನಲ್ಲಿ ಬಂದ ಕೆಲವು ಯುವಕರು ತಮ್ಮ ವಾಹನವನ್ನು ಅಡ್ಡಹಾಕಿದರು. ಅದರಲ್ಲಿ ಓರ್ವ ಪಿಸ್ತೂಲ್ ತೆಗೆದು ಗುಂಡು ಹಾರಿಸಲು ಯತ್ನಿಸಿದನು. ಆದರೆ, ಗುಂಡು ಹಾರಲಿಲ್ಲ ಎಂದು ತಿಳಿಸಿದ್ದಾರೆ. ಕೂಡಲೇ ಅವರ ಭದ್ರತಾ ಸಿಬ್ಬಂದಿ ದಾಳಿಕೋರರನ್ನು ಹಿಡಿಯಲು ಪ್ರಯತ್ನಿಸಿದರು. ಆದರೆ, ಹಂತಕರ ಗುಂಪು ಸ್ಥಳದಿಂದ ಪರಾರಿಯಾಗಿದೆ ಎಂದು ತಿಳಿಸಿದ್ದಾರೆ.

ಬಾಂಗ್ಲಾ ಚುನಾವಣೆಗೂ ಮುನ್ನ ರಕ್ತಪಾತ: ಹಿಂದೂ ಉದ್ಯಮಿಯ ಬರ್ಬರ ಹತ್ಯೆ!

ಢಾಕಾ: ಬಾಂಗ್ಲಾದೇಶದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲು ಇನ್ನು ಕೇವಲ 48 ಗಂಟೆಗಳು ಬಾಕಿ ಇರುವ ಬೆನ್ನಲ್ಲೇ ಹಿಂದೂ ಸಮುದಾಯದ ಮೇಲೆ ಮತ್ತೆ ದಾಳಿ ನಡೆದಿದೆ.



ಇಲ್ಲಿನ ಮೈಮನ್‌ಸಿಂಗ್ ಜಿಲ್ಲೆಯಲ್ಲಿ ಸೋಮವಾರ ತಡರಾತ್ರಿ ಹಿಂದೂ ಉದ್ಯಮಿಯೊಬ್ಬರನ್ನು ಅವರ ಅಂಗಡಿಯ ಒಳಗೇ ಚಾಕುವಿನಿಂದ ಇರಿದು ಭೀಕರವಾಗಿ ಕೊಲೆ ಮಾಡಲಾಗಿದೆ. ಮೃತರನ್ನು ಸುಶೇನ್ ಚಂದ್ರ ಸರ್ಕಾರ್ (62) ಎಂದು ಗುರುತಿಸಲಾಗಿದೆ. ಇವರು ಸ್ಥಳೀಯ ದಕ್ಷಿಣಕಂಡ ಗ್ರಾಮದ ನಿವಾಸಿಯಾಗಿದ್ದು, ತ್ರಿಶಾಲ್ ಉಪಜಿಲಾದ ಬೋಗರ್ ಬಜಾರ್‌ನಲ್ಲಿ ಮೆಸರ್ಸ್ ಭಾಯ್ ಭಾಯ್ ಎಂಟರ್‌ಪ್ರೈಸ್' ಹೆಸರಿನ ಅಂಗಡಿ ನಡೆಸುತ್ತಿದ್ದರು. ಸೋಮವಾರ ರಾತ್ರಿ ಸುಮಾರು 11 ಗಂಟೆಗೆ ಅವರು ಅಂಗಡಿಯಲ್ಲಿದ್ದಾಗ ನುಗ್ಗಿದ ಅಪರಿಚಿತ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ. ಹತ್ಯೆಯ ನಂತರ ಶವವನ್ನು ಅಂಗಡಿಯ ಒಳಗೇ ಇರಿಸಿ, ಶಟರ್ ಎಳೆದು ಹಂತಕರು ಪರಾರಿಯಾಗಿದ್ದಾರೆ. ಹಂತಕರ ಪತ್ತೆಗಾಗಿ ಪೊಲೀಸರು ವಿಶೇಷ ತಂಡ ರಚಿಸಿದ್ದು, ಮೈಮನ್‌ಸಿಂಗ್ ಪರಿಸರದಲ್ಲಿ ಬಿಗಿ ಭದ್ರತೆ ಏರ್ಪಡಿಸಲಾಗಿದೆ. ಬಾಂಗ್ಲಾದೇಶದಲ್ಲಿ ಫೆ. 12ರಂದು ಚುನಾವಣೆ ನಡೆಯಲಿದ್ದು, ಈ ಹತ್ಯೆಯಿಂದ ತೀವ್ರ ಭೀತಿ ಹುಟ್ಟಿಸಿದೆ.

ಅಯೋಧ್ಯೆ ರಾಮಮಂದಿರ ದಾಳಿಗೆ ಸಂಚು ರೂಪಿಸಿದ್ದ ಉಗ್ರನ ಹತ್ಯೆ..!

ಫರಿದಾಬಾದ್: ಅಯೋಧ್ಯೆಯ ರಾಮಮಂದಿರದ ಮೇಲೆ ದಾಳಿ ನಡೆಸುವ ಸಂಚು ರೂಪಿಸಿದ ಆರೋಪದ ಮೇಲೆ ಬಂಧನಕ್ಕೊಳಗಾಗಿದ್ದ ಉಗ್ರ ಅಬ್ದುಲ್ ರೆಹ್ಮಾನ್ ಫರೀದಾಬಾದ್ ಜೈಲಿನಲ್ಲಿ ಹತ್ಯೆಗೀಡಾಗಿದ್ದಾನೆ. ಉಗ್ರ ಅಬ್ದುಲ್ ರೆಹ್ಮಾನ್‌ನನ್ನು ಜೈಲಿನೊಳಗೆ ಸಹ ಕೈದಿಯೊಬ್ಬರು ಹತ್ಯೆ ಮಾಡಿದ್ದಾರೆ. ಉಗ್ರ ಅಬ್ದುಲ್ ರೆಹಮಾನ್ ಮತ್ತು ಸಹ ಕೈದಿ ಅರುಣ್ ಚೌಧರಿ ಮಧ್ಯೆ ಜಗಳ ನಡೆದಿದೆ. ಜಗಳ ವಿಕೋಪಕ್ಕೆ ತಿರುಗಿ ಅರುಣ್ ಚೌಧರಿ ಹರಿತವಾದ ವಸ್ತುವಿನಿಂದ ತಲೆಗೆ ಹೊಡೆದಿದ್ದಾನೆ. ಇದರಿಂದ ತೀವ್ರ ಗಾಯಗೊಂಡಿದ್ದ ರೆಹಮಾನ್‌ನನ್ನು ಜಿಲ್ಲಾಸ್ಪತ್ರೆಗೆ ತರಲಾಗಿತ್ತು. ಪರೀಕ್ಷೆ ನಡೆಸಿದ ವೈದ್ಯರು ಮೃತಪಟ್ಟಿದ್ದಾನೆ ಎಂದು ಹೇಳಿದ್ದಾರೆ.



ಈತನನ್ನು ಕಳೆದ ವರ್ಷದ ಮಾರ್ಚ್‌ನಲ್ಲಿ ಗುಜರಾತ್ ಎಟಿಎಸ್ ಮತ್ತು ಹರಿಯಾಣ ವಿಶೇಷ ಕಾರ್ಯಪಡೆ ಜಂಟಿ ಕಾರ್ಯಾಚರಣೆಯಲ್ಲಿ ಬಂಧನಕ್ಕೊಳಪಡಿಸಿತ್ತು. ರಾಮ ಮಂದಿರದ ಮೇಲೆ ಉಗ್ರ ದಾಳಿ ನಡೆಸುವ ಯೋಜನೆ ರೂಪಿಸಿದ್ದ ಆರೋಪದ ಮೇಲೆ ಬಂಧನಕ್ಕೊಳಗಾಗಿದ್ದ. ಬಂಧನದ ವೇಳೆ ಆತನ ಬಳಿ ಎರಡು ಗ್ರೆನೇಡ್‌ಗಳು ಪತ್ತೆಯಾಗಿತ್ತು. ಅಬ್ದುಲ್ ರೆಹ್ಮಾನ್ ನಕಲಿ ಗುರುತಿನ ಚೀಟಿಯೊಂದಿಗೆ ಫರೀದಾಬಾದ್‌ನಲ್ಲಿ ವಾಸಿಸಿದ್ದನು. ಅನುಮಾನ ತಪ್ಪಿಸಲು ಆಟೋರಿಕ್ಷಾ ಚಾಲಕರಾಗಿ ಕೆಲಸ ಮಾಡುತ್ತಿದ್ದ ಎಂಬುದು ತನಿಖೆಯ ವೇಳೆ ಬೆಳಕಿಗೆ ಬಂದಿತ್ತು.

ಮೈಸೂರು ಮಿತ್ರ ಬುಧವಾರ 11 ಫೆಬ್ರವರಿ 2026

ದೃಶ್ಯಮಾಧ್ಯಮಗಳಲ್ಲಿ ಕನ್ನಡ ಕಡ್ಡಾಯಗೊಳಿಸಿ

ಸಾಹಿತ್ಯ ಸಮ್ಮೇಳನ ಅಧ್ಯಕ್ಷೆ ಜಲಜಾ ಶೇಖರ್ ಆಗ್ರಹ



9ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಗಣ್ಯರು ಉದ್ಘಾಟಿಸಿದರು.

ಮಡಿಕೇರಿ, ಫೆ.10–ಇತ್ತೀಚಿನ ದಿನಗಳಲ್ಲಿ ದೃಶ್ಯ ಮಾಧ್ಯಮದಲ್ಲಿ ಕನ್ನಡ ಮರೆಯಾಗುತ್ತಿದ್ದು, ಅದಕ್ಕಾಗಿ ಕನ್ನಡವನ್ನು ಕಡ್ಡಾಯಗೊಳಿಸುವ ಮುಖೇನ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಬೇಕೆಂದು ಸಾಹಿತ್ಯ ಸಮ್ಮೇಳನ ಅಧ್ಯಕ್ಷೆ ಜಲಜಾ ಶೇಖರ್ ಕರೆ ನೀಡಿದ್ದಾರೆ.

ಸೋಮವಾರಪೇಟೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಐಗೂರು ಗ್ರಾಮದಲ್ಲಿ ಆಯೋಜಿಸಿದ್ದ 9ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಮಾತನಾಡಿದ ಅವರು, ಕನ್ನಡದ ಉಳಿವಿಗಾಗಿ ಪತ್ರಕರ್ತರು, ಪತ್ರಿಕೆಗಳು ಮುಂದಾಗುತ್ತಿವೆ. ಅದೇ ರೀತಿಯಾಗಿ ಚಲನಚಿತ್ರ, ಗಣಕ ಯಂತ್ರ, ಸಂಚಾರಿ ಮಾಧ್ಯಮದಲ್ಲಿ ಕನ್ನಡವನ್ನು ಕಡ್ಡಾಯಗೊಳಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಬೆಂಗಳೂರಿನಲ್ಲಿ ಕನ್ನಡ ಕಣ್ಮರೆಯಾಗುತ್ತಿದೆ. ಕನ್ನಡ ಭಾಷೆ ನಾವು ಮಾತನಾಡಿದರೆ ಮಾತ್ರ ಕನ್ನಡ ಉಳಿಯಲು ಸಾಧ್ಯ. ಇಂದಿನ ಮಕ್ಕಳಿಗೆ ಕನ್ನಡದ ಬಗ್ಗೆ ಅರಿವು, ಭಾಷಾಜ್ಞಾನ ಮೂಡಿಸ ಬೇಕಾಗಿದೆ. ಮಕ್ಕಳಲ್ಲಿ ಕನ್ನಡ ಪುಸ್ತಕದ ಪ್ರೀತಿ ಹೆಚ್ಚಾಗುವಂತೆ ಮಾಡಬೇಕು. ಮಕ್ಕಳು ಆನ್‌ಲೈನ್ ಗೇಮ್ ಅಂತಹ ಕೆಟ್ಟಚಟಗಳನ್ನು ಬಿಟ್ಟು ಓದುವ ಹವ್ಯಾಸವನ್ನು ರೂಢಿಸಿ ಜ್ಞಾನ ಬೆಳೆಸಿಕೊಳ್ಳಬೇಕು ಎಂದರು.

ಕಾಜೂರು ಸರ್ಕಾರಿ ಕಾಲೇಜು ಸಭಾಂಗಣದ ಕೊಡಗಿನ ಗೌರಮ್ಮ ಮುಖ್ಯವೇದಿಕೆಯಲ್ಲಿ ಸಮ್ಮೇಳನವನ್ನು ಮಾಜಿ ಅರಣ್ಯ ಸಚಿವ ಬಿ.ಎ. ಜೀವಿಜಯ ಉದ್ಘಾಟಿಸಿ ನಮ್ಮ ಭಾಗದ ಪ್ರಕೃತಿ ಮಡಿಲಿನಲ್ಲಿ ಈ ಕಾರ್ಯಕ್ರಮ ನಡೆಯುತ್ತಿರುವುದು ಖುಷಿ ತಂದಿದೆ ಸಾಹಿತ್ಯ ಕ್ಷೇತ್ರದಲ್ಲಿ ಕೊಡಗಿನ ಸಾಹಿತಿಗಳು ಸಲ್ಲಿಸಿರುವ ಕೊಡುಗೆಯನ್ನು ಮೆಲುಕು ಹಾಕಿದರು.

ಐಗೂರಿನ ಐಸಿರಿ ಸ್ಮರಣ ಸಂಚಿಕೆಯನ್ನು ಶಾಸಕ ಡಾ.ಮಂತರ್ ಗೌಡ ಬಿಡುಗಡೆಮಾಡಿ, ಕನ್ನಡವನ್ನು ನಮ್ಮ ದೇಶದ ಜೊತೆಗೆ ಹೊರ ದೇಶದಲ್ಲೂ ಇನ್ನಷ್ಟು ಬೆಳೆಸುವ ಕೆಲಸ ಮಾಡಬೇಕು. ಇನ್ನು ಹೆಚ್ಚು ಹೆಚ್ಚು ಸಾಹಿತ್ಯಕೃತಿಗಳನ್ನು ಬಿಡುಗಡೆ ಮಾಡುವಲ್ಲಿ ತೊಡಗಿಸಿಕೊಳ್ಳಬೇಕು. ಯುವ ಪೀಳಿಗೆಗೆ ಕನ್ನಡದ ಬಗ್ಗೆ ಇಂತಹ ಕಾರ್ಯಕ್ರಮ ಮಾಡುವ ಮೂಲಕ ಕನ್ನಡದ ಬಗ್ಗೆ ಅಭಿಮಾನ ಹಾಗೂ ಅರಿವು ಮೂಡು ವಂತೆ ಮಾಡಬೇಕು. ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷ ಎಂ.ಪಿ. ಕೇಶವ ಕಾಮತ್ ಮಾತನಾಡಿದರು. ವೇದಿಕೆಯಲ್ಲಿ ನಂಗಾರು ಕೀರ್ತಿ ಪ್ರಸಾದ್, ಸಮ್ಮೇಳನ ಮಹಾ ಪೋಷಕ ಟಿ.ಪಿ.ರಮೇಶ್, ನಿಕಟ ಪೂರ್ವ ಅಧ್ಯಕ್ಷೆ ಶ.ಗ.ನಯನತಾರ, ಸಾಹಿತಿ ಡಾ.ಜಯಪ್ಪ ಹೊನ್ನಾಳಿ, ಕೆ.ಪಿ.ಚಂದ್ರಕಲಾ, ಕೆ.ಎಂ.ಲೋಕೇಶ್, ರೇವತಿ ರಮೇಶ್, ಕಾರ್ಯದರ್ಶಿ ಜ್ಯೋತಿ ಅರುಣ್, ಎ.ಪಿ.ವೀರರಾಜು, ಕೆ.ಪಿ.ದಿನೇಶ್, ಜವರಪ್ಪ, ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಹೆಣ್ಣು ಮಕ್ಕಳಿಗೂ ಸಮಾನ ಅವಕಾಶ ಕಲ್ಪಿಸಿ



ಅಂಗನವಾಡಿ ಕೇಂದ್ರದ ಆವರಣದಲ್ಲಿ ಪೋಷಣ ಮಾಸಾಚರಣೆ ನಡೆಯಿತು.

ವಿರಾಜಪೇಟೆ, ಫೆ.10–ಗಂಡು ಮಕ್ಕಳಿಗೆ ಮಾತ್ರ ಆದ್ಯತೆ ನೀಡದೆ, ಹೆಣ್ಣು ಮಕ್ಕಳು ಸಮಾಜದ ಕಣ್ಣು ಎಂದು ತಿಳಿದು ಪ್ರೋತ್ಸಾಹಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಉಪನಿರ್ದೇಶಕ ಪ್ರಸನ್ನ ಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತಾಲೂಕು ಕೆದಮುಳ್ಳೂರು ಗ್ರಾಪಂ ವ್ಯಾಪ್ತಿಯ ಕ್ರಿಶ್ಚಿಯನ್ ಕಾಲೋನಿ ಅಂಗನವಾಡಿ ಕೇಂದ್ರದ ಆವರಣದಲ್ಲಿ ಪೋಷಣ ಮಾಸಾಚರಣೆ ಅಂಗವಾಗಿ ಅಪೌಷ್ಟಿಕ ಮುಕ್ತ ಭಾರತ ಕಾರ್ಯಕ್ರಮ ಉದ್ಘಾಟಿಸಿದ ಅವರು ಹುಟ್ಟುವ ಮಗು ಹೆಣ್ಣಾದರೂ ಲಿಂಗ ತಾರತಮ್ಯ ಮಾಡದೆ ಉತ್ತಮ ಭವಿಷ್ಯ ನಿರ್ಮಾಣ ಮಾಡುವತ್ತ ಪೋಷಕರು ಗಮನ ಹರಿಸುವಂತಾಗಬೇಕು ಎಂದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ಅಧಿಕಾರಿ ರೀತಾ ಪ್ರಾಸ್ತಾವಿಕ ಭಾಷಣ ಮಾಡಿ, ಗರ್ಭಿಣಿ ಸ್ತ್ರೀಯರು ಹೆಚ್ಚು ಒತ್ತಡದಿಂದ ಬಳಲುತ್ತಿದ್ದು, ಹೆಚ್ಚಿನ ಪೋಷಕಾಂಶಗಳು ಹೊಂದಿರುವ ಮಿತ ಆಹಾರ ಸೇವಿಸುವುದು ಉತ್ತಮ. ರೋಗನಿರೋಧಕ ಆಹಾರ ಪದ್ಧತಿಯನ್ನು ಅನುಸರಿಸಿದಲ್ಲಿ ಅಪೌಷ್ಟಿಕತೆಯನ್ನು ಹೋಗಲಾಡಿಸಲು ಪ್ರಯತ್ನಿಸಬಹುದು ಎಂದರು.

ಕಾರ್ಯಕ್ರಮದಲ್ಲಿ ಇಲಾಖೆಯ ವತಿಯಿಂದ ಬೇಟಿ ಬಚಾವೋ–ಬೇಟಿ ಪಡವೋ ಕಾರ್ಯಕ್ರಮದ ಬಗ್ಗೆ ಅರಿವು ಮೂಡಿಸಲಾಯಿತು. ಗ್ರಾಮ ವ್ಯಾಪ್ತಿಯ ಗರ್ಭಿಣಿ ಮಹಿಳೆ ಯರಿಗೆ ಸೀಮಂತ ಕಾರ್ಯಕ್ರಮ ನಡೆಸಲಾಯಿತು.

ಕಾಡುಪ್ರಾಣಿಗಳ ಹಾವಳಿ ನಿಯಂತ್ರಣಕ್ಕೆ ಆಗ್ರಹಿಸಿ ಪ್ರತಿಭಟನೆ





ಸ್ಥಳಕ್ಕೆ ಆಗಮಿಸಿದ ಎಸಿಎಫ್‌ರವರನ್ನು ರೈತರು ತರಾಟೆಗೆ ತೆಗೆದುಕೊಂಡರು. ಬಲಚಿತ್ರದಲ್ಲಿ ಕಾಡಾನೆಗಳ ಹಾವಳಿ ನಿಯಂತ್ರಿಸುವಂತೆ ಒತ್ತಾಯಿಸಿ ಆಲ್ ಇಂಡಿಯಾ ದಲಿತ್ ರೈಟ್ಸ್ ಮೂವ್‌ಮೆಂಟ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಫೆ.10– ದಕ್ಷಿಣ ಕೊಡಗಿನಲ್ಲಿ ಜಾನುವಾರುಗಳ ಮೇಲೆ ಹುಲಿಯ ಅಟ್ಟಹಾಸ ಮುಂದುವರೆದಿದ್ದು, ಒಂದೇ ದಿನ 3 ಹಸುಗಳು ಹುಲಿ ದಾಳಿಗೆ ಬಲಿಯಾಗಿರುವುದನ್ನು ಖಂಡಿಸಿ ಗ್ರಾಮಸ್ಥರು ಹಾಗೂ ರೈತ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ, ಕೂಡಲೇ ಹುಲಿಯನ್ನು ಸೆರೆ ಹಿಡಿಯುವಂತೆ ಆಗ್ರಹಿಸಿದರು.

3 ಗಂಟೆಗಳ ಕಾಲ ಪ್ರತಿಭಟನೆ ನಡೆಸಿದಾಗ ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಎಸಿಎಫ್ ಗೋಪಾಲ್ ಹಾಗೂ ಆರ್‌ಎಫ್‌ಓ ಗಂಗಾಧರ್ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡು ಮೇಲಾಧಿಕಾರಿಗಳು ಸ್ಥಳಕ್ಕೆ ಬರುವಂತೆ ಆಗ್ರಹಕ್ಕೆ ಮಣಿದು, ಸಿಸಿಎಫ್ ಸೋನಾಲ್ ವೃಷ್ಟಿ ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರ ಅಹವಾಲು ಆಲಿಸಿದರು.

ಹುಲಿ ದಾಳಿಗೆ 3 ಹಸುಗಳು ಬಲಿಯಾಗಿರುವ ಬಗ್ಗೆ, ಸರ್ಕಾರಕ್ಕೆ ಮಾಹಿತಿ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಹುಲಿ ಸೆರೆ ಹಿಡಿಯಲು ಮೌಖಿಕ ಅನುಮತಿ ಸಿಕ್ಕಿದೆ. ಇಂದಿ ನಿಂದಲೇ ಸೂಕ್ತ ತಯಾರಿ ನಡೆಸಿ ಸಾಕಾನೆಗಳನ್ನು ಹಾಗೂ ಶಾರ್ಪ್ ಶೂಟರ್‌ಗಳನ್ನು ಕರೆಸಿ ಹುಲಿ ಸೆರೆಗೆ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದು ಎಸಿಎಫ್ ಭರವಸೆ ನೀಡಿದರು.

ಕಾರ್ಯಾಚರಣೆ ಆರಂಭ: ಸಿಸಿಎಫ್ ಸೋನಾಲ್ ವೃಷ್ಟಿ ಮಾರ್ಗದರ್ಶನದಲ್ಲಿ ಡಿಸಿಎಫ್ ಜಗನ್ನಾಥ್ ಮುಂದಾಳತ್ವದಲ್ಲಿ ಎಸಿಎಫ್ ಗೋಪಾಲ್ ನೇತೃತ್ವದಲ್ಲಿ ಬೆಳಗ್ಗಿನಿಂದಲೇ ಡ್ರೋನ್ ಕ್ಯಾಮರಾಹಾಗೂ ಆರ್‌ಆರ್‌ಟಿ ಸಿಬ್ಬಂದಿ ಮೂಲಕ ಹುಲಿಯ ಚಲನವಲನ ಕಂಡು ಹಿಡಿಯಲು ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿದೆ. ಅಲ್ಲದೆ ಹೆಚ್.ಡಿ.ಕೋಟೆ ತಾಲೂಕಿನ ಬಳ್ಳೆ ಸಾಕಾನೆ ಶಿಬಿರದಿಂದ ಮಹೇಂದ್ರ ಹಾಗೂ ತಿತಿಮತಿಯ ಮತ್ತಿಗೊಡು ಸಾಕಾನೆ ಶಿಬಿರದಿಂದ ಭೀಮ ಆನೆಯನ್ನು ಕಾರ್ಯಾಚರಣೆಗೆ ಬಳಸಿಕೊಂಡು ತೋಟ ಹಾಗೂ ಕೀರೆ ಹೊಳೆಯ ಅಸುಪಾಸಿನಲ್ಲಿ ಕಾರ್ಯಾಚರಣೆ ನಡೆಸಲಾಯಿತು.

ನಿಮ್ಮನ್ನೇ ಬೋನ್‌ಗೆ ಹಾಕುತ್ತೇವೆ

ಈ ಭಾಗದಲ್ಲಿ ತಿಂಗಳಿಂದ 7 ಜಾನುವಾರುಗಳನ್ನು ಹುಲಿ ಬಲಿ ತೆಗೆದುಕೊಂಡಿದ್ದರೂ ಸಹ ಸ್ಥಳಕ್ಕೆ ಆಗಮಿಸಿ ಸೂಕ್ತ ಕ್ರಮ ಕೈಗೊಳ್ಳಲು ನಿಮಗೆ ಸಾಧ್ಯವಾಗಿಲ್ಲ. ಹಸುಗಳನ್ನು ಕಳೆದುಕೊಂಡ ರೈತರ ಸಂಕಷ್ಟ ನಿಮಗೆ ಅರ್ಥವಾಗುತ್ತಿಲ್ಲ. ಈ ಕೂಡಲೇ ಹುಲಿಯನ್ನು ಸೆರೆ ಹಿಡಿಯಬೇಕು. ಹುಲಿಯಿಂದ ಇನ್ನು ಒಂದು ಜಾನುವಾರು ಬಲಿಯಾದರೆ 'ನಿಮ್ಮನ್ನೇ ಬೋನ್ ಒಳಗೆ ಕೂಡಿ ಹಾಕಿ ಪ್ರತಿಭಟನೆ ನಡೆಸಬೇಕಾಗುತ್ತದೆ' ಎಂದು ಮನು ಸೋಮಯ್ಯ ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೆ ಸಿಸಿಎಫ್ ಸೋನಾಲ್ ವೃಷ್ಟಿ 'ಆ ರೀತಿ ಹೇಳಬೇಡಿ, ನಾನು ಮಾಡಿ ತೋರಿಸುತ್ತೇನೆ' ಎಂದು ಪ್ರತಿಕ್ರಿಯಿಸಿ ಅಧಿಕಾರಿಗಳ ಸಹಿತ ತಕ್ಷಣವೇ ಸ್ಥಳದಿಂದ ವಾಹನದಲ್ಲಿ ತೆರಳಿದರು.

ಸಿಪಿಐ ಪ್ರತಿಭಟನೆ

ಮಡಿಕೇರಿ: ಕಾಡಾನೆಗಳ ಹಾವಳಿ ತಡೆಗಟ್ಟುವಲ್ಲಿ ಅರಣ್ಯ ಇಲಾಖೆಯ ನಿರ್ಲಕ್ಷ್ಯ ಖಂಡಿಸಿ ಆಲ್ ಇಂಡಿಯಾ ದಲಿತ್ ರೈಟ್ಸ್ ಮೂವ್‌ಮೆಂಟ್ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷದ ವತಿಯಿಂದ ತಿತಿಮತಿ ಅರಣ್ಯ ಇಲಾಖೆ ಕಚೇರಿ ಎದುರು ಪ್ರತಿಭಟನೆ ನಡೆಯಿತು.

ರಾಜ್ಯ ಉಪಾಧ್ಯಕ್ಷ ಎಚ್.ಡಿ.ರಮೇಶ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಡಾನೆಗಳ ಹಾವಳಿ ತಡೆಗಟ್ಟುವಲ್ಲಿ ಅರಣ್ಯ ಇಲಾಖೆ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಆರೋಪಿಸಿ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯದರ್ಶಿ ಕೆ.ವಿ.ಸುನಿಲ್ 20 ವರ್ಷದಿಂದ ಕಾಡಾನೆ, ಹುಲಿ ದಾಳಿ ಹಾಗೂ ವನ್ಯಜೀವಿ ಮಾನವ ಸಂಘರ್ಷದ ಬಗ್ಗೆ ಗಮನ ಸೆಳೆದರು. ಟಿ.ಶೆಟ್ಟಿಗೇರಿ, ಶ್ರೀಮಂಗಲ, ಬಾಳೆಲೆ, ನಾಲ್ಕೇರಿ, ನಲ್ಲೂರು, ಬೆಸಗೂರು, ಕಿರುಗೂರು ಗ್ರಾಮಗಳ ವ್ಯಾಪ್ತಿಯಲ್ಲಿ ಹುಲಿ ಹಾವಳಿ ಹೆಚ್ಚಿರುವುದರ ಬಗ್ಗೆ ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಕೂಡಲೇ ಕ್ರಮ ವಹಿಸುವಂತೆ ವನ್ಯಜೀವಿ ವಲಯದ ಆರ್‌ಎಫ್‌ಓ ದೇವರಾಜ್‌ಗೆ ಮನವಿ ಪತ್ರ ಸಲ್ಲಿಸಿದರು.

ಬೇಡಿಕೆಗಳ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರತಿಭಟನಾಕಾರರಿಗೆ ಆರ್‌ಎಫ್‌ಓ ಭರವಸೆ ನೀಡಿದರು.

ವಿಬಿ ಜಿ ರಾಮ್ ಜಿ ಯೋಜನೆ ವಿರೋಧಿಸಿ ನಾಳೆ ಪ್ರತಿಭಟನೆ

ಮಡಿಕೇರಿ, ಫೆ.10–ಕೇಂದ್ರ ಸರ್ಕಾರ ಜಾರಿಗೊಳಿಸಿರುವ 4 ಕಾರ್ಮಿಕ ಕೋಡ್‌ಗಳನ್ನು ಹಿಂದಕ್ಕೆ ಪಡೆಯಬೇಕು. ವಿಬಿ ರಾಮ್ ಜಿ ಯೋಜನೆಯನ್ನು ರದ್ದುಗೊಳಿಸಿ, ಹಿಂದಿನ ಮಹಾತ್ಮಾ ಗಾಂಧಿ ನರೇಗಾ ಯೋಜನೆಯನ್ನು ಆರಂಭಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳು, ಸ್ವತಂತ್ರ ಒಕ್ಕೂಟಗಳಿಂದ ನಡೆಯಲಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಭಾಗವಾಗಿ ಫೆ.12ರಂದು ಜಿಲ್ಲಾ ಕೇಂದ್ರ ಬೃಹತ್ ಪ್ರತಿಭಟನೆ ನಡೆಯಲಿದೆ ಎಂದು ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಪಿ.ಆರ್. ಭರತ್ ತಿಳಿಸಿದ್ದಾರೆ.

ಕೇಂದ್ರ ಕಾರ್ಮಿಕ ಸಂಘಟನೆಗಳು ನೀಡಿರುವ ಕರೆಯ ಹಿನ್ನೆಲೆಯಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಗರದ ಹಳೆಯ ಖಾಸಗಿ ಬಸ್ ನಿಲ್ದಾಣದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ಆಯೋಜಿಸಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಬಂದ್' ಅಲ್ಲ: ಕಾರ್ಮಿಕ ಸಂಘಟನೆಗಳ ಹೋರಾಟದ ಹಿನ್ನೆಲೆಯಲ್ಲಿ ಫೆ.12ರಂದು ಬಂದ್ ಎನ್ನುವ ತಪ್ಪು ಮಾಹಿತಿಯನ್ನು ಸಾರ್ವಜನಿಕವಾಗಿ ನೀಡಲಾಗುತ್ತಿದೆ. ಆದರೆ, ಅಂದು ಕಾರ್ಮಿಕರು ದಿನದ ಕೆಲಸದಿಂದ ಹೊರಗುಳಿದು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಅಂದು ಬಂದ್ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಬದಲಾದ ಕಾರ್ಮಿಕ ಕಾನೂನುಗಳಿಂದ ಕಾರ್ಮಿಕರ ದುಡಿಯುವ ಅವಧಿಯನ್ನು 8 ಗಂಟೆಗಳಿಂದ 12ಗಂಟೆಗಳಿಗೆ ಹೆಚ್ಚಿಸಲಾಗಿದೆ. ಇದರಲ್ಲಿ ಕನಿಷ್ಠ ವೇತನಕ್ಕೆ ಯಾವುದೇ ಮಿತಿಯನ್ನು ಅಳವಡಿಸಿಲ್ಲ. ಇಡೀ ಜಗತ್ತಿನಲ್ಲೆ ಕಾರ್ಮಿಕರಿಗೆ ದುಡಿಯುವ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿದ್ದರೆ, ಇಲ್ಲಿ ಅದನ್ನು ತೆಗೆಯುವ ಕೆಲಸವಾಗಿದೆ ಎಂದು ತೀವ್ರ ಅಸಮಾ ಧಾನ ವ್ಯಕ್ತ ಪಡಿಸಿದರು. ಹೋರಾಟದ ಮೂಲಕ ವಿದ್ಯುಚ್ಛಕ್ತಿ ತಿದ್ದುಪಡಿ, ಬೀಜ ಮಸೂದೆ, ಭೂ ಸ್ವಾಧೀನ ಕಾಯ್ದೆಯನ್ನು ಹಿಂಪಡೆಯಬೇಕೆಂದು ಆಗ್ರಹಿಸಲಾಗುತ್ತದೆ ಎಂದರು.

ರೈತ ಸಂಘದ ಮುಖಂಡ ನೆರವಂಡ ಉಮೇಶ್, ಎಐಟಿಯುಸಿ ಜಿಲ್ಲಾಧ್ಯಕ್ಷ ಹೆಚ್.ಎಂ.ಸೋಮಪ್ಪ, ಸಿಐಟಿಯು ಜಿಲ್ಲಾಧ್ಯಕ್ಷ ಎ.ಸಿ.ಸಾಬು ಮಾತನಾಡಿ, ದಿನದ ದುಡಿಯುವ ಅವಧಿಯನ್ನು 12 ಗಂಟೆಗಳಂತೆ ವಾರದ ದುಡಿಯುವ ಅವಧಿಯನ್ನು 72 ಗಂಟೆಗಳಿಗೆ ಹೆಚ್ಚಿಸಿರುವ ಕ್ರಮ ಬಂಡವಾಳಶಾಹಿಗಳ ಪರವಾದದ್ದು. ಇಂತಹ ಕಾರ್ಮಿಕ ಕಾಯ್ದೆ ಗಳನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್‌ನ ಕಾರ್ಮಿಕ ವಿಭಾಗದ ಗೌರವ ಕಾರ್ಯದರ್ಶಿ ಮಿನಾಜ್ ಪ್ರವೀಣ್ ಉಪಸ್ಥಿತರಿದ್ದರು.

ರಸ್ತೆ ದುಸ್ಥಿತಿ: ಬಾಳೆ ಗಿಡ ನೆಟ್ಟು ವಿನೂತನ ಪ್ರತಿಭಟನೆ

ನಾಪೋಕ್ಲು, ಫೆ.10(ದುಗ್ಗಳ)– ನಾಪೋಕ್ಲು –ಭಾಗಮಂಡಲ ರಸ್ತೆ ದುಸ್ಥಿತಿಯ ಕುರಿತು ಸರ್ಕಾರದ ಗಮನ ಸೆಳೆಯುವ ಉದ್ದೇಶ ದಿಂದ ಆಟೋ ಚಾಲಕರು, ಸಾರ್ವಜನಿಕರು ಎಮ್ಮೆಮಾಡು– ಚೋನಕೆರೆ ರಸ್ತೆಯಲ್ಲಿ ಒಂದುವರೆ ಕಿಲೋ ಮೀಟರ್ ದೂರ ಬಾಳೆ ಗಿಡಗಳನ್ನು ನೆಡುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು.

ಹಳೆ ತಾಲೂಕಿನಿಂದ ಎಮ್ಮೆಮಾಡು ಜಂಕ್ಷನ್ ವರೆಗೆ ರಸ್ತೆ ಸಂಪೂರ್ಣ ಹದಗೆಟ್ಟಿದೆ ಈ ರಸ್ತೆಯಲ್ಲಿ ಸಂಚರಿಸಲು ಸಾಧ್ಯವೇ ಆಗುತ್ತಿಲ್ಲ. ಆಟೋ ಚಾಲಕರು ವಾಹನ ಸವಾರರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಕೂಡಲೇ ರಸ್ತೆ ದುರಸ್ತಿ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಅವ್ಯವಸ್ಥೆ ಕುರಿತು ಅನೇಕ ಬಾರಿ ಆಡಳಿತ ವ್ಯವಸ್ಥೆಯ ಗಮನ ಸೆಳೆದಿದ್ದರೂ ಟೆಂಡರ್ ಆಗಿದೆ, ಅನುದಾನದ ಕೊರತೆ ಇದೆ ಎನ್ನುವ ಉತ್ತರ ಬರುತ್ತಿದೆಯೇ ಹೊರತು ಅಭಿವೃದ್ಧಿ ಕಾರ್ಯ ಮಾತ್ರ ಇನ್ನೂ ಕೂಡ ಆರಂಭಗೊಂಡಿಲ್ಲ. ಹದಗೆಟ್ಟ ರಸ್ತೆಯಿಂದ ಶಾಲಾ ಮಕ್ಕಳು, ಹಿರಿಯ ನಾಗರೀಕರು ಹಾಗೂ ಅನಾರೋಗ್ಯ ಪೀಡಿತರು ನಿತ್ಯ ಕಷ್ಟ ಅನುಭವಿಸುತ್ತಿದ್ದಾರೆ. ಶಾಸಕರು ಇತ್ತ ಗಮನಹರಿಸಿ ಕೂಡಲೇ ರಸ್ತೆ ದುರಸ್ತಿ ಕಾರ್ಯ ಕೈಗೊಳ್ಳಬೇಕು. ತಪ್ಪಿದಲ್ಲಿ ರಸ್ತೆಗೆ ಅಡ್ಡಲಾಗಿ ಮರಗಳು ಕಡಿದು ಹಾಕಿ ಸಂಪೂರ್ಣ ರಸ್ತೆ ಬಂದ್ ಮಾಡಿ ಪ್ರತಿಭಟಿಸಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಕಿರಣ್ ಕೋಟೆರಿ, ಗೌತಮ ಚೋನಕೆರೆ, ಇಬ್ರಾಹಿಂ ಕೊಟ್ಟ ಮುಡಿ ಹಾಗೂ ಸ್ಥಳೀಯರು ಪಾಲ್ಗೊಂಡಿದ್ದರು.

ಇಂಟರ್ನೆಟ್ ಸುರಕ್ಷತೆ, ಬಳಕೆ ಕುರಿತು ಅರಿವು ಮೂಡಿಸಿಕೊಳ್ಳಿ



ಚಾಮರಾಜನಗರ, ಫೆ.10–ಪ್ರಸ್ತುತ ದಿನಗಳಲ್ಲಿ ಇಂಟರ್ನೆಟ್ ಸುರಕ್ಷತೆ, ಬಳಕೆ, ಇದರಿಂದಾಗುವ ಅನುಕೂಲಗಳು, ಲೋಪದೋಷಗಳ ಬಗ್ಗೆ ಅಧಿಕಾರಿಗಳು ಸಿಬ್ಬಂದಿ ಹೆಚ್ಚು ತಿಳಿಯಬೇಕಾದ ಅಗತ್ಯವಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅಭಿಪ್ರಾಯಪಟ್ಟಿದ್ದಾರೆ.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆಡಿಪಿ ಸಭಾಂಗಣದಲ್ಲಿಂದು ಸುರಕ್ಷಿತ ಅಂತರ್ಜಾಲ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಜಾಗೃತಿ ಕಾರ್ಯಾಗಾರಕ್ಕೆ ಚಾಲನೆ ನೀಡಿದ ಅವರು, ತಂತ್ರಜ್ಞಾನದ ಅವಲಂಬನೆ ದಿನೇ ದಿನೇ ಹೆಚ್ಚಾಗುತ್ತಿದೆ. ಇಂಟರ್ನೆಟ್, ಆಧುನಿಕ ತಂತ್ರಜ್ಞಾನ, ಸಾಮಾಜಿಕ ಮಾಧ್ಯಮಗಳು, ಕೃತಕ ಬುದ್ಧಿಮತ್ತೆ ಬಳಸುತ್ತಿರುವ ಇಂದಿನ ದಿನಗಳಲ್ಲಿ ಇದರಿಂದ ಆಗಬಹುದಾದ ಉಪಯೋಗಗಳ ಬಗ್ಗೆ ಅರಿಯಬೇಕಿದೆ. ಜೊತೆಗೆ ಸೈಬರ್ ಅಪರಾಧ, ಮೋಸ ಜಾಲದ ಬಗ್ಗೆಯೂ ಎಚ್ಚರಿಕೆ ವಹಿಸ ಬೇಕಿದೆ ಎಂದರು.

ಸೈಬರ್ ಅಪರಾಧ ಪೊಲೀಸ್ ವಿಭಾಗದ ಡಿವೈಎಸ್‌ಪಿ ಎಂ.ಎಸ್.ಪವನ್ ಕುಮಾರ್ ಅವರು ಇಂಟರ್ನೆಟ್ ಪ್ರಯೋಜನ, ಅಪರಾಧಗಳು, ಸೈಬರ್ ಸುರಕ್ಷತೆ ಬಗ್ಗೆ ವಿವರಿಸಿ ಶಿಕ್ಷಣ, ಮಾಹಿತಿ, ಸಂಪರ್ಕ ಮತ್ತು ಸಂವಹನ, ಆನ್‌ಲೈನ್ ಸೇವೆಗಳಿಗೆ ಇಂಟರ್ನೆಟ್‌ನಿಂದ ಪ್ರಯೋಜನವಾಗುತ್ತಿದೆ. ಅಲ್ಲದೇ ಇಂಟರ್ನೆಟ್ ಅಪರಾಧಗಳ ಬಗ್ಗೆಯೂ ಎಚ್ಚರಿಕೆ ವಹಿಸಬೇಕಿದೆ. ಎಷ್ಟು ಸಾಧ್ಯವೋ ಅಷ್ಟು ಸುರಕ್ಷಿತ ವಿಧಾನಗಳನ್ನು ಅನುಸರಿಸಬೇಕು. ಯಾವುದೇ ಸುರಕ್ಷಿತವಲ್ಲದ ಆಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಾರದು ಎಂದರು.

18 ವರ್ಷದ ಒಳಗಿನ ಮಕ್ಕಳಿಗೆ ಮೊಬೈಲ್ ನೀಡಬಾರದು. ಭವಿಷ್ಯದ ದೃಷ್ಟಿಯಿಂದ ಮಕ್ಕಳಿಗೆ ಮೊಬೈಲ್ ಗೀಳು ಅಂಟಿಕೊಳ್ಳದಂತೆ ಪೋಷಕರು ಎಚ್ಚರಿಕೆ ವಹಿಸಬೇಕು. ಇಲ್ಲವಾದಲ್ಲಿ ಹೆಚ್ಚು ತೊಂದರೆಗೆ ಒಳಗಾಗಬೇಕಾಗುತ್ತದೆ. ವಯಸ್ಕರು ಸಹ ಇಂಟರ್ನೆಟ್, ಸಾಮಾಜಿಕ ಜಾಲತಾಣಗಳನ್ನು ಬಳಸುವಾಗ ತುಂಬಾ ಜಾಗೃತರಾಗಬೇಕು. ವೈಯಕ್ತಿಕ ಮಾಹಿತಿ ಸುರಕ್ಷತೆಗೆ ಅಗತ್ಯವಾದ ಕ್ರಮಗಳನ್ನು ಪಾಲಿಸಬೇಕು. ಜವಾಬ್ದಾರಿಯುತವಾಗಿ ಪೋಸ್ಟ್‌ಗಳನ್ನು ಮಾಡಬೇಕು ಎಂದು ಎಂ.ಎಸ್. ಪವನ್ ಕುಮಾರ್ ಅವರು ತಿಳಿಸಿದರು.

ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಸಂದೀಪ್ ಮಾತನಾಡಿದರು. ಎನ್.ಐ.ಸಿ ಯ ಹಿರಿಯ ತಾಂತ್ರಿಕ ನಿರ್ದೇಶಕರಾದ ಕುಮಾರ್, ಜಿಲ್ಲಾ ಮಾಹಿತಿ ಸೂಚನಾ ಅಧಿಕಾರಿ ಅರವಿಂದ ಚಂದ್ರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಹದೇಶ್ವರ ಬೆಟ್ಟಕ್ಕೆ ವಾಹನ ನಿಷೇಧ

ಚಾಮರಾಜನಗರ, ಫೆ.10–ಮಹಾ ಶಿವರಾತ್ರಿ ಜಾತ್ರೆ ಹಿನ್ನೆಲೆಯಲ್ಲಿ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ಜಾತ್ರೆಗಾಗಿ ಫೆ.13 ರಿಂದ 18 ರವರೆಗೆ ದ್ವಿಚಕ್ರ ವಾಹನ, ತ್ರಿಚಕ್ರ ವಾಹನಗಳಲ್ಲಿ (ಆಟೋರಿಕ್ಷಾ ಮತ್ತು ಗೂಡ್ಸ್ ವಾಹನಗಳು ಸೇರಿದಂತೆ) ತೆರಳುವುದನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿ ಜಿಲ್ಲಾಧಿ ಕಾರಿ ಶ್ರೀರೂಪ ಆದೇಶ ಹೊರಡಿಸಿದ್ದಾರೆ.

ಮಹಾಶಿವರಾತ್ರಿ ಜಾತ್ರೆಗಾಗಿ ಮಹದೇಶ್ವರ ಬೆಟ್ಟಕ್ಕೆ ಜಿಲ್ಲೆ, ಹೊರ ಜಿಲ್ಲೆ, ರಾಜ್ಯಗಳಿಂದ ಲಕ್ಷಾಂತರ ಭಕ್ತರು ಸೇರುವ ಸಂಭವವಿದ್ದು, ವಾಹನ ದಟ್ಟಣೆ ಹೆಚ್ಚಾಗಲಿರುವುದರಿಂದ ಸದರಿ ರಸ್ತೆಯು ಅರಣ್ಯ ಪ್ರದೇಶ ಹಾಗೂ ಕಡಿದಾದ ತಿರುವುಗಳಿಂದ ಕೂಡಿದ್ದು ರಸ್ತೆಯ ಸಂಚಾರದಲ್ಲಿ ವಾಹನಗಳ ದಟ್ಟಣೆ ಉಂಟಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವುದರಿಂದ ದ್ವಿಚಕ್ರ, ತ್ರಿಚಕ್ರ ವಾಹನಗಳಲ್ಲಿ (ಆಟೋ ರಿಕ್ಷಾ, ಗೂಡ್ಸ್ ವಾಹನಗಳು ಸೇರಿದಂತೆ) ಜಾತ್ರೆಗಾಗಿ ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

ದೆಹಲಿ ಚಲೋ: ಜಿಲ್ಲೆಯಿಂದ 55 ಮಂದಿ ಉಪಾಸಕರ ತಂಡ



ದೆಹಲಿಯಲ್ಲಿ ಫೆ.11ರಿಂದ ನಡೆಯಲಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು 55 ಮಂದಿ ಉಪಾಸಕರ ತಂಡ ಮಂಗಳವಾರ ತೆರಳಿದರು.

ಚಾಮರಾಜನಗರ, ಫೆ.10–ವಿಶ್ವಶಾಂತಿ, ಬೌದ್ಧರ ಪವಿತ್ರ ಸ್ಥಳವಾದ ಭೋಧಗಯಾ ಮಹಾಬೋಧಿ ಮಹಾವಿಹಾರ ಬಿ.ಟಿ.ಆಕ್ಟ್ 1949 ರದ್ದುಗೊಳಿಸಿ ಮಹಾವಿಹಾರದ ಆಡಳಿತ ಸಂಪೂರ್ಣ ಬೌದ್ಧರಿಗೆ ನೀಡುವಂತೆ ಒತ್ತಾಯಿಸಿ ಫೆ. 12 ರಿಂದ 14 ರ ತನಕ ನಡೆಯುವ ದೆಹಲಿ ಚಲೋಗೆ ಜಿಲ್ಲೆಯಿಂದ 55 ಮಂದಿ ಉಪಾಸಕರ ತಂಡ ರೈಲಿನಲ್ಲಿ ತೆರಳಿತು.

ಇಂದು ಬೆಳಿಗ್ಗೆ ನಗರದ ರೈಲ್ವೆ ನಿಲ್ದಾಣದಿಂದ ದಲಿತ ಮುಖಂಡ ಸಿ.ಎಂ.ಕೃಷ್ಣಮೂರ್ತಿ ನೇತೃತ್ವದಲ್ಲಿ ಹೊರಟ ತಂಡಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾ ಕಾರ್ಯಾಧ್ಯಕ್ಷ ಸಿ.ಕೆ.ಮಂಜುನಾಥ್ ಇತರರು ಬೀಳ್ಕೊಟ್ಟು ಶುಭ ಕೋರಿದರು. ನಮ್ಮದು ಬೌದ್ಧರ ಪವಿತ್ರ ಸ್ಥಳವಾದ ಭೋಧಗಯಾ ಮಹಾಬೋಧಿ ಮಹಾವಿಹಾರ ಎಂದು ಘೋಷಣೆ ಕೂಗಿದರು.

ಉಪಾಸಕರಾದ ಸಿ.ಎಂ.ಕೃಷ್ಣಮೂರ್ತಿ ಮಾತನಾಡಿ, ವಿಶ್ವಶಾಂತಿ, ಬೌದ್ಧರ ಪವಿತ್ರ ಸ್ಥಳವಾದ ಭೋಧಗಯಾ ಮಹಾಬೋಧಿ ಮಹಾವಿಹಾರ ಬಿ.ಟಿ.ಆಕ್ಟ್ 1949 ರದ್ದುಗೊಳಿಸಿ ಮಹಾವಿಹಾರದ ಆಡಳಿತ ಸಂಪೂರ್ಣ ಬೌದ್ಧರಿಗೆ ನೀಡುವಂತೆ ಒತ್ತಾಯಿಸಿ ಫೆ.12 ರಿಂದ ಮೂರು ದಿನಗಳ ಕಾಲ ದೆಹಲಿಯಲ್ಲಿ ರಾಷ್ಟ್ರೀಯ ಸಮಾ ವೇಶ, ಬೃಹತ್ ರ್‍ಯಾಲಿ ನಡೆಯುತ್ತದೆ. ಹಾಗಾಗಿ ಜಿಲ್ಲೆಯಿಂದಲ್ಲೂ 55 ಮಂದಿ ಉಪಾಸಕರು ಭಾಗವಹಿಸುತ್ತಿದ್ದಾರೆ. ಸರ್ಕಾರ ಬೌದ್ಧರ ಪವಿತ್ರ ಸ್ಥಳವಾದ ಭೋಧಗಯಾ ಮಹಾಬೋಧಿ ಮಹಾವಿಹಾರ ಬಿ.ಟಿ.ಆಕ್ಟ್ 1949 ರದ್ದುಗೊಳಿಸಿ ಮಹಾವಿಹಾರದ ಆಡಳಿತ ಸಂಪೂರ್ಣ ಬೌದ್ಧರಿಗೆ ನೀಡಬೇಕು ಎಂದು ಒತ್ತಾಯಿಸಿದರು.

ಬೀದಿಬದಿ ವ್ಯಾಪಾರಿಗಳಿಗೆ ಸ್ವಚ್ಛತಾ ತಿಳುವಳಿಕೆ ನೋಟೀಸ್




ನಗರಸಭಾ ಪೌರಾಯುಕ್ತ ಸಿಬ್ಬಂದಿಯೊಂದಿಗೆ ದಿಢೀರ್ ಕಾರ್ಯಾಚರಣೆ ನಡೆಸಿ ಅಂಗಡಿ ಮಾಲೀಕರಿಗೆ ಸ್ವಚ್ಛತಾ ತಿಳುವಳಿಕೆ ನೋಟೀಸ್ ನೀಡಿತು.

ಚಾಮರಾಜನಗರ, ಫೆ.10–ನಗರಸಭಾ ಪೌರಾಯುಕ್ತ ಪರಶುರಾಮ ಛಲವಾದಿ ಅಧಿಕಾರಿ, ಸಿಬ್ಬಂದಿಗಳೊಂದಿಗೆ ಮಂಗಳವಾರ ಸಂಜೆ ದಿಢೀರ್ ಕಾರ್ಯಾಚರಣೆ ನಡೆಸಿ ಬೀದಿಬದಿ ವ್ಯಾಪಾರಿಗಳು, ಜ್ಯೂಸ್ ಕಾರ್ನರ್ ಚಾಟ್ಸ್ ಮಳಿಗೆ ಮಾಲೀಕರಿಗೆ ಸ್ವಚ್ಛತಾ ಬಗ್ಗೆ ಜಾಗೃತಿ ಮೂಡಿಸಿ ಅಂಗಡಿ ಸುತ್ತ ಶುಚಿಯಾಗಿಟ್ಟುಕೊಳ್ಳುವಂತೆ ನೋಟೀಸ್ ನೀಡಿದರು.

ನಗರದ ರಥ ಬೀದಿ, ಚಾಮರಾಜೇಶ್ವರ ಉದ್ಯಾನವನ ಮುಂಭಾಗ, ಅಗ್ರಹಾರ ಬೀದಿ, ಚಿಕ್ಕಂಗಡಿ ಬೀದಿ, ನಗರಸಭಾ ಕಚೇರಿ ಮುಂಭಾಗದಲ್ಲಿ ಬೀದಿ ವ್ಯಾಪಾರಸ್ಥರಿಗೆ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಅರಿವು ಮೂಡಿಸಿ ಮಾಲೀಕರಿಗೆ ತಿಳುವಳಿಕೆ ನೋಟೀಸ್ ನೀಡಿ ಒಣಕಸ, ಹಸಿಕಸ ಪ್ರತ್ಯೇಕವಾಗಿ ನಗರಸಭೆ ವಾಹನಗಳಿಗೆ ನೀಡುವ ಮೂಲಕ ನಗರವನ್ನು ಸುಂದರ ನಗರವನ್ನಾಗಿಸಲು ನಗರದ ಜನತೆ ನಗರಸಭೆಯೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಹಿರಿಯ ಆರೋಗ್ಯ ಅಧಿಕಾರಿ ಮಂಜುನಾಥ್, ನಗರಸಭಾ ಸಮುದಾಯ ಸಂಚಾಲಕರಾದ ಪವಿತ್ರ ಶೈಲಜಾ, ಶೀಲಾ, ಸುನೀತಾ, ರಾಜೇಶ್ವರಿ, ಕಾವ್ಯ, ಪ್ರಕೃತಿ, ಸುಮ, ಮಹದೇವಮ್ಮ, ಸಿಬ್ಬಂದಿ ಸಿ.ಡಿ.ವೆಂಕಟೇಶ್, ತಂಗವೇಲು, ಮಣಿಕಂಠ ಹಾಜರಿದ್ದರು.

ಫೆ.13, ಪ್ರೊ.ಎಂ.ಡಿ.ನಂಜುಂಡಸ್ವಾಮಿ ಸಂಸ್ಮರಣಾ ದಿನಾಚರಣೆ



ಚಾಮರಾಜನಗರ, ಫೆ.10– ರಾಜ್ಯ ರೈತ ಸಂಘದ ಜಿಲ್ಲಾ ಶಾಖೆ ವತಿಯಿಂದ ಫೆ.13 ರಂದು ರೈತನಾಯಕ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಸಂಸ್ಮರಣಾ ದಿನಾಚರಣೆ ಹಾಗೂ ರೈತ ಸಮಾವೇಶವನ್ನು ಚಾಮರಾಜನಗರ, ಗುಂಡ್ಲುಪೇಟೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘದ ಕಾರ್ಯಾಧ್ಯಕ್ಷ ಎ.ಎಂ. ಮಹೇಶ್ ಪ್ರಭು ತಿಳಿಸಿದರು.

ಅಂದು ತಾಲೂಕಿನ ಹೊಂಡರಬಾಳು ಅಮೃತ ಭೂಮಿಯಲ್ಲಿರುವ ಪ್ರೊ. ನಂಜುಂಡಸ್ವಾಮಿ ಸ್ಮಾರಕಕ್ಕೆ ಬೆಳಿಗ್ಗೆ 8ಕ್ಕೆ ಮಾಲಾರ್ಪಣೆ ಮಾಡಲಾಗುವುದು ನಂತರ ತೆಂಗು ಸಂಸ್ಕರಣಾ ಘಟಕದಲ್ಲಿರುವ ಎಂಡಿಎನ್ ಪುತ್ಥಳಿಗೆ ಬೆಳಿಗ್ಗೆ 9.30ಕ್ಕೆ ಮಾಲಾರ್ಪಣೆ ಮಾಡಲಾಗುವುದು ತದನಂತರ ಗುಂಡ್ಲುಪೇಟೆ ಹಳೆ ಬಸ್‌ಸ್ಟ್ಯಾಂಡ್ ಆವರಣದಲ್ಲಿ ಬೆಳಿಗ್ಗೆ 11.30ಕ್ಕೆ ನೆನಪಿನ ದಿನಾಚರಣೆ, ರೈತ ಸಮಾವೇಶ ಕಾರ್ಯಕ್ರಮ ನಡೆಯುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ರೈತ ಸಂಘದ ಗೌರವಾಧ್ಯಕ್ಷ ಚಾಮರಾಸ ಮಾಲೀ ಪಾಟೀಲ್ ಪುಷ್ಪಾರ್ಚನೆ ಮಾಡಲಿದ್ದಾರೆ. ಕಾರ್ಯಾಧ್ಯಕ್ಷ ಎ.ಎಂ. ಮಹೇಶ್ ಪ್ರಭು ಉದ್ಘಾಟಿಸಲಿದ್ದಾರೆ. ವಿಭಾಗೀಯ ಕಾರ್ಯದರ್ಶಿ ಜ್ಯೋತಿ ಗೌಡನಪುರ ಸಿದ್ಧರಾಜು ಪ್ರಾಸಾವಿಕ ಭಾಷಣ ಮಾಡಲಿದ್ದಾರೆ. ರಾಜ್ಯಾಧ್ಯಕ್ಷರಾದ ಬಡಗಲಪುರ ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಘದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು.

ಭಾರತರತ್ನ ಪ್ರಶಸ್ತಿ ನೀಡಲು ಆಗ್ರಹ: ರೈತ ಚೇತನ ಪ್ರೊ. ನಂಜುಂಡಸ್ವಾಮಿ ನಮ್ಮನ್ನು ಅಗಲಿ 22 ವರ್ಷಗಳಾಗಿದ್ದರು ಕೂಡ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಅವರಿಗೆ ಕೇಂದ್ರ ಸರ್ಕಾರ ಭಾರತರತ್ನ ಪ್ರಶಸ್ತಿ ನೀಡಿಲ್ಲ. ರಾಜ್ಯ ಸರ್ಕಾರ ಈ ಬಜೆಟ್‌ನಲ್ಲಿ ಅವರ ಜೀವನ ಚರಿತ್ರೆಯನ್ನು ಪಠ್ಯಪುಸ್ತಕಕ್ಕೆ ಸೇರಿಸಬೇಕು. ಭಾರತರತ್ನ ಪ್ರಶಸ್ತಿ ಘೋಷಿಸಬೇಕು. ಎಂದು ಹೆಗ್ಗವಾಡಿಪುರ ಮಹೇಶ್ ಆಗ್ರಹಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುರ ಮಹ ದೇವಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭಾಸ್ಕರ್ ಯುವ ಘಟಕದ ರಾಜ್ಯ ಸಂಚಾಲಕ ಯಶವಂತ, ತಾಲೂಕು ಪ್ರಧಾನ ಕಾರ್ಯ ದರ್ಶಿ ಮಲ್ಲಯ್ಯನಪುರ ಶಿವಣ್ಣ, ಗುಂಡ್ಲುಪೇಟೆ ತಾಲೂಕು ಉಪಾಧ್ಯಕ್ಷ ನಾಗರಾಜು ಹಾಜರಿದ್ದರು.

ಬೇಗೂರಿನಲ್ಲಿ ಇಂದು ಮಾರಮ್ಮನ ಹಬ್ಬ



ಬೇಗೂರು, ಫೆ.10– ಗ್ರಾಮ ದೇವತೆ ಮಾರಮ್ಮನ ಹಬ್ಬ ನಾನಾ ಸಮುದಾಯದ ಮುಖಂಡರ ಮತ್ತು ಗ್ರಾಮಸ್ಥರ ಒಗ್ಗಟ್ಟಿನಿಂದ ಫೆ.11ರಂದು ವಿಜೃಂಭಣೆಯಿಂದ ನಡೆಯಲಿದ್ದು, ಸಿದ್ಧತೆಗಳು ಪೂರ್ಣಗೊಂಡಿದೆ

ಸಂಜೆ ದೇವಾಲಯದ ಆವರಣದಲ್ಲಿ ವಿವಿಧ ಹೋಮ, ವಿಶೇಷ ಅಭಿಷೇಕ, ಕವಚ ಧಾರಣೆ, ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿವೆ

ಎಡೆ ಪೂಜೆ: ಮಾರಮ್ಮನಿಗೆ ಹರಕೆ ಹೊತ್ತ ಭಕ್ತರು ಉಪವಾಸದೊಂದಿಗೆ ದೇವಾಲಯದ ಆವರಣದಲ್ಲಿ ಬೆಲ್ಲದ ಅನ್ನ ತಯಾರಿಸಿ ಎಡೆ ಪೂಜೆ ಸಲ್ಲಿಸಿದ ನಂತರ ಉಪಹಾರ ಸೇವಿಸುತ್ತಾರೆ ಹಾಗೂ ತಂಪು ಸೇವೆ ಗ್ರಾಮದಲ್ಲಿರುವ ವಿವಿಧ ಸಮುದಾಯ ಭವನದ ಆವರಣದಲ್ಲಿ ಸಮಾವೇಶಗೊಳ್ಳುವ ಗ್ರಾಮಸ್ಥರು ದೇವತೆಗೆ ತಂಬಿಟ್ಟಿನ ಸೇವೆ ಸಲ್ಲಿಸಲು ಪ್ರತಿ ಮನೆಯಲ್ಲಿಯೂ ತಂಬಿಟ್ಟು ಹೂಗಳಿಂದ ಅಲಂಕರಿಸಿ ತಟ್ಟೆಯಲ್ಲಿರಿಸಿ ತಂಬಿಟ್ಟಿನಿಂದಲೇ ತುಪ್ಪದ ದೀಪವನ್ನು ಬೆಳಗಿಸಿ ಸುಮಂಗಲಿಯರು ತಲೆ ಮೇಲೆ ತಂಬಿಟ್ಟಿನ ಆರತಿಯನ್ನು ಹೊತ್ತು ಮಂಗಳವಾದ್ಯ, ತಮಟೆ, ಛತ್ರಿ, ಚಾಮರ, ಸತ್ತಿಗೆ ಸುರಪಾನಿ ಬಿರುದುಗಳ ಸಮೇತ ಒಗ್ಗಟ್ಟಿನಿಂದ ಮಾರಮ್ಮನ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸುವುದು ವಿಶೇಷ ಹಾಗೂ ಮರದ ಪೆಟ್ಟಿಗೆಯಲ್ಲಿ ಪಟ್ಟಲದಮ್ಮ ದೇವಿಯ ಉತ್ಸವ ಮೂರ್ತಿಯನ್ನು ಇಟ್ಟು ಅಲಂಕರಿಸಿ ತಲೆ ಮೇಲೆ ಹೊತ್ತು ಮಾರಮ್ಮನ ದೇವಾಲಯದ ಆವರಣಕ್ಕೆ ತೆರಳಿ ಪಟ್ಟಲದಮ್ಮ ದೇವಿಯನ್ನು ಇರಿಸಿ ಮಾರಮ್ಮನಿಗೆ ಪೂಜೆ ಸಲ್ಲಿಸಲಾಗುತ್ತದೆ.

ಗ್ರಾಮದಲ್ಲಿ ಯಾವುದೇ ರೋಗ ಬಾರದಿರಲಿ ಮತ್ತು ಜಾನುವಾರುಗಳ ಹೇಳಿಕೆಗೆ ಮಾರಮ್ಮ ಮತ್ತು ಪಟ್ಟಲದಮ್ಮ ದೇವಿಯನ್ನು ಪ್ರಾರ್ಥಿಸಲಾಗುತ್ತದೆ ಮಾರಮ್ಮನ ಹಬ್ಬದ ಅಂಗವಾಗಿ ಗ್ರಾಮದ ಪ್ರತಿ ಬೀದಿಯನ್ನು ಹಾಗೂ ಮನೆಗಳು ತಳಿರು ತೋರಣ ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಿರುವುದು ಸ್ನೇಹಿತರು ಮತ್ತು ನೆಂಟರನ್ನು ಬರಮಾಡಿಕೊಳ್ಳುತ್ತಿರುವುದು ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ವಿಜೃಂಭಣೆಯಿಂದ ನಡೆದ ಕೋಟೆ ಮಾರಮ್ಮ ಹಬ್ಬ

ಗುಂಡ್ಲುಪೇಟೆ, ಫೆ.10(ಸೋಮ್.ಜಿ) ಪಟ್ಟಣದಲ್ಲಿರುವ ಶ್ರೀ ಕೋಟೆ ಮಾರಮ್ಮ ದೇವಾಲಯದಲ್ಲಿ ಗ್ರಾಮ ದೇವತೆ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ದೇವಾಲಯಕ್ಕೆ ತೆರಳುವ ಎರಡು ಬದಿಗಳಲ್ಲಿ ವಿದ್ಯುತ್ ದೀಪಾಲಂಕರ ಹಾಗೂ ತಳಿರು ತೋರಣಗಳಿಂದ ಮತ್ತು ವಿವಿಧ ಬಣ್ಣಗಳ ಪುಷ್ಪಗಳಿಂದ ಅಲಂಕಾರ ಮಾಡಿ ಊರಿನಲ್ಲಿ ಹಬ್ಬದ ವಾತಾವರಣ ಮೂಡಿಸಿತ್ತು.

ಪುರಾತನ ಕಾಲದ ಸಂಸ್ಕೃತಿಯಂತೆಯೇ ಕೋಟೆ ಮಾರಮ್ಮ ದೇವಿಗೆ ಬೆಳ್ಳಿ ಮುಖವಾಡ ಧರಿಸಿ ಎಳನೀರು ಮತ್ತು ತಂಬಿಟ್ಟಿನಿಂದ ತಂಪಿನ ಪೂಜೆ ಯನ್ನು ನೆರವೇರಿಸಲಾಯಿತು. ಮುಂಜಾನೆಯಿಂದಲೇ ವಿವಿಧ ಬಡಾವಣೆಯ ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆದು ಪುನೀತರಾದರು.

ಜಿಲ್ಲಾಧಿಕಾರಿಯಿಂದ 1.50 ಕೋಟಿ ಉಳಿತಾಯ ಬಜೆಟ್ ಮಂಡನೆ

ಕೊಳ್ಳೇಗಾಲ, ಫೆ.10– ನಗರಸಭೆ ಸಭಾಂಗಣದಲ್ಲಿ ಮಂಗಳವಾರ ಕರೆಯಲಾಗಿದ್ದ ಬಜೆಟ್ ಮಂಡನಾ ಸಭೆಯಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರು 1.50ಕೋಟಿ ಉಳಿತಾಯ ಬಜೆಟನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ಸಮ್ಮುಖದಲ್ಲಿ ಮಂಡಿಸಿದರು

ಜಿಲ್ಲಾಧಿಕಾರಿಗಳು 52.36 ಕೋಟಿ 78,879 ರೂ.ಗಳ ವಿವಿಧ ಆದಾಯ ಮೂಲಗಳ ಬಜೆಟ್ ಮಂಡಿಸಿದರು. 2026–27ನೇ ಸಾಲಿನ ಆಯ್ಯ–ವ್ಯಯದಲ್ಲಿ ಶ್ರೀ ಮಲೆ ಮಹದೇಶ್ವರ ಸರ್ಕಾರಿ ಕಾಲೇಜು ಆವರಣದಲ್ಲಿ ವಿವಿಧೋದ್ದೇಶ ಒಳ ಕ್ರೀಡಾಂಗಣಕ್ಕೆ ಮತ್ತು ಒಳ ಕ್ರೀಡಾಂಗಣಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಉದ್ಯಾನವನ ಅಭಿವೃದ್ಧಿಗೆ ಎಸ್.ಎಫ್.ಸಿ ವಿಶೇಷ ಅನುದಾನದಿಂದ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ರೂಪಾಯಿಯನ್ನು ಪಟ್ಟಣದ ಉದ್ಯಾನವನಗಳ ಅಭಿವೃದ್ಧಿಗೊಳಿಸುವುದು ಅಲಂಕಾರಿಕ ದೀಪ ಅಳವಡಿಕೆ, ಜಿಮ್ ಮತ್ತು ವ್ಯಾಯಾಮ ಪರಿಕರಗಳನ್ನು ಅಡಳವಡಿಸಲು 20 ಲಕ್ಷ, ಘನತ್ಯಾಜ್ಯ ವಿಲೇವಾರಿ ಜಮೀನು ಅಭಿವೃದ್ಧಿ 451 ಲಕ್ಷ, ಶೇ.24.10 ಯೋಜನೆಯಲ್ಲಿ ಎಸ್ಸಿ–ಎಸ್ಟಿ ಕಲ್ಯಾಣ ಕಾರ್ಯಕ್ರಮ, ಎಸ್ಸಿ–ಎಸ್ಟಿ ವಾರ್ಡ್‌ಗಳಿಗೆ ಮೂಲ ಸೌಕರ್ಯ ನೀಡಲು 60 ಲಕ್ಷ ರೂ ನಿಗದಿಗೊಳಿಸಲಾಗಿದೆ ಎಂದರು.

ಅವಧಿಗೆ ಮುನ್ನವೇ ಬೇಸಿಗೆ ಧಗೆ

ಮಾರುಕಟ್ಟೆ ಪ್ರವೇಶಿಸಿವೆ ನಾನಾ ಫಲಗಳು

ಮೈಸೂರು, ಫೆ.10(ವಿವಿಹೆಚ್)– ರಾಜ್ಯದಲ್ಲಿ ಜನವರಿ ಮಾಸಾಂತ್ಯಕ್ಕೆ ಮುನ್ನವೇ ಬೇಸಿಗೆ ಆರಂಭವಾಗಿದೆ. ರಾತ್ರಿ ವೇಳೆ ವಿಪರೀತ ಚಳಿ ಕಾಡಿದರೆ, ಬೆಳಗ್ಗೆಯಾದ ಕೂಡಲೇ ಬಿಸಿಲಿನ ಝಳ ಹೆಚ್ಚಾಗುತ್ತಿದ್ದು, ಜನರು ತಂಪು ಪಾನೀಯಗಳು ಹಾಗೂ ಹಣ್ಣುಗಳತ್ತ ಮುಖ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಚಳಿಗಾಲ ಕಳೆಯುವ ಮುನ್ನವೇ ಕಲ್ಲಂಗಡಿ ಹಣ್ಣುಗಳು ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳುತ್ತಿವೆ.

ದಿನದಿಂದ ದಿನಕ್ಕೆ ಬಿಸಿಲಿನ ತಾಪ ಹೆಚ್ಚುತ್ತಿದ್ದು, ಚಳಿಗಾಲದಲ್ಲೇ ಜನರಿಗೆ ಬೇಸಿಗೆಯ ಅನುಭವವಾಗುತ್ತಿದೆ. ಬಿಸಿಲಿನ ಝಳ ಹೆಚ್ಚಿದಂತೆ ದಾಹ ತೀರಿಸಿಕೊಳ್ಳಲು ಜನರು ತಂಪು ಪಾನೀಯಗಳು ಹಾಗೂ ಹಣ್ಣುಗಳ ಸೇವನೆಗೆ ಮುಂದಾಗುತ್ತಿದ್ದಾರೆ. ಇದರ ಪರಿಣಾಮವಾಗಿ ನಗರದಾದ್ಯಂತ ಹಣ್ಣುಗಳ ಮಾರಾಟದ ಅಂಗಡಿಗಳು ತಾತ್ಕಾಲಿಕವಾಗಿ ತಲೆ ಎತ್ತಿವೆ. ಇವುಗಳಲ್ಲಿ ಪ್ರಮುಖವಾಗಿ ಕಲ್ಲಂಗಡಿ ಹಣ್ಣು ಬಹು ಬೇಡಿಕೆಯ ಅಂಶವಾಗಿದ್ದು, ಕಲ್ಲಂಗಡಿ ಕೊಳ್ಳಲು ಜನ ಮುಗಿಬೀಳುತ್ತಿದ್ದಾರೆ.

ಬೇಸಿಗೆ ಆರಂಭಕ್ಕೂ ಮುನ್ನವೇ ಜನಸಾಮಾನ್ಯರ ದಾಹ ನೀಗಿಸುವ ಕಲ್ಲಂಗಡಿ ಹಣ್ಣು ಮೈಸೂರು ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಡಿಮ್ಯಾಂಡ್ ಹೆಚ್ಚಾದಂತೆ ವ್ಯಾಪಾರಿಗಳು ಪಕ್ಕದ ರಾಜ್ಯಗಳಿಂದ ಕಲ್ಲಂಗಡಿ ತರಿಸುತ್ತಿದ್ದಾರೆ. ಕಲ್ಲಂಗಡಿ ಹಣ್ಣು ದಾಹ ತೀರಿಸುವುದಲ್ಲದೆ, ದೇಹಕ್ಕೆ ಪೋಷಕಾಂಶಗಳನ್ನು ಒದಗಿಸುತ್ತದೆ. ಬಿಸಿಲಿಗೆ, ನಿರ್ಜಲೀಕರಣಕ್ಕೆ ಬಹಳ ಉತ್ತಮವಾದ ಹಣ್ಣು ಇದಾಗಿದ್ದು, ನಗರದಲ್ಲಿ ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ.

ಬೆಲೆ ಎಷ್ಟಿದೆ?: ಜಿಲ್ಲೆಯಲ್ಲಿ ಕೆಲ ರೈತರು ಮಾತ್ರ ಅಲ್ಪ ಪ್ರಮಾಣದಲ್ಲಿ ಕಲ್ಲಂಗಡಿ ಬೆಳೆಯುತ್ತಿದ್ದು, ಜನಸಾಮಾನ್ಯರ ಬೇಡಿಕೆಯನ್ನು ಪೂರೈಸಲು ವ್ಯಾಪಾರಿಗಳು ಪಕ್ಕದ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶಗಳಿಂದ ಕಲ್ಲಂಗಡಿಯನ್ನು ಲೋಡ್‌ಗಟ್ಟಲೇ ಖರೀದಿಸಿ ತರುತ್ತಿದ್ದಾರೆ.

ನಗರ ಮಾರುಕಟ್ಟೆಗೆ ಬರುವ ಕಲ್ಲಂಗಡಿಗಳಿಗೆ ಪ್ರತಿ ಕೆ.ಜಿ.ಗೆ ಹೋಲ್‌ಸೇಲ್‌ನಲ್ಲಿ 22 ರಿಂದ 25 ರೂ.ಗಳಿದ್ದರೆ, ರಿಟೇಲ್‌ನಲ್ಲಿ 25 ರಿಂದ 30 ರೂ.ವರೆಗೆ ಮಾರಾಟವಾಗುತ್ತಿದೆ. ಇನ್ನು ರಸ್ತೆ ಬದಿಯಲ್ಲಿ ಮಾರಾಟ ಮಾಡುವವರು ಕೆ.ಜಿ.ಗೆ 33 ರಿಂದ 35 ರೂ.ವರೆಗೆ ಹಾಗೂ ಪೀಸ್ ಲೆಕ್ಕದಲ್ಲಿ (ಒಂದು ಪೀಸ್‌ಗೆ 20 ರೂ.) ಮಾರಾಟ ಮಾಡುತ್ತಿದ್ದಾರೆ.

ದಾಹ ನಿವಾರಣೆಗೆ ಸಹಕಾರಿ: ಬಿಸಿಲಿನ ತಾಪದಿಂದ ದೇಹದಲ್ಲಿನ ನೀರಿನ ಅಂಶ ಬೆವರಿನ ರೂಪದಲ್ಲಿ ಕಡಿಮೆಯಾಗುವುದರಿಂದ ನಿರ್ಜಲೀಕರಣ ಮತ್ತು ಸುಸ್ತು ಕಾಣಿಸಿಕೊಳ್ಳುತ್ತದೆ. ಇಂತಹ ಸಂದರ್ಭಗಳಲ್ಲಿ ನೀರಿನ ಅಂಶದ ಜತೆಗೆ ಉತ್ತಮ ಪೋಷಕಾಂಶಗಳನ್ನು ಹೊಂದಿರುವ ಕಲ್ಲಂಗಡಿ ಹಣ್ಣಿನ ಸೇವನೆ ಅತ್ಯಂತ ಉಪಯುಕ್ತವಾಗಿದೆ. ಇದರಿಂದಾಗಿಯೇ ಸಹಜವಾಗಿ ಕಲ್ಲಂಗಡಿಗೆ ಬೇಸಿಗೆ ಸಮಯದಲ್ಲಿ ಡಿಮ್ಯಾಂಡ್ ಹೆಚ್ಚಿರುತ್ತದೆ ಎಂದು ಮಾರಾಟಗಾರರು ಅಭಿಪ್ರಾಯಪಟ್ಟಿದ್ದಾರೆ.

ಮಾರಾಟಗಾರರು ಏನನ್ನುತ್ತಾರೆ: ಎರ್ನಾಕುಲಂ, ತಮಿಳುನಾಡು ಭಾಗಗಳಿಂದ ಹಣ್ಣುಗಳನ್ನು ಖರೀದಿಸಲಾಗುತ್ತಿದೆ. ನಗರದಲ್ಲಿ ಹಣ್ಣುಗಳಿಗೆ ಭಾರೀ ಡಿಮ್ಯಾಂಡ್ ಇರಲಿದ್ದು, ಸದ್ಯಕ್ಕೆ ಕೆಜಿಗೆ 20 ರಿಂದ 25 ರೂ.ನಂತೆ ಮಾರಾಟ ಮಾಡುತ್ತಿದ್ದೇವೆ. ಒಂದು ಹಣ್ಣು 3 ರಿಂದ 12 ಕೆ.ಜಿ ವರೆಗೂ ತೂಕವಿರಲಿದ್ದು, ಗ್ರಾಹಕರು ತಮಗೆ ಇಷ್ಟದ ಕಲ್ಲಂಗಡಿಯನ್ನು ಕೊಂಡು ಹೋಗುತ್ತಾರೆ ಎನ್ನುತ್ತಾರೆ ಎಪಿಎಂಸಿ ಮಾರುಕಟ್ಟೆ ವ್ಯಾಪಾರಿ ಅಭಿಷೇಕ್.

ವ್ಯಾಪಾರಿ ಸಂತೋಷ್ ಕುಮಾರ್ ಮಾತನಾಡಿ, ಕುಕ್ಕರಹಳ್ಳಿ ಕೆರೆಯಿಂದ ಮಾನಸ ಗಂಗೋತ್ರಿಗೆ ಸಂಪರ್ಕ ಕಲ್ಪಿಸುವ ರಾಮಾವಿಲಾಸ ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದೇನೆ. ಇಲ್ಲಿ ಹಣ್ಣುಗಳನ್ನು ಖರೀದಿಸುವುದಕ್ಕಿಂತ ಪೀಸ್‌ಗಳನ್ನು ಕೇಳುವವರೆ ಜಾಸ್ತಿ. ಪ್ರತಿ ಪೀಸ್‌ಗೆ 20 ರೂ. ದರ ನಿಗದಿ ಮಾಡಿದ್ದೇವೆ. ಜನರಿಂದ ಉತ್ತಮ ಸ್ಪಂದನೆಯಿದೆ ಎನ್ನುತ್ತಾರೆ.



ಎಪಿಎಂಸಿ ಮಾರುಕಟ್ಟೆಯಲ್ಲಿ ಶೇಖರಣೆಯಾಗಿರುವ ಕಲ್ಲಂಗಡಿ ಹಣ್ಣು.

ಕಲ್ಲಂಗಡಿ ಸೇವನೆಯಿಂದ ಆಗುವ ಉಪಯೋಗಗಳು

ಕಲ್ಲಂಗಡಿ ಹಣ್ಣು ಪೊಟ್ಯಾಷಿಯಮ್, ಮೆಗ್ನಿಷಿಯಮ್ ಹಾಗೂ ಸಿಟ್ರುಲಿನ್ ಅಂಶಗಳನ್ನು ಒಳಗೊಂಡಿದ್ದು, ದಾಹ ನಿವಾರಣೆ ಜೊತೆಗೆ ದೇಹಕ್ಕೆ ಬೇಕಾದ ಪೋಷಕಾಂಶಗಳನ್ನು ಒದಗಿಸುತ್ತದೆ. ರಕ್ತದೊತ್ತಡ ನಿಯಂತ್ರಣ, ವಿಟಮಿನ್ ಎ ಮತ್ತು ಸಿ ಸೇರಿದಂತೆ ಹಲವು ಪೋಷಕಾಂಶಗಳನ್ನು ಹೊಂದಿರುವ ಈ ಹಣ್ಣು ದೇಹದ ಉಷ್ಣತೆಯನ್ನು ನಿಯಂತ್ರಿಸುವುದರ ಜತೆಗೆ ಹೃದಯ ಆರೋಗ್ಯ, ಕಣ್ಣಿನ ರಕ್ಷಣೆ, ಚರ್ಮದ ಆರೋಗ್ಯ ಜೀರ್ಣಕ್ರಿಯೆ ಹಾಗೂ ಮಲಬದ್ಧತೆ ನಿಯಂತ್ರಣಕ್ಕೂ ಉಪಯುಕ್ತವಾಗಿದೆ.



"ಸಾಮಾನ್ಯವಾಗಿ ಫೆಬ್ರವರಿ ಅಂತ್ಯದಲ್ಲಿ ಮಾರುಕಟ್ಟೆಗೆ ಬರುತ್ತಿದ್ದ ಕಲ್ಲಂಗಡಿ ಹಣ್ಣು ಹವಾಮಾನ ವೈಪರಿತ್ಯದಿಂದಾಗಿ ಈ ಬಾರಿ ಜನವರಿಯಲ್ಲೇ ಲಗ್ಗೆ ಇಟ್ಟಿದೆ. ಮುಂದಿನ ದಿನಗಳಲ್ಲಿ ಬಿಸಿಲಿನ ಝಳ ಹೆಚ್ಚಾಗುವ ಸಾಧ್ಯತೆ ಇದ್ದು, ಕಲ್ಲಂಗಡಿ ಹಣ್ಣಿಗೆ ಬೇಡಿಕೆ ಹೆಚ್ಚಲಿದೆ ಎಳನೀರು ರೇಟ್ ಬಾರಿ ದುಬಾರಿಯಾಗುತ್ತಿದ್ದು, ಎಲ್ಲರೂ ಕಲ್ಲಂಗಡಿ ಕಡೆ ಮುಖ ಮಾಡುತ್ತಿದ್ದಾರೆ.

– **ಪ್ರವೀಣ್**, ಮೈಸೂರು

ಮೈಸೂರು–ಕುಶಾಲನಗರ ರೈಲು ಮಾರ್ಗ ಯೋಜನೆ ಪುನಾರಂಭಿಸಿ

- ಕೇಂದ್ರ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರಲ್ಲಿ ಸಂಸದ ಯದುವೀರ್ ಒಡೆಯರ್ ಮನವಿ
- ಬೆಂಗಳೂರು–ಚೆನ್ನೈ ಹೈಸ್ಪೀಡ್ ರೈಲ್ವೆ ಕಾರಿಡಾರ್ ಯೋಜನೆಯಲ್ಲಿ ಮೈಸೂರು ಸೇರ್ಪಡೆಗೂ ಕೋರಿಕೆ



ಕೇಂದ್ರ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರಿಗೆ ಸಂಸದ ಯದುವೀರ್ ಒಡೆಯರ್ ಮನವಿ ಸಲ್ಲಿಸಿದರು.

ಮೈಸೂರು,ಫೆ.10(ಪಿಎಂ)– ಅನಿವಾರ್ಯ ಕಾರಣಗಳಿಂದ ನನೆಗುದಿಗೆ ಬಿದ್ದಿರುವ ಮೈಸೂರು–ಕುಶಾಲನಗರ ರೈಲ್ವೆ ಯೋಜನೆಗೆ ಮರು ಚಾಲನೆ ನೀಡಬೇಕು. ಪ್ರಮುಖವಾಗಿ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲು ಮಧ್ಯಪ್ರವೇಶಿಸಬೇಕೆಂದು ಕೇಂದ್ರ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರಿಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಸಲ್ಲಿಸಿದರು.

ಮೈಸೂರು (ಬೆಳಗೊಳ)–ಕುಶಾಲ ನಗರ (89 ಕಿ.ಮೀ.) ಯೋಜನೆಯ ಅಂತಿಮ ಸ್ಥಳ ಸಮೀಕ್ಷೆ ಪೂರ್ಣಗೊಂಡಿದ್ದರೂ ಕಾರಣಾಂತರಗಳಿಂದ ಸದರಿ ಯೋಜನೆ ಸ್ಥಗಿತಗೊಂಡಿದೆ. ಈ ಯೋಜನೆಗೆ ಪುನರುಜ್ಜೀವನಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸಚಿವರು ಮಧ್ಯಪ್ರವೇಶಿಸಬೇಕೆಂದು ಮನವಿ ಮಾಡಿರುವುದಾಗಿ ಯದುವೀರ್ ತಿಳಿಸಿದ್ದಾರೆ.

ಕೊಡಗು ಜಿಲ್ಲೆಗೆ ಸೂಕ್ತ ರೈಲು ಸಂಪರ್ಕವಿಲ್ಲದೇ ಪ್ರಮುಖ ಪ್ರವಾಸೋದ್ಯಮ ಮತ್ತು ತೋಟಗಾರಿಕೆ ಕ್ಷೇತ್ರಗಳ ಆರ್ಥಿಕತೆಗೆ ಭಾರಿ ತೊಂದರೆಯಾಗುತ್ತಿದೆ. ಸಂಪೂರ್ಣವಾಗಿ ಸ್ಯಾಚುರೇಟೆಡ್ ರಸ್ತೆ ಸಂಪರ್ಕದ ಮೇಲೆ ಬೆಳೆಗಾರರು ಅವಲಂಬಿತರಾಗಿದ್ದಾರೆ ಎಂದು ವಿವರಿಸಲಾಗಿದೆ ಎಂದರು.

ಸುಸ್ಥಿರ ಪ್ರವಾಸೋದ್ಯಮಕ್ಕೆ ಅವಕಾಶ: ಈ ಯೋಜನೆಯು ಕೊಡಗು ಜಿಲ್ಲೆಗೆ ಸುಸ್ಥಿರ ಪ್ರವಾಸೋದ್ಯಮ ಕ್ಷೇತ್ರಕ್ಕೆ ಹೇರಳ ಅವಕಾಶ ಒದಗಿಸುತ್ತದೆ. ಕೃಷಿ–ತೋಟಗಾರಿಕೆ ಪೂರೈಕೆ ಸರಪಳಿಗಳನ್ನು ಬಲಪಡಿಸುತ್ತದೆ ಮತ್ತು ಕೊಡಗನ್ನು ಮೈಸೂರು ಹಾಗೂ ಬೆಂಗಳೂರಿನ ಬೆಳವಣಿಗೆಯ ಕಾರಿಡಾರ್‌ಗಳೊಂದಿಗೆ ಸಂಯೋಜಿಸುತ್ತದೆ ಎಂದು ಸಚಿವರಿಗೆ ಮನವರಿಕೆ ಮಾಡಿಕೊಡಲಾಗಿದೆ ಎಂದು ಯದುವೀರ್ ಒಡೆಯರ್ ತಿಳಿಸಿದರು.

ಹೈಸ್ಪೀಡ್ ರೈಲಿಗೆ ಮೈಸೂರು ಸೇರಿಸಿ: ಕೇಂದ್ರ ಬಜೆಟ್‌ನಲ್ಲಿ ಬೆಂಗಳೂರು–ಚೆನ್ನೈ ನಡುವೆ ಹೈಸ್ಪೀಡ್ ರೈಲ್ವೆ ಕಾರಿಡಾರ್ ಯೋಜನೆ ಘೋಷಿಸಲಾಗಿದೆ. ಆದರೆ ಇದರಿಂದ 'ಮೈಸೂರು' ಕೈ ಬಿಡಲಾಗಿದೆ. ರೈಲ್ವೆ ಸಚಿವರು ಕೂಡಲೇ ಮಧ್ಯಪ್ರವೇಶಿಸಿ ಈ ಯೋಜನೆಗೆ ಸಾಂಸ್ಕೃತಿಕ ನಗರಿಯನ್ನೂ ಸೇರಿಸಬೇಕೆಂದು ಸಚಿವರಿಗೆ ಸಂಸದರು ಮನವಿ ಸಲ್ಲಿಸಿದರು.

ಮೈಸೂರು ಈಗ ಪ್ರಮುಖ ಪ್ರವಾಸಿ ತಾಣವಾಗಿದೆ. ಐಟಿ ಹಬ್ ಆಗುತ್ತಿದೆ. ರಾಜಧಾನಿ ಬೆಂಗಳೂರಿನೊಂದಿಗೆ ಸೂಕ್ತ ಸಂಪರ್ಕ ಜಾಲ ಹೊಂದಿದರೆ ಆರ್ಥಿಕ ಪ್ರಗತಿಯಾಗಲಿದೆ. ಬೆಂಗಳೂರನ್ನು ಮೆಟ್ರೊಪಾಲಿಟನ್ ವಲಯದಿಂದ ದಟ್ಟಣೆ ಕಡಿಮೆ ಮಾಡಲೂ ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಚೆನ್ನೈ–ಬೆಂಗಳೂರು ರೈಲ್ವೆ ಕಾರಿಡಾರ್‌ಗೆ ಮೈಸೂರು ಕೂಡ ಸೇರ್ಪಡೆ ಮಾಡಬೇಕೆಂದು ಮನವಿ ಮಾಡಿದ್ದೇನೆ ಎಂದು ಸಂಸದ ಯದುವೀರ್ ಒಡೆಯರ್ ತಿಳಿಸಿದ್ದಾರೆ.

"ಎರಡೂ ಮನವಿಗಳನ್ನು ಸ್ವೀಕರಿಸಿದ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರು ಕೂಡಲೇ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ. ರೈಲ್ವೆ ಸಚಿವಾಲಯ ಮತ್ತು ಅಧಿಕಾರಿಗಳ ಜೊತೆ ನಿರಂತರ ಫಾಲೋ ಅಪ್ ಮೂಲಕ ಈ ಎರಡನ್ನೂ ಕಾರ್ಯರೂಪಕ್ಕೆ ತರಲು ಎಲ್ಲಾ ರೀತಿಯಲ್ಲೂ ಕ್ರಮ ಕೈಗೊಳ್ಳಲಾಗುವುದು. ನನ್ನ ಕ್ಷೇತ್ರದ ಅಭಿವೃದ್ಧಿಗೆ ಬದ್ಧನಾಗಿದ್ದೇನೆ.

-**ಯದುವೀರ್ ಒಡೆಯರ್**, ಸಂಸದರು.

ಹಣ ಗಳಿಕೆಯೇ ಜೀವನದ ಮೂಲ ಉದ್ದೇಶವಾಗಬಾರದು

ನಾಡೋಜ ಡಾ. ವೂಡೇ ಪಿ.ಕೃಷ್ಣ ಅಭಿಪ್ರಾಯ



ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮಂಗಳವಾರ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ದತ್ತಿ ಪುರಸ್ಕಾರ ಹಾಗೂ ಬಹುಮಾನ ವಿತರಿಸಲಾಯಿತು.

ಮೈಸೂರು, ಫೆ.10(ಬಿಎಲ್‌ಯು)– ಜೀವನ ನಡೆಸಲು ಹಣದ ಅವಶ್ಯಕತೆ ಇರುವುದು ನಿಜ, ಆದರೆ ಹಣ ಗಳಿಕೆಯೇ ಬದುಕಿನ ಮೂಲ ಉದ್ದೇಶವಾಗಬಾರದು ಎಂದು ನಾಡೋಜ ಡಾ. ವೂಡೇ ಪಿ.ಕೃಷ್ಣ ಕಿವಿಮಾತು ಹೇಳಿದರು.

ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಇಂದು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ಹಣ ಗಳಿಕೆಯ ಜೊತೆಗೆ ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡುವ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪ್ರತಿಯೊಬ್ಬರು ದೇಶಕ್ಕೆ ಒಳ್ಳೆಯ ಪ್ರಜೆಯಾಗಿ ಬೆಳೆಯಬೇಕು, ಇದು ಶಿಕ್ಷಣದ ಮೂಲ ಉದ್ದೇಶವಾಗಬೇಕು. ಓದಿನ ಜೊತೆಗೆ ಒಳ್ಳೆಯ ಆಲೋಚನೆಗಳನ್ನು ಕೂಡ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕಲಿಕೆ ಎಂಬುದು ಪದವಿ ಪಡೆಯುವುದಕ್ಕೆ ಮಾತ್ರ ಸೀಮಿತವಾಗಬಾರದು, ಕಲಿಕೆ ಮೀರಿದ ಜ್ಞಾನ ರೂಢಿಸಿಕೊಳ್ಳಬೇಕು. ಶಿಕ್ಷಣ ಪೂರೈಸಿದ ನಂತರವೂ ಕೂಡ ವಿದ್ಯಾರ್ಜನೆಯಲ್ಲಿ ತೊಡಗಿಸಿಕೊಳ್ಳಬೇಕು. ಈ ಮೂಲಕ ಜ್ಞಾನವಂತರಾಗಬೇಕು ಎಂದು ಡಾ.ಕೃಷ್ಣ ಹೇಳಿದರು.

ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲ ಡಾ.ಎಂ.ಪ್ರಭು, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಬಿ.ಪ್ರಭುಸ್ವಾಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆಸ್ತಿ ತೆರಿಗೆ ನಷ್ಟ ತಪ್ಪಿಸಲು ಪಾಲಿಕೆಯಿಂದ ಲಿಡಾರ್ ತಂತ್ರಜ್ಞಾನದ ಬಳಕೆ

ಕ್ಯಾಲಿಕಟ್‌ನ ಎನ್‌ಐಟಿಯಿಂದ ನೂತನ ಯೋಜನೆ ಜಾರಿ

ಮೈಸೂರು, ಫೆ.10(ಆರ್‌ಕೆ)– ಆಸ್ತಿ ತೆರಿಗೆ ನಷ್ಟ ತಪ್ಪಿಸಿ ಆರ್ಥಿಕ ಸಂಪನ್ಮೂಲ ವೃದ್ಧಿಸಲು ಮೈಸೂರು ಮಹಾನಗರ ಪಾಲಿಕೆ(ಎಂಸಿಸಿ)ಯು ಇದೀಗ ಲಿಡಾರ್ ತಂತ್ರಜ್ಞಾನಕ್ಕೆ ಮೊರೆಹೋಗುತ್ತಿದೆ.

ಪಾಲಿಕೆ ವ್ಯಾಪ್ತಿಗೊಳಪಡುವ ಎಲ್ಲಾ ಬಗೆಯ ಆಸ್ತಿಗಳನ್ನು ಏರಿಯಲ್ ಲಿಡಾರ್ (ಲೈಟ್ ಡಿಟೆಕ್ಷನ್ ಅಂಡ್ ರೇಂಜಿಂಗ್) ತಂತ್ರಜ್ಞಾನವನ್ನು ಅಳವಡಿಸಿ, ಸಮೀಕ್ಷೆ ಮೂಲಕ ನಿಖರವಾದ ತೆರಿಗೆ ವಸೂಲಾತಿಗೆ ಮುಂದಾಗಿರುವ ಪಾಲಿಕೆಯು ಕೇರಳದ ಕ್ಯಾಲಿಕಟ್‌ನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎನ್‌ಐಟಿ)ಯಿಂದ ಲಿಡಾರ್ ಯೋಜನೆಯನ್ನು ಜಾರಿಗೊಳಿಸಲು ಮುಂದಾಗಿದೆ.

ಈ ಕುರಿತಂತೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿರುವ ಪಾಲಿಕೆ ಆಯುಕ್ತ ಶೇಕ್ ತನ್ವಿರ್ ಆಸೀಫ್ ಅವರು ಈ ನೂತನ ತಂತ್ರಜ್ಞಾನ ಅಳವಡಿಸಿಕೊಳ್ಳುವುದರಿಂದ ನಮಗೆ ಶೇಕಡಾ 30 ರಷ್ಟು ಹೆಚ್ಚುವರಿ ತೆರಿಗೆ ಸಂಗ್ರಹವಾಗುವ ನಿರೀಕ್ಷೆ ಇದೆ. ಪ್ರಸ್ತುತ ಪಾಲಿಕೆ ವ್ಯಾಪ್ತಿಯಲ್ಲಿ ವಾರ್ಷಿಕ 230 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹವಾಗುತ್ತಿದ್ದು, ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳುವುದರಿಂದ ಹೆಚ್ಚುವರಿಯಾಗಿ 54 ಕೋಟಿ ರೂ. ಸಂಪನ್ಮೂಲ ಸಂಗ್ರಹವಾಗಲಿದೆ. ಅಲ್ಲದೇ ಸುಮಾರು 60 ಕೋಟಿ ರೂ ಇರುವ ನೀರಿನ ತೆರಿಗೆಯೂ 90 ಕೋಟಿ ರೂ.ಗೆ ಏರುವ ಸಾಧ್ಯತೆಯಿದೆ ಎಂದರು.



ಏರಿಯಲ್ ಲಿಡಾರ್‌ನಿಂದಾಗಿ ಕಟ್ಟಡದ ಅಳತೆ, ಮಹಡಿಗಳ ಸಂಖ್ಯೆ, ಕಟ್ಟಡಕ್ಕೆ ಬಳಸಿರುವ ಸಾಮಾಗ್ರಿಗಳ ಗುಣಮಟ್ಟ, ಅನುಮೋದಿತ ನಕ್ಷೆ ಪಾಲನೆ ಮಾಡಲಾಗಿದೆಯೇ, ಭೂ ಉಪಯೋಗ ಬದಲಾವಣೆ, ಸರ್ಕಾರಿ ಜಾಗ ಒತ್ತುವರಿಯಾಗಿದೆಯೇ ಎಂಬುದರ ಬಗ್ಗೆ ನಿಖರವಾದ ಮಾಹಿತಿ ಲಭ್ಯವಾಗಲಿದೆ ಎಂದ ಅವರು, ಅತಿಕ್ರಮ ಪ್ರವೇಶ, ಆಸ್ತಿಗಳ ಮೌಲ್ಯ ಮಾಪನವನ್ನು ಪತ್ತೆ ಮಾಡಲು ಸಹ ಈ ತಂತ್ರಜ್ಞಾನ ನೆರವಾಗಲಿದೆ ಎಂದರು.

ವಾರಣಾಸಿ, ಅಯೋಧ್ಯೆಯಂತಹ ದೇಶದ ಬೇರೆ–ಬೇರೆ ರಾಜ್ಯಗಳ ಪ್ರಮುಖ ನಗರಗಳಲ್ಲಿ ಎನ್‌ಐಟಿ ಇಂಜಿನಿಯರ್‌ಗಳು ಏರಿಯಲ್ ಸರ್ವೇ ಮೂಲಕ ಲಿಡಾರ್ ಆಧಾರಿತ ಜಿಐಎಸ್ ಆಸ್ತಿ ಮ್ಯಾಪಿಂಗ್‌ನಲ್ಲಿ ಯಶಸ್ವಿಯಾಗಿರುವುದರಿಂದ ಎಂಸಿಸಿ ವ್ಯಾಪ್ತಿಯ ಆಸ್ತಿಗಳನ್ನು ಪತ್ತೆ ಹಚ್ಚಿ ತೆರಿಗೆ ವಸೂಲಾತಿಗೆ ಬಳಸಿಕೊಳ್ಳಲು ನಿರ್ಧರಿಸಲಾಗಿದ್ದು, ಈಗಾಗಲೇ ತಂತ್ರಜ್ಞರ ತಂಡವು ಮೈಸೂರಿಗೆ ಭೇಟಿ ನೀಡಿ ಪಾಲಿಕೆ ಕಚೇರಿಯಲ್ಲಿ ಚರ್ಚೆ ನಡೆಸಿದೆ. ಅವರಿಗೆ ನಾವು ಅಗತ್ಯ ವಿವರಗಳನ್ನು ನೀಡಿದ್ದೇವೆ ಎಂದ ಆಸೀಫ್ ಅವರು ಈ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದು, ಅನುಮೋದನೆ ದೊರೆತ ಬಳಿಕ ಈ ತಿಂಗಳ ಅಂತ್ಯದಲ್ಲಿ ಅನುಷ್ಠಾನಕ್ಕೆ ಪ್ರಕ್ರಿಯೆ ಆರಂಭಿಸಲಾಗುವುದು ಎಂದರು.

ಬಹುತೇಕ ಆಸ್ತಿಗಳ ಮಾಲೀಕರು ತಮ್ಮ ನಿಖರವಾದ ಮಾಹಿತಿಯನ್ನು ನೀಡದೇ ಪಾಲಿಕೆಗೆ ಆಸ್ತಿ ತೆರಿಗೆ ಮತ್ತು ನೀರಿನ ತೆರಿಗೆಯನ್ನು ವಂಚಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಪಾಲಿಕೆಗೆ ನಷ್ಟವಾಗುತ್ತಿದ್ದು, ಪರಿಣಾಮ ನಾಗರಿಕರಿಗೆ ರಸ್ತೆ, ನೀರು, ಒಳಚರಂಡಿ, ಬೀದಿ–ದೀಪ, ಸ್ವಚ್ಛತೆ, ಪಾರ್ಕ್ ನಿರ್ವಹಣೆಯಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಲು ತೊಂದರೆಯಾಗುತ್ತಿದೆ. ನಮಗಿಂತ ಕಡಿಮೆ ಜನಸಂಖ್ಯೆಯುಳ್ಳ ಹಾಗೂ ಕಡಿಮೆ ಆಸ್ತಿವುಳ್ಳ ದೇಶದ ಬಹುತೇಕ ನಗರಗಳಲ್ಲಿ ಮೈಸೂರಿಗಿಂತ ಹೆಚ್ಚು ಆಸ್ತಿ ತೆರಿಗೆ ಸಂಗ್ರಹವಾಗುತ್ತಿರುವುದು ಗಮನಾರ್ಹ ಎಂದ ಆಯುಕ್ತರು, ನಾವು ಸಹ ತೆರಿಗೆ ದರ ಪರಿಷ್ಕರಣೆ ಮಾಡುವ ಮೂಲಕ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ ಎಂದರು.



ನಮೀಬಿಯಾ ವಿರುದ್ಧ ಗೆದ್ದ ನೆದರ್ಲ್ಯಾಂಡ್ಸ್



ಡೆಲ್ಲಿ, ಫೆ.10(ವಿವಿಹೆಚ್)– ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಮೀಬಿಯಾ ಮತ್ತು ನೆದರ್ಲ್ಯಾಂಡ್ಸ್ ನಡುವಣ ನಡೆದ ಐಸಿಸಿ ಟಿ20 ವಿಶ್ವಕಪ್‌ನ 10ನೇ ಪಂದ್ಯದಲ್ಲಿ ನೆದರ್ಲ್ಯಾಂಡ್ಸ್ ತಂಡ 7 ವಿಕೆಟ್‌ಗಳ ಅಂತರದಿಂದ ಗೆಲುವು ದಾಖಲಿಸುವ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ನಮೀಬಿಯಾ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 156 ರನ್ ಕಲೆಹಾಕಿತು. ಈ ಮೊತ್ತವನ್ನು ಸಲೀಸಾಗಿ ಬೆನ್ನತ್ತಿದ ನೆದರ್ಲ್ಯಾಂಡ್ಸ್ ತಂಡ 18 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 159 ರನ್ ಬಾರಿಸುವ ಮೂಲಕ 7 ವಿಕೆಟ್‌ಗಳಿಂದ ಗೆದ್ದು ಬೀಗಿತು. ನೆದರ್ಲ್ಯಾಂಡ್ಸ್ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ ಬ್ಯಾಟರ್ ಬಾಸ್ ಡಿ ಲೀಡೆ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು.

ಸಂಕ್ಷಿಪ್ತ ಸ್ಕೋರ್

ನಮೀಬಿಯಾ: 156/8 (20 ಓವರ್)– ಜಾನ್ ನಿಕೋಲ್ ಲಾಫ್ಟಿ–ಈಟನ್ 42(38), ಜಾನ್ ಫ್ರೈಲಿಂಕ್ 30(26), ಜೆಜೆ ಸ್ಮಿತ್ 22(15), ಬಾಸ್ ಡಿ ಲೀಡೆ 20ಕ್ಕೆ2, ಲೋಗನ್ ವ್ಯಾನ್ ಬೀಕ್ 13ಕ್ಕೆ2.

ನೆದರ್ಲ್ಯಾಂಡ್ಸ್: 159/3 (18 ಓವರ್)– ಬಾಸ್ ಡಿ ಲೀಡೆ 72(48), ಕಾಲಿನ್ ಅಕರ್ಮನ್ 32(28), ಮೈಕಲ್ ಲೆವಿಟ್ 28(15), ಬರ್ನಾರ್ಡ್ ಸ್ಕೋಲ್ಟ್ಜ 27ಕ್ಕೆ1, ರೂಬೆನ್ ಟ್ರಂಪೆಲ್ಮನ್ 30ಕ್ಕೆ1, ಜಾನ್ ನಿಕೋಲ್ ಲೋಫ್ಟಿ–ಈಟನ್ 31ಕ್ಕೆ1.

ಟಿಮ್ ಸೀಫರ್ಟ್–ಫಿನ್ ಆಲೆನ್ ದಾಖಲೆ ಜೊತೆಯಾಟ

ಕಿವೀಸ್‌ಗೆ ಸುಲಭ ತುತ್ತಾದ ಯುಎಇ

ಚೆನ್ನೈ, ಫೆ.10(ವಿವಿಹೆಚ್)– ಕಿವೀಸ್ ಆರಂಭಿಕರಾದ ಟಿಮ್ ಸೀಫರ್ಟ್ ಹಾಗೂ ಫಿನ್ ಆಲೆನ್ ಅಜೇಯ ಜೊತೆಯಾಟದ ಸಹಾಯದಿಂದ ಯುನೈಟೆಡ್ ಅರಬ್ ಎಮಿರೈಟ್ಸ್ (ಯುಎಇ) ವಿರುದ್ಧ ದಾಖಲೆಯ 10 ವಿಕೆಟ್‌ಗಳ ಗೆಲುವು ಸಾಧಿಸಿತು.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಮಂಗಳವಾರ ನ್ಯೂಜಿಲೆಂಡ್ ಹಾಗೂ ಯುಎಇ ನಡುವೆ ನಡೆದ ಐಸಿಸಿ ಟಿ20 ವಿಶ್ವಕಪ್‌ನ 11ನೇ ಪಂದ್ಯದಲ್ಲಿ ಕಿವೀಸ್ ಯಾವುದೇ ವಿಕೆಟ್ ಕಳೆದುಕೊಳ್ಳದೇ ಬರೋಬ್ಬರಿ 174 ರನ್‌ಗಳನ್ನು ಬೆನ್ನಟ್ಟುವ ಮೂಲಕ ಟಿ20 ವಿಶ್ವಕಪ್ ಇತಿಹಾಸದಲ್ಲಿ ಮೊದಲ ವಿಕೆಟ್‌ಗೆ ಬೃಹತ್ ಮೊತ್ತ ಬೆನ್ನತ್ತಿದ ದಾಖಲೆಯನ್ನು ತನ್ನದಾಗಿಸಿಕೊಂಡಿತು. 2022ರಲ್ಲಿ ಆಸ್ಟ್ರೇಲಿಯಾದ ಅಡಿಲೇಡ್‌ನಲ್ಲಿ ನಡೆದಿದ್ದ ಭಾರತ ಮತ್ತು ಇಂಗ್ಲೆಂಡ್ ನಡುವಣ ಪಂದ್ಯದಲ್ಲಿ ಇಂಗ್ಲೆಂಡ್ ಯಾವುದೇ ವಿಕೆಟ್ ನಷ್ಟವಿಲ್ಲದೇ 170ರನ್‌ಗಳ ಗುರಿ ಮುಟ್ಟಿದ್ದು ಈವರೆಗಿನ ದಾಖಲೆಯಾಗಿತ್ತು.

ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಯುಎಇಗೆ ಆರಂಭಿಕ ಆಘಾತ ಎದುರಾಯಿತು. ಆರ್ಯಾನ್ಶ್ ಶರ್ಮಾ 8 ರನ್ ಗಳಿಗೆ ವಿಕೆಟ್ ಒಪ್ಪಿಸಿ ಹೊರನಡೆದರು.

ಬಳಿಕ ಒಂದಾದ ನಾಯಕ ಮುಹಮ್ಮದ್ ವಸೀಮ್ ಮತ್ತು ಅಲಿಶನ್ ಶರಾಫು ಉತ್ತಮ ಅಡಿಪಾಯ ಹಾಕಿಕೊಟ್ಟರು. ವಸೀಮ್ ಅಜೇಯರಾಗಿ ಉಳಿದು ತಾವೆದುರಿಸಿದ 45 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್ ಸಹಿತ 66 ರನ್ ಗಳಿಸಿದರೆ, ಶರಾಫು 47 ಎಸೆತದಲ್ಲಿ 5 ಬೌಂಡರಿ, 2 ಸಿಕ್ಸರ್ ಸಹಿತ 55 ರನ್ ಗಳಿಸಿದರು. ಈ ಜೋಡಿ ಶತಕದ ಜೊತೆಯಾಟವಾಡಿ ಬೇರ್ಪಟ್ಟಿತು.

ಆದರೆ ಬಳಿಕ ಬಂದ ಬೇರ್‍ಯಾರಿಂದಲೂ ನಿರೀಕ್ಷಿತ ಆಟ ಕಂಡು ಬರಲಿಲ್ಲ. ಹರ್ಷಿತ್ ಕೌಶಿಕ್ 2, ಮಯಾಂಕ್ ಕುಮಾರ್ 21, ಶೋಯಬ್ ಖಾನ್ 7, ಮುಹಮ್ಮದ್ ಅಫ್ರಾನ್ ಖಾತೆ ತೆರೆಯದೆ ಕ್ರೀಸ್‌ನಲ್ಲಿದ್ದರು. ಅಂತಿಮವಾಗಿ ಯುಎಇ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 173 ರನ್ ಕಲೆಹಾಕಿತು.

ಇತ್ತ ಕಿವೀಸ್ ಪರ ಮ್ಯಾಟ್ ಹೆನ್ರಿ 2 ವಿಕೆಟ್, ಜಾಕೋಬ್ ಡಫಿ, ಲಾಕಿ ಫರ್ಗ್ಯೂಸನ್, ನಾಯಕ ಮಿಚೆಲ್ ಸ್ಯಾಂಟ್ನರ್ ಹಾಗೂ ಗ್ಲೇನ್ ಫಿಲಿಪ್ಸ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಕಿವೀಸ್‌ಗೆ ಸೀಫರ್ಟ್ ಹಾಗೂ ಆಲೆನ್ ಬೌಂಡರಿ, ಸಿಕ್ಸರ್ ಹೊಡೆಯುವ ಮೂಲಕ ಯುಎಇ ಬೌಲರ್‌ಗಳನ್ನು ಕಾಡಿದರು. ಅಜೇಯರಾಗಿ ಉಳಿದ ಈ ಜೋಡಿ ಕೇವಲ 15.2 ಓವರ್‌ಗಳಲ್ಲಿ 175 ರನ್ ಕಲೆಹಾಕಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಇದರಲ್ಲಿ ಸೀಫರ್ಟ್ 42 ಎಸೆತಗಳಲ್ಲಿ 12 ಬೌಂಡರಿ, 3 ಸಿಕ್ಸರ್ ಸಹಿತ 89 ರನ್ ಗಳಿಸಿದರೆ, ಫಿನ್ ಆಲೆನ್ 50 ಎಸೆತ ಎದುರಿಸಿ ತಲಾ 5 ಬೌಂಡರಿ, ಸಿಕ್ಸರ್ ಒಳಗೊಂಡಂತೆ 84 ರನ್ ಚಚ್ಚಿದರು. ಆ ಮೂಲಕ ಕಿವೀಸ್ ಟೂರ್ನಿಯಲ್ಲಿ ಎರಡನೇ ಗೆಲುವು ದಾಖಲಿಸಿತು.



ಫಿನ್ ಆಲೆನ್–ಟಿಮ್ ಸೀಫರ್ಟ್ ಜೊತೆಯಾಟ

ಟೂರ್ನಿಯಲ್ಲಿ ಸತತ ಎರಡನೇ ಗೆಲುವು ದಾಖಲಿಸಿದ ಪಾಕಿಸ್ತಾನ

ಮೈಸೂರು, ಫೆ.10(ವಿವಿಹೆಚ್)– ಕೊಲಂಬೊದ ಪ್ರೇಮದಾಸ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ 12ನೇ ಗ್ರೂಪ್ ಹಂತದ ಪಂದ್ಯದಲ್ಲಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ (ಯುಎಸ್‌ಎ) ವಿರುದ್ಧ ಪಾಕಿಸ್ತಾನ 32 ರನ್‌ಗಳ ಅಂತರದಿಂದ ಗೆಲುವು ಸಾಧಿಸಿತು.

ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 190 ರನ್ ಕಲೆಹಾಕಿತು. ಈ ಸವಾಲಿನ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಯುಎಸ್‌ಎ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 158 ರನ್ ಗಳಿಸಲಷ್ಟೆ ಶಕ್ತವಾಯಿತು.


ಮೊದಲು ಬ್ಯಾಟ್ ಮಾಡಿದ ಪಾಕ್‌ಗೆ ಸೈಮ್ ಆಯೂಬ್ ಹಾಗೂ ಸಹಿಬ್ಜಾದಾ ಫರ್ಹಾನ್ 54 ರನ್‌ಗಳ ಜತೆಯಾಟವನ್ನಾಡಿ ಉತ್ತಮ ಆರಂಭವನ್ನು ಕಟ್ಟಿಕೊಟ್ಟರು. ಸೈಮ್ ಆಯೂಬ್ 19 ರನ್‌ಗೆ ಔಟಾದರೆ, ಬಳಿಕ ಬಂದ ನಾಯಕ ಸಲ್ಮಾನ್ ಆಘಾ ಕೇವಲ 1 ರನ್ ಪೇರಿಸಿ ಪೆವಿಲಿಯನ್ ಸೇರಿದರು.

ಮೂರನೇ ವಿಕೆಟ್‌ಗೆ ಜತೆಯಾದ ಬಾಬರ್ ಅಜಮ್ ಹಾಗೂ ಸಹಿಬ್ಜಾದಾ ಫರ್ಹಾನ್ 81 ರನ್‌ಗಳ ಜತೆಯಾಟವಾಡಿ ಸುಧಾರಣೆ ತಂದರು. ಬಾಬರ್ ಅಜಮ್ 46 ರನ್ ಗಳಿಸಿದರೆ, ಸಹಿಬ್ಜಾದಾ ಫರ್ಹಾನ್ 41 ಎಸೆತಗಳಲ್ಲಿ 6 ಬೌಂಡರಿ ಹಾಗೂ 5 ಸಿಕ್ಸರ್ ಸಹಿತ 73 ರನ್ ಬಾರಿಸಿದರು. ಮೊಹಮ್ಮದ್ ನವಾಜ್ 5 ರನ್ ಬಾರಿಸಿದರೆ, ಶದಬ್ ಖಾನ್ 12 ಎಸೆತಗಳಲ್ಲಿ 30 ರನ್ ಬಾರಿಸಿದರು. ಇನ್ನುಳಿದಂತೆ ಫಹೀಮ್ ಅಶ್ರಫ್ 1 ರನ್, ಉಸ್ಮಾನ್ ಖಾನ್ ಡಕ್‌ಔಟ್, ಅಬ್ರಾರ್ ಅಹ್ಮದ್ ಡಕ್‌ಔಟ್ ಹಾಗೂ ಶಾಹೀನ್ ಅಫ್ರಿದಿ ಅಜೇಯ 9 ರನ್ ಬಾರಿಸಿದರು.

ಯುಎಸ್‌ಎ ಪರ ಶಾಡ್ಲಿ ವಾನ್ ಶಾಲ್ಕ್ವಿಕ್ 4 ವಿಕೆಟ್, ಸೌರಭ್ ನೇತ್ರಾವಲ್ಕರ್, ಮೊಹಮ್ಮದ್ ಮೊಕ್ಸಿನ್ ಹಾಗೂ ಹರ್ಮೀತ್ ಸಿಂಗ್ ತಲಾ ಒಂದೊಂದು ವಿಕೆಟ್ ಪಡೆದರು.

ಈ ಮೊತ್ತ ಬೆನ್ನತ್ತಿದ ಯುಎಸ್‌ಎಗೆ ಉತ್ತಮ ಆರಂಭ ದೊರೆಯಿತು. ಆಂಡ್ರೀಸ್ ಗೌಸ್ 13 ರನ್ ಗಳಿಸಿ ಔಟಾದರೆ, ನಾಯಕ ಮೋನಾಕ್ ಪಟೇಲ್ 3 ರನ್ ಗಳಿಗೆ ನಿರ್ಗಮಿಸಿದರು. ಬಳಿಕ ಬಂದ ಮಿಲಿಂದ್ ಕುಮಾರ್ 29 ರನ್ ಗಳಿಸಿ ಅಲ್ಪ ಹೋರಾಟ ನೀಡಿ ನಿರ್ಗಮಿಸಿದರು

ನಾಲ್ಕನೇ ವಿಕೆಟ್‌ಗೆ ಜೊತೆಯಾದ ಶಯನ್ ಜಹಾಂಗೀರ್ ಮತ್ತು ಶುಭಂ ರಂಜನೆ ಅರ್ಧ ಶತಕದ ಜೊತೆಯಾಟ ನೀಡಿಯೂ ತಂಡವನ್ನು ಗೆಲ್ಲಿಸಿಕೊಡಲು ಸಾಧ್ಯವಾಗಲಿಲ್ಲ. ಜಹಾಂಗೀರ್ 49(34), ರಂಜನೆ 51(30) ಹೊರತಾಗಿ ಉಳಿದವರು ವೈಫಲ್ಯ ಅನುಭವಿಸಿದ್ದು, ತಂಡದ ಸೋಲಿಗೆ ಕಾರಣವಾಯಿತು.



ವಿವಿಧೆಡೆ ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಕಾರ್ಯಕ್ರಮ

ಅಭಿವೃದ್ಧಿ ನಿರಂತರ: ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಭರವಸೆ

ತಿ.ನರಸೀಪುರ, ಫೆ.10– ಅಭಿವೃದ್ಧಿ ನಿರಂತರ ಪ್ರಕ್ರಿಯೆಯಾಗಿರುವುದರಿಂದ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಭರವಸೆ ನೀಡಿದರು.

ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಂಗಾಚಾರಿ ಹುಂಡಿ, ರಂಗನಾಥಪುರ, ಹುನಗನಹಳ್ಳಿ, ಮಾದೇಗೌಡನ ಹುಂಡಿ, ಪಟ್ಟೇಹುಂಡಿ, ಎಳವೇಗೌಡನ ಹುಂಡಿ ಹಾಗೂ ರಂಗಸಮುದ್ರ ಗ್ರಾಮಗಳಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಅಭಿವೃದ್ಧಿ ಒಂದು ನಿರಂತರ ಪ್ರಕ್ರಿಯೆಯಾಗಿದೆ. ಕ್ಷೇತ್ರದಲ್ಲಿ ನಿರಂತರವಾಗಿ ಅಭಿವೃದ್ಧಿ ಕಾಮಗಾರಿ ಮಾಡಿದರೂ ಸಣ್ಣ ಪುಟ್ಟ ಕಾಮಗಾರಿಗಳು ಬಾಕಿ ಉಳಿಯುವುದು ಸಹಜ. ಸರ್ಕಾರ ಹೊಸ ಕಾಮಗಾರಿಗೆ ಹಣ ಬಿಡುಗಡೆ ಮಾಡುತ್ತಿದೆ. ಕಾಮಗಾರಿಗಳೂ ಹೊಸದಾಗಿರುತ್ತವೆ. ಕ್ಷೇತ್ರಕ್ಕೆ ಅಗತ್ಯವಿರುವ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಲು ಅನುದಾನ ಬಳಸಲಾಗುತ್ತದೆ ಎಂದರು.

ರಂಗಸಮುದ್ರ ಗ್ರಾಪಂ ವ್ಯಾಪ್ತಿಯ ಪ್ರತಿಯೊಂದು ಹಳ್ಳಿಯಲ್ಲಿ ಗ್ರಾಮಸ್ಥರನ್ನು ನೇರವಾಗಿ ಭೇಟಿ ಮಾಡಿ ಅವರ ಸಮಸ್ಯೆ ತಿಳಿದುಕೊಂಡು ಅವುಗಳಿಗೆ ಪರಿಹಾರ ಕಂಡು ಹಿಡಿಯುವ ಪ್ರಯತ್ನ ಮಾಡಲಾಗುತ್ತಿದೆ. ಅಲ್ಲದೇ ಹುನುಗನಹಳ್ಳಿಯ ಸರ್ಕಾರಿ ಶಾಲೆಯ ಒಂದು ಕೊಠಡಿ ನಿರ್ಮಾಣಕ್ಕೆ 13.90 ಲಕ್ಷ, ಹಿರಿಯ ಪ್ರಾಥಮಿಕ ಶಾಲೆಗೆ 15 ಲಕ್ಷ, ಶಾಲಾ ಸಭಾಂಗಣಕ್ಕೆ 3 ಲಕ್ಷ, ಡೇರಿ ನಿರ್ಮಾಣಕ್ಕೆ 10 ಲಕ್ಷ, ಸಾಮಾನ್ಯ ವರ್ಗದ ಬೀದಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿಗೆ 20 ಲಕ್ಷ, ಪಟ್ಟಲದಮ್ಮ ದೇವಸ್ಥಾನ ಅಭಿವೃದ್ಧಿಗೆ 5 ಲಕ್ಷ ಹಾಗೂ ಮಸೀದಿ ಅಭಿವೃದ್ಧಿಗೆ 10 ಲಕ್ಷ ಅನುದಾನ ನೀಡಲಾಗಿದೆ ಎಂದರು.

ರಾಜೀವ್ ಗಾಂಧಿ ವಸತಿ ನಿಗಮದಡಿ ಮನೆ ನೀಡಿಕೆ: ವರುಣ ಕ್ಷೇತ್ರದಲ್ಲಿ ಭಾಗಶಃ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಮುಗಿದಿದ್ದು, ಆದಾಗ್ಯೂ ಅಭಿವೃದ್ಧಿಯಾಗದ ರಸ್ತೆಗಳ ಸರ್ವೆ ಮಾಡಿಸಿ ಹಣ ಮಂಜೂರು ಮಾಡಿಕೊಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕ್ಷೇತ್ರಕ್ಕೆ ಬೇಕಿರುವ ಮನೆಗಳ ಬೇಡಿಕೆ ನೋಡಿಕೊಂಡು ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಮನೆ ಮಂಜೂರು ಮಾಡಿಸಿಕೊಡುತ್ತೇನೆ. ಆದರೆ ಕ್ಷೇತ್ರದಲ್ಲಿ ಆಯಾಯ ಗ್ರಾಪಂನಲ್ಲಿ ಮನೆ ವಿತರಿಸುವುದು ಜಿಪಂ ಸಿಇಓ ಹಾಗೂ ತಾಪಂ ಇಓಗಳ ಕರ್ತವ್ಯ. ಹೀಗಾಗಿ ಯಾವ್ಯಾವ ಪಂಚಾಯ್ತಿಯಲ್ಲಿ ಎಷ್ಟು ಮನೆಗಳ ಬೇಡಿಕೆ ಇದೆ ಎಂಬುದನ್ನು ನೋಡಿಕೊಂಡು ಮನೆ ನೀಡುವ ಪ್ರಕ್ರಿಯೆ ಮಾಡಲಾಗುತ್ತದೆ. ನಾನು ಕುಳಿತು ಗ್ರಾಪಂಗಳಿಗೆ ಇಷ್ಟು ಮನೆ ಕೊಡಿ ಎಂದು ಹೇಳಲು ಬರುವುದಿಲ್ಲ. ಅದನ್ನು ಅಧಿಕಾರಿಗಳು ಮಾಡುತ್ತಾರೆ. ಹೆಚ್ಚು ಮನೆಗಳ ಬೇಡಿಕೆ ಇದ್ದಲ್ಲಿ ಅದನ್ನು ಮಾಡಿಸಿ ಕೊಡೋಣ ಎಂದು ಭರವಸೆ ನೀಡಿದರು.

ಇದೇ ವೇಳೆ ಪಟ್ಟೇಹುಂಡಿ ಗ್ರಾಮದಲ್ಲಿ ಕನಕ ಭವನ ನಿರ್ಮಿಸಿ ಕೊಡುವಂತೆ ಗ್ರಾಮಸ್ಥರು ಸಲ್ಲಿಸಿದ ಮನವಿಗೆ ಸ್ಪಂದಿಸಿದ ಯತೀಂದ್ರ ಕೂಡಲೇ ಎಸ್ಟಿಮೇಟ್ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ನೂರಾರು ಗ್ರಾಮಸ್ಥರು ವಿವಿಧ ಸಮಸ್ಯೆಗಳ ಕುರಿತಂತೆ ಶಾಸಕರಿಗೆ ಮನವಿ ಸಲ್ಲಿಸಿದರು. ಕೆಲವೊಂದು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಸೂಚಿಸಿದರೆ ಮತ್ತೆ ಕೆಲವು ಸಮಸ್ಯೆಗಳನ್ನು ಬಗೆಹರಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ, ದೇವರತ್ನ ಫೌಂಡೇಶನ್ ಅಧ್ಯಕ್ಷ ಶಿವಪ್ರಸಾದ್, ಜಿಪಂ ಮಾಜಿ ಸದಸ್ಯ ಕೆ.ಮಹದೇವ್, ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆಹುಂಡಿ ಮಹೇಶ್, ಮಾಜಿ ಅಧ್ಯಕ್ಷ ತುಂಬಲ ಪ್ರಶಾಂತ್ ಬಾಬು, ಪುರಸಭಾ ಮಾಜಿ ಅಧ್ಯಕ್ಷರಾದ ಎನ್.ಸೋಮು, ಎಸ್. ಮದನ್ ರಾಜ್, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ತಾಪಂ ಮಾಜಿ ಸದಸ್ಯ ನರಸೇಗೌಡ, ರಂಗಸಮುದ್ರ ಮಂಜುನಾಥ್, ಕೆಂಪಯ್ಯನಹುಂಡಿ ಆನಂದ್, ಕುಪ್ಯಾ ರಘು, ಗವಿ, ಮೆಲ್ಲಹಳ್ಳಿ ರವಿಗೌಡ, ಹುನುಗನಹಳ್ಳಿ ಹೆಚ್.ಚೆನ್ನೇಗೌಡ, ನಾರಾಯಣ, ರಾಜೇಶ್, ರಾಮಕೃಷ್ಣ, ಕುಪ್ಯಾ ಪ್ರಭಾಕರ್, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಕರಿಯಪ್ಪ, ತಿರುಮಕೂಡಲು ಚೇತು, ತಹಸೀಲ್ದಾರ್ ಸುರೇಶಾಚಾರ್ ಸೇರಿದಂತೆ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.


ಜನಸಂಪರ್ಕ ಸಭೆಯಲ್ಲಿ ಡಾ.ಯತೀಂದ್ರ ಅವರಿಗೆ ಹೂಗುಚ್ಛ ನೀಡಿ ಕೃತಜ್ಞತೆ ಸಲ್ಲಿಸಲಾಯಿತು

ಡಾ.ಯತೀಂದ್ರಗೆ ಕೃತಜ್ಞತೆ ಸಲ್ಲಿಸಿದ ಯುವತಿ...

ಮಾದೇಗೌಡನಹುಂಡಿಯಲ್ಲಿ ನಡೆದ ಜನಸಂಪರ್ಕ ಸಭೆ ವೇಳೆ ಗ್ರಾಮದ ನಿವಾಸಿ ಭೀಮ ಎಂಬುವರ ಪುತ್ರಿ ಬಿ.ಚಂದನ ಅವರು ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಹೂಗುಚ್ಛ ನೀಡಿ ತಮಗೆ ನೀಡಿದ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿದರು.

ಕಳೆದ ಜನ ಸಂಪರ್ಕ ಸಭೆಯಲ್ಲಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದ ಬಿ.ಚಂದನ ಅವರಿಗೆ ಡಾ.ಯತೀಂದ್ರ ಅವರು ಲ್ಯಾಪ್‌ಟಾಪ್ ವಿತರಿಸಿ, 20 ಸಾವಿರ ರೂ.ಗಳ ಪ್ರೋತ್ಸಾಹ ಧನ ವಿತರಿಸಿದ್ದರು. ನಂತರ ವಿದ್ಯಾರ್ಥಿನಿಗೆ ಚೆನ್ನೈನಲ್ಲಿ ಉದ್ಯೋಗ ದೊರಕಿತ್ತು. ಶಾಸಕರ ಪ್ರೋತ್ಸಾಹದಿಂದಾಗಿ ಇಂದು ಒಳ್ಳೆಯ ಉದ್ಯೋಗ ದೊರಕಿದೆ ಎಂದು ಶಾಸಕರಿಗೆ ಹೂಗುಚ್ಛ ನೀಡಿ ಕೃತಜ್ಞತೆ ಸಲ್ಲಿಸಿದರು. ಈ ವೇಳೆ ಡಾ.ಯತೀಂದ್ರ ಚಂದನರಿಗೆ ಸಿಹಿ ತಿನಿಸಿ ಶುಭ ಕೋರಿ ಮತ್ತಷ್ಟು ಎತ್ತರಕ್ಕೆ ಬೆಳೆಯುವಂತೆ ಹಾರೈಸಿದರು.

ಓದಿದ ಶಾಲೆಗೆ ಕೊಡುಗೆ ನೀಡಿದರೆ ಬದುಕು ಸಾರ್ಥಕ

ವಿಧಾನಪರಿಷತ್ ಸದಸ್ಯ ಡಿ.ತಿಮ್ಮಯ್ಯ ಅಭಿಪ್ರಾಯ

ಹುಣಸೂರು, ಫೆ.10– ಜೀವನದಲ್ಲಿ ಸಾಧನೆ ಮಾಡಿದ ಬಳಿಕ ಓದಿದ ಶಾಲೆಗೆ ಹಿಂದಿರುಗಿದಾಗ ಧನ್ಯತಾ ಭಾವ ಉಂಟಾಗುತ್ತದೆ. ಅಲ್ಲದೇ ಆ ಶಾಲೆಗೆ ಕೈಲಾದಷ್ಟು ಕೊಡುಗೆ ನೀಡಿದರೇ ಬದುಕು ಸಾರ್ಥಕವಾಗುತ್ತದೆ ಎಂದು ವಿಧಾನಪರಿಷತ್ ಸದಸ್ಯ ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟರು.

ನಗರದ ಐತಿಹಾಸಿಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 140ನೇ ವಾರ್ಷಿಕೋತ್ಸವ ಹಾಗೂ ಹಿರಿಯ ವಿದ್ಯಾರ್ಥಿಗಳ ಮಹಾ ಸಂಗಮ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ, 5 ಲಕ್ಷ ವೆಚ್ಚದ ಅಡುಗೆ ಮನೆ ಉದ್ಘಾಟಿಸಿ ಮಾತನಾಡಿದ ಅವರು ಬದುಕು ಕಲಿಸಿದ ಶಾಲೆ ತಾಯಿಯ ಸಮಾನ. ಹೀಗಾಗಿ ಪ್ರತಿಯೊಬ್ಬರೂ ತಾವು ವ್ಯಾಸಂಗ ಮಾಡಿದ ಶಾಲೆಗೆ ಏನಾದರೊಂದು ಕೊಡುಗೆ ನೀಡಬೇಕು. ಆ ಮೂಲಕ ಶಾಲೆಯ ಉಳಿವಿಗಾಗಿ ಶ್ರಮಿಸಬೇಕು ಎಂದು ತಿಳಿಸಿದರು.

ಸನ್ಮಾನ ಸ್ವೀಕರಿಸಿ ಮಾಜಿ ಶಾಸಕ ಹಾಗೂ ಶಾಲೆ ಹಳೆ ವಿದ್ಯಾರ್ಥಿ ಹೆಚ್.ಪಿ.ಮಂಜುನಾಥ್ ಮಾತನಾಡಿ, ಪ್ರಸ್ತುತ ಸರ್ಕಾರಿ ಶಾಲೆಗಳನ್ನು ದೇವಾಲಯಗಳಂತೆ ಕಾಪಾಡಿಕೊಳ್ಳುವ ಅಗತ್ಯವಿದೆ. ನಾನು ಶಾಸಕನಾಗಿದ್ದ ಅವಧಿಯಲ್ಲಿ ಶಿಕ್ಷಣ ಕ್ಷೇತ್ರವನ್ನು ಪೂಜನೀಯ ಸ್ಥಾನದಿಂದ ನೋಡುತ್ತಿದ್ದೆ. ತಾಲೂಕಿನ ಅಭಿವೃದ್ಧಿ ಎಂದರೆ ಶಿಕ್ಷಣದ ಬಲವರ್ಧನೆ ಎಂದು ಭಾವಿಸಿ ಸೇವೆ ಮಾಡುತ್ತಿದ್ದೆ ಎಂದರು.

ಉಪವಿಭಾಗಾಧಿಕಾರಿ ಕಾವ್ಯ ರಾಣಿ ಮಾತನಾಡಿ, ಸರ್ಕಾರಿ ಶಾಲೆಗಳು ಪ್ರತಿಭಾವಂತ ಮಕ್ಕಳನ್ನು ನಿರ್ಮಿಸುವಲ್ಲಿ ಮುಂಚೂಣಿಯಲ್ಲಿವೆ ಎಂದರು.

ತಹಸೀಲ್ದಾರ್ ಮಂಜುನಾಥ್ ಮಾತನಾಡಿ, ನಮ್ಮ ಭವಿಷ್ಯದ ಮೂಲಬೇರು ಸರ್ಕಾರಿ ಶಾಲೆಗಳೇ ಆಗಿವೆ. ಅವುಗಳನ್ನು ಜೋಪಾನ ಮಾಡಬೇಕು ಎಂದರು.

ಈ ವೇಳೆ ಬಿಇಓ ಎಸ್.ಪಿ.ಮಹದೇವ, ಮುಖಂಡರಾದ ವಿ.ಪಿ.ಸಾಯಿನಾಥ್, ನಿಂಗರಾಜು, ರಾಘು, ಮುಖ್ಯಶಿಕ್ಷಕ ಡಾ.ಮಾಧು ಪ್ರಸಾದ್, ಹಿರಿಯ ಶಿಕ್ಷಕಿ ವೀಣಾ, ಶಿಕ್ಷಕ ನರಸಿಂಹ, ಎಸ್‌ಡಿಎಂಸಿ ಅಧ್ಯಕ್ಷೆ ಶುಭಾ, ಉಪಾಧ್ಯಕ್ಷ ಮಹ್ಮದ್ ರಫಿಕ್ ಸೇರಿದಂತೆ ಸದಸ್ಯರಾದ ಪಲ್ಲವಿ, ಚಂದನ, ನಿರ್ಮಲ, ಲಕ್ಷ್ಮಿ, ನರ್ಮದಾ, ಆಯಿಷಾ ಬಾನು, ಮಂಜುಳ, ನೂರ್ ಸಭಾ, ವೆಂಕಟೇಶ್, ಶಿವರಾಮ್, ವೆಂಕಟೇಶ್, ಸಂತೋಷ ಕುಮಾರ್, ಪ್ರತಾಪ್ ಕುಮಾರ್, ಆನಂದ, ರಾಜೇಗೌಡ, ಚಲುವರಾಜ್, ಜುಬೇರ ಖಾನ್, ಶಿಕ್ಷಕರಾದ ಜಯರಾಮೇಗೌಡ, ಆರೋಕ್ಯ ಮೇರಿ, ಡಾ.ಚಲುವರಾಜ್, ಸೋಮಸುಂದರ್, ವಸಂತ ಕುಮಾರಿ, ಕೃಷ್ಣಮೂರ್ತಿ, ಶೋಭಾ ರಾಣಿ, ಶಿಲ್ಪ, ರಾಧಿಕ, ಪುಷ್ಪ, ರಾಧ, ಶೃತಿ, ಸುಶೀಲಮ್ಮ, ಹೇಮ, ಸೌಮ್ಯ, ರೂಪ, ನಾಗಮ್ಮ ಇದ್ದರು.


ಕಾರ್ಯಕ್ರಮದಲ್ಲಿ ಎಂಎಲ್‌ಸಿ ಡಿ.ತಿಮ್ಮಯ್ಯ ಹಾಗೂ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಕುಡಿಯುವ ನೀರು ಪೂರೈಕೆಗೆ ಒತ್ತಾಯಿಸಿ ಪ್ರತಿಭಟನೆ

ನಂಜನಗೂಡು, ಫೆ.10– ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಒತ್ತಾಯಿಸಿ ತಾಲೂಕಿನ ಹಲ್ಲಹಳ್ಳಿ ಗ್ರಾಮದ 6 ಮತ್ತು 7ನೇ ಬ್ಲಾಕ್ ನಿವಾಸಿಗಳು ಮಂಗಳವಾರ ಗ್ರಾಪಂಗೆ ಮುತ್ತಿಗೆ ಹಾಕಿ ಪ್ರತಿಭಟಿಸಿ, ಸಿಬ್ಬಂದಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಯ ಕರ್ನಾಟಕ ಸಂಘಟನೆ ಅಧ್ಯಕ್ಷ ಕಾಶಿ ಜವರನಾಯಕ ಮಾತನಾಡಿ, 15 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇರುವ ಹಲ್ಲಹಳ್ಳಿಗೆ ಸಮರ್ಪಕ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ. ಕಳೆದ 2 ತಿಂಗಳಿಂದ ಗ್ರಾಮದ 6 ಮತ್ತು 7ನೇ ಬ್ಲಾಕ್‌ಗಳಿಗೆ ವಾರಕ್ಕೊಮ್ಮೆ ಕುಡಿಯುವ ನೀರು ಪೂರೈಸಲಾಗುತ್ತಿದೆ. ಈ ಬಗ್ಗೆ ಹಲವು ಬಾರಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಹಲ್ಲಹಳ್ಳಿಯಲ್ಲಿ ತಾಲೂಕಿನ 124 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಘಟಕವಿದ್ದರೂ, ಸ್ಥಳೀಯರಿಗೆ ಮಾತ್ರ ಸಮರ್ಪಕ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಸಮರ್ಪಕ ಕುಡಿಯುವ ನೀರು ಪೂರೈಸದಿದ್ದರೇ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಪ್ರತಿಭಟನಾಕಾರರ ಮನವಿ ಸ್ವೀಕರಿಸಿ ಮಾತನಾಡಿದ ಪಿಡಿಓ ಶ್ರೀಧರ್, ಕುಡಿಯುವ ನೀರಿನ ಪೈಪ್‌ಗಳನ್ನು ಬದಲಾಯಿಸುತ್ತಿರುವುದರಿಂದ ಕುಡಿಯುವ ನೀರು ಪೂರೈಕೆಯಲ್ಲಿ ಸಮಸ್ಯೆಯಾಗಿದೆ. ದುರಸ್ಥಿ ಕಾರ್ಯ ಪೂರ್ಣಗೊಳ್ಳುವವರೆಗೆ ತಾತ್ಕಾಲಿಕವಾಗಿ ಕುಡಿಯುವ ನೀರಿನ ಟ್ಯಾಂಕರ್‌ಗಳ ಮೂಲಕ ಬಡಾವಣೆಗಳಿಗೆ ನೀರು ಪೂರೈಸಲು ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಮಾಜಿ ಸದಸ್ಯ ಸೋಮ ಶೇಖರ್, ಮಲ್ಲಿಕಾರ್ಜುನ ಮಂಜುನಾಥ್, ಸಿದ್ದನಾಯ್ಕ, ಗೋಪಾಲ್, ನಾಗರಾಜ್ ನಾಯಕ, ಬಸವರಾಜು, ಶಿವನಂಜ ಮತ್ತಿತರರಿದ್ದರು.


ಕುಡಿಯುವ ನೀರು ಪೂರೈಕೆಗೆ ಒತ್ತಾಯಿಸಿ ಹಲ್ಲಹಳ್ಳಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ವಿಜೃಂಭಣೆಯ ಚಂದ್ರಮೌಳೇಶ್ವರ ಮಲ್ಲಿಕಾರ್ಜುನಸ್ವಾಮಿ ಜಾತ್ರೆ


ಚಂದ್ರಮೌಳೇಶ್ವರ ಮಲ್ಲಿಕಾರ್ಜುನಸ್ವಾಮಿ ಜಾತ್ರಾ ಮಹೋತ್ಸವ ನಡೆಯಿತು.

ಹೆಚ್.ಡಿ.ಕೋಟೆ, ಫೆ.10– ತಾಲೂಕಿನ ಮಾದಾಪುರ ಬೆಟ್ಟದ ಮೇಲಿರುವ ಚಂದ್ರಮೌಳೇಶ್ವರ ಮಲ್ಲಿಕಾರ್ಜುನಸ್ವಾಮಿ ಜಾತ್ರೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಸೋಮವಾರ ರಾತ್ರಿ 10 ಗಂಟೆಗೆ ದೇವಾಲಯದ ಸಮೀಪ ಹರಿಯುವ ಕಪಿಲಾ ನದಿಯಿಂದ ನಂದಿಧ್ವಜ, ವೀರಗಾಸೆ, ಮಂಗಳವಾದ್ಯ, ಪೂಜಾಕುಣಿತ, ಚಂಡೆವಾದ್ಯ, ತಮಟೆ, ಹುಲಿವಾಹನ, ಸತ್ತಿಗೆ ಸೂರಪಾನಿಗಳೊಂದಿಗೆ ಮಂಗಳವಾರ ಬೆಳಗ್ಗಿನ ಜಾವ 4 ಗಂಟೆವರಗೆ ಹಾಲರವಿ ಸೇವೆ ನಡೆಯಿತು. ಹಾಲರವಿ ಸೇವೆಯುದ್ದಕ್ಕೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮಟೆ ಹಾಗೂ ಮಂಗಳವಾದ್ಯದ ಸದ್ದಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು.

ನುತರ ದೇವಾಲಯದಲ್ಲಿ ವಿಶೇಷ ಪೂಜಾ ಪುನಸ್ಕಾರಗಳು ಜರುಗಿದವು. ಮಂಗಳವಾರ ಬೆಳಗ್ಗೆ ಮಾದಾಪುರ, ಹೈರಿಗೆ ಹೆಚ್.ಮಟಕೆರೆ, ಹೊಮ್ಮರಗಳ್ಳಿ, ಕೋಳಗಾಲ, ಚಕ್ಕೂರು, ಬೆಳತ್ತೂರು ಸೇರಿದಂತೆ ಸುತ್ತಮುತ್ತಲ ಹಲವು ಗ್ರಾಮದ ಭಕ್ತಾದಿಗಳು ಕೊಂಡ ವೀಕ್ಷಣೆಗೆ ಜಮಾಯಿಸಿದ್ದರು. ಇದೇ ವೇಳೆ ಚಂದ್ರಮೌಳೇಶ್ವರ ಮಠದ ಪೀಠಾಧ್ಯಕ್ಷ ಮಲ್ಲಿಕಾರ್ಜುನ ಸ್ವಾಮೀಜಿಗಳ ನೇತೃತ್ವದಲ್ಲಿ ಬೆಳಗ್ಗೆ 11 ಗಂಟೆ ವೇಳೆಗೆ ಮಲ್ಲಿಕಾರ್ಜುನಸ್ವಾಮಿ ರುದ್ರ ಕೊಂಡೋತ್ಸವ ಜರುಗಿತು. ವೀರಭದ್ರ ಕುಣಿತದಾರಿ ಹಾಗೂ ಚಕ್ಕೂರಿನ ಗುಡ್ಡಪ್ಪ ಕೊಂಡ ಹಾಯ್ದರು.

ಬಳಿಕ ಬೆಟ್ಟವನ್ನೇರಿದ ಭಕ್ತರು ಬೆಟ್ಟದ ಮೇಲಿನ ಮಲ್ಲಿಕಾರ್ಜುನಸ್ವಾಮಿಗೆ ವಿಶೇಷ ಪೂಜೆ ನೆರವೇರಿಸಿ ದರ್ಶನ ಪಡೆದರು. ಕೊಂಡೋತ್ಸವ ಅಂಗವಾಗಿ ಮಾದಾಪುರ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಜಾನುವಾರುಗಳನ್ನು ಸಿಂಗರಿಸಿ ಮಾದಾಪುರ ಬೆಟ್ಟಕ್ಕೆ ಕರೆತಂದು ವಿಶೇಷ ಪೂಜೆ ಸಲ್ಲಿ ಸಿದರು. ಇದೇ ವೇಳೆ ಸಾವಿರಾರು ಭಕ್ತರಿಗೆ ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ಅವರ ನೇತೃತ್ವದಲ್ಲಿ ಅನ್ನದಾನ ನಡೆಸಲಾಯಿತು.

ಮಾನವನ ಮಾನಸಿಕ ನೆಮ್ಮದಿಗೆ ದೇವಾಲಯಗಳು ಸಹಕಾರಿ

ವಾಟಾಳು ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯ

ತಿ.ನರಸೀಪುರ, ಫೆ.10– ಸಮಾಜದಲ್ಲಿ ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯಗಳಿಗೆ ಸಹಕಾರ ನೀಡುವ ಮೂಲಕ ಜನರಲ್ಲಿ ಸಾಮರಸ್ಯ ಬೆಸೆಯುವ ಜೊತೆಗೆ ಭಕ್ತಿಭಾವ ಬೆಳೆಸಿ ಮಾನಸಿಕ ನೆಮ್ಮದಿ ಮೂಡಿಸಲು ದೇವಾಲಯಗಳು ಸಹಕಾರಿ ಎಂದು ವಾಟಾಳು ಸೂರ್ಯ ಸಿಂಹಾಸನ ಮಠದ ಪೀಠಾಧ್ಯಕ್ಷ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಬನ್ನಹಳ್ಳಿಹುಂಡಿ ಗ್ರಾಮದ ಶ್ರೀಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಮೊದಲ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಹದೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿ ಆಶೀರ್ವಚನ ನೀಡಿ ಮಾತನಾಡಿದ ಅವರು, ದೇವಾಲಯಗಳು ಧಾರ್ಮಿಕ ಹಾಗೂ ಆಧ್ಯಾತ್ಮಿಕ ಚಟುವಟಿಕೆಗಳ ತಾಣವಾಗಿದ್ದು, ಅವುಗಳನ್ನು ಉತ್ತಮ ಸ್ಥಿತಿಯಲ್ಲಿರಿಸಿಕೊಳ್ಳುವುದು ಸಮಾಜದ ಪ್ರತಿಯೊಬ್ಬರ ಕರ್ತವ್ಯ ಎಂದರು.

ನಮ್ಮ ಧರ್ಮದ ಬಹುತೇಕ ಧಾರ್ಮಿಕ ಚಟುವಟಿಕೆಗಳ ಮುಖ್ಯ ಕೇಂದ್ರ ದೇವಸ್ಥಾನಗಳಾಗಿರುತ್ತವೆ. ಹೀಗಾಗಿ ಪ್ರತಿಯೊಂದು ಹಳ್ಳಿಯಲ್ಲಿ ಒಂದಲ್ಲಾ ಒಂದು ದೇವಾಲಯಗಳು ಇದ್ದೇ ಇರುತ್ತವೆ. ದೇವಸ್ಥಾನದಲ್ಲಿ ಕೆಲಕಾಲ ಕುಳಿತುಕೊಳ್ಳುವುದರಿಂದ ಮನಸ್ಸು ಶಾಂತವಾಗುತ್ತದೆ. ಮನಸ್ಸು ಶಾಂತವಾದಾಗ ಏನು ಮಾಡಬೇಕು ಏನು ಮಾಡಬಾರದು ಎಂಬುದನ್ನು ಅವಲೋಕನ ಮಾಡುತ್ತದೆ. ಆ ಸ್ಥಳದಲ್ಲಿ ಯಾವುದೇ ಕೆಟ್ಟ ಆಲೋಚನೆಗಳು ಮನಸ್ಸಿಗೆ ಬರುವುದಿಲ್ಲ ಮನಸ್ಸು ಒಳ್ಳೆಯ ಆಲೋಚನೆ ಮಾಡುತ್ತದೆ ಎಂದರು.

ದೇವಸ್ಥಾನದ ಮೊದಲ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದಲೇ ಶ್ರೀಮಲೆ ಮಹದೇಶ್ವರ ಸ್ವಾಮಿಯವರಿಗೆ ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ಬೆಳಗ್ಗೆ ಗಣಪತಿ ಹೋಮ, ರುದ್ರಾಭಿಷೇಕ ಹಾಗೂ ಮಹಾ ಮಂಗಳಾರತಿ ಮಾಡಲಾಯಿತು. ಈ ವೇಳೆ ತಾಲೂಕಿನ ವಿವಿಧೆಡೆಗಳಿಂದ ಆಗಮಿಸಿದ್ದ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಶಾಲಾ ಮಕ್ಕಳು ಹಾಗೂ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮಹಿಳೆಯರು, ಮಕ್ಕಳು ತಂಡೋಪತಂಡವಾಗಿ ದೇವಸ್ಥಾನಕ್ಕೆ ಆಗಮಿಸಿ ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು. ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ದೇವಸ್ಥಾನವನ್ನು ವಿವಿಧ ಹೂವುಗಳಿಂದ ಅಲಂಕರಿಸಲಾಗಿತ್ತು. ಸಂಜೆ ಗ್ರಾಮದಲ್ಲಿ ಹುಲಿವಾಹನ ಮೆರವಣಿಗೆ ಅದ್ಧೂರಿಯಾಗಿ ನಡೆಯಿತು. ಅಲ್ಲದೇ ಹಾಲರವಿ ಉತ್ಸವ ಹಾಗೂ ಬಸವೇಶ್ವರ ಭಜನಾ ಸಂಘದಿಂದ ಭಜನೆ ನಡೆಯಿತು.

ಈ ವೇಳೆ ವಾಟಾಳು ಮಠದ ಕಿರಿಯ ಶ್ರೀಗಳು, ಹೊಸೂರುಹುಂಡಿ ದಾಸೋಹ ಮಠದ ರಾಜಶೇಖರ ಸ್ವಾಮೀಜಿ, ನಿಲಸೋಗೆ ಭಿಕ್ಷದ ಮಠದ ಮಲ್ಲಪ್ಪ ಸ್ವಾಮೀಜಿ, ಆಲಗೂಡು ಪಿಎಸಿಎಸ್ ಅಧ್ಯಕ್ಷ ಹೆಳವರ ಹುಂಡಿ ನಟರಾಜು, ಪುರಸಭೆ ಮಾಜಿ ಸದಸ್ಯೆ ರೂಪಾ ಪರಮೇಶ್ ಸೇರಿದಂತೆ ಗ್ರಾಮದ ಯಜಮಾನರು, ಗ್ರಾಮಸ್ಥರು ಹಾಜರಿದ್ದರು.


ಬನ್ನಹಳ್ಳಿಹುಂಡಿಯಲ್ಲಿ ಶ್ರೀಮಹದೇಶ್ವರಸ್ವಾಮಿ ದೇವಸ್ಥಾನದ ಮೊದಲನೇ ವಾರ್ಷಿಕೋತ್ಸವ ನಡೆಯಿತು.

ಕ್ರಿಕೆಟ್ ಪಂದ್ಯಾವಳಿ ಉದ್ಘಾಟನೆ


ನಂಜನಗೂಡು ತಾಲೂಕಿನ ಹೆಜ್ಜಿಗೆ ಗ್ರಾಮದಲ್ಲಿ ಜೋಡಿ ಮಾರಮ್ಮ ಹಬ್ಬದ ಪ್ರಯುಕ್ತ ನಡೆದ ಸುನೀಲ್ ಬೋಸ್ ಕ್ರಿಕೆಟ್ ಪಂದ್ಯಾವಳಿಯನ್ನು ಸಂಸದ ಸುನೀಲ್ ಬೋಸ್ ಬ್ಯಾಟ್ ಬೀಸುವ ಮೂಲಕ ಉದ್ಘಾಟಿಸಿದರು.

ಶಾರ್ಟ್ ಸರ್ಕ್ಯೂಟ್: ಲಕ್ಷಾಂತರ ರೂ. ವಸ್ತುಗಳು ಭಸ್ಮ

ಹೆಚ್.ಡಿ.ಕೋಟೆ, ಫೆ.10– ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಸುಟ್ಟು ಹೋಗಿರುವ ಘಟನೆ ಸೋಮವಾರ ರಾತ್ರಿ ಪಟ್ಟಣದ ಎಸ್‌ಬಿಐ ಬ್ಯಾಂಕ್ ಎದುರಿನ ಶ್ರೀವಿನಾಯಕ ಜೆರಾಕ್ಸ್ ಅಂಗಡಿಯಲ್ಲಿ ನಡೆದಿದೆ.

ಶ್ರೀವಿನಾಯಕ ಜೆರಾಕ್ಸ್ ಅಂಗಡಿ ಮಾಲೀಕ ಲೋಕೇಶ್ ಅವರು ಎಂದಿನಂತೆ ಅಂಗಡಿ ಮುಚ್ಚಿ ಮನೆಗೆ ತೆರಳಿದ್ದರು. ಬಳಿಕ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಸಂಭವಿಸಿದ ಪರಿಣಾಮ ಅಂಗಡಿ ಒಳಗೆ ಹೊಗೆ ಕಾಣಿಸಿಕೊಂಡಿದೆ. ಇದನ್ನು ಗಮನಿಸಿದ ಬ್ಯಾಂಕ್ ಸೆಕ್ಯೂರಿಟಿ ಗಾರ್ಡ್ ಲೋಕೇಶ್ ಅವರಿಗೆ ಫೋನ್ ಮಾಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಆ ವೇಳೆಗಾಗಲೇ ಕಂಪ್ಯೂಟರ್, ಮೂರು ಜೆರಾಕ್ಸ್ ಯಂತ್ರಗಳು, ಫ್ರಿಡ್ಜ್, ಬುಕ್ಸ್, ಲೇಖನ ಸಾಮಗ್ರಿಗಳು ಸೇರಿದಂತೆ 20 ಲಕ್ಷಕ್ಕೂ ಹೆಚ್ಚು ಮೌಲ್ಯದ ವಸ್ತುಗಳು ಸುಟ್ಟು ಹೋಗಿದ್ದವು.

ಈ ವೇಳೆ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಎಂ.ಜಿ.ಸೋಮಣ್ಣ, ಸಿಬ್ಬಂದಿಗಳಾದ ಗಣೇಶ್ ಮಾದರ್, ಅಶೋಕ್, ಮಂಜು, ಪ್ರಕಾಶ್, ಮುನಿಸಿದ್ದನಾಯಕ, ಬಾಲಕೃಷ್ಣ, ಯಲ್ಲಪ್ಪ, ರಾಹುಲ್, ಹೇಮಂತ್, ಸುನೀಲ್ ಕುಮಾರ್ ಇತರರಿದ್ದರು. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶಾರ್ಟ್ ಸರ್ಕ್ಯೂಟ್‌ನಿಂದ ವಸ್ತುಗಳು ಸುಟ್ಟು ಹೋಗಿರುವುದು.

ರಸ್ತೆ ಮರು ಡಾಂಬರೀಕರಣ, ಬಾಗೂರು ಅಣೆಕಟ್ಟೆ ಅಭಿವೃದ್ಧಿ ಸೇರಿದಂತೆ

5 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ನಂಜನಗೂಡು, ಫೆ.10– ತಾಲೂಕಿನ ಶಿರಾ–ನಂಜನಗೂಡು ರಾಜ್ಯ ಹೆದ್ದಾರಿಯಲ್ಲಿ 2 ಕೋಟಿ ವೆಚ್ಚದಲ್ಲಿ 2.6 ಕಿಮೀ ರಸ್ತೆ ಮರು ಡಾಂಬರೀಕರಣ ಹಾಗೂ ಬಾಗೂರು ಗ್ರಾಮದಲ್ಲಿ 3 ಕೋಟಿ ವೆಚ್ಚದಲ್ಲಿ ಬಾಗೂರು ಅಣೆಕಟ್ಟೆ ಅಭಿವೃದ್ಧಿ ಸೇರಿದಂತೆ 5 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.


ತಾಲೂಕಿನ ಬಾಗೂರು ಗ್ರಾಮದಲ್ಲಿ ಬಾಗೂರು ಅಣೆಕಟ್ಟೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, 1965ರಲ್ಲಿ ಮುಖ್ಯಮಂತ್ರಿಯಾಗಿದ್ದ ಎಸ್.ನಿಜಲಿಂಗಪ್ಪನವರು ಸುಮಾರು 800 ಎಕರೆ ಪ್ರದೇಶಕ್ಕೆ ನೀರಾವರಿ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಬಾಗೂರು ಗ್ರಾಮದಲ್ಲಿ ಅಣೆಕಟ್ಟೆ ನಿರ್ಮಿಸಿ ಈ ಭಾಗದ ರೈತರ ವ್ಯವಸಾಯ ಹಾಗೂ ಕುಡಿಯುವ ನೀರಿಗೆ ಅನುಕೂಲ ಕಲ್ಪಿಸಿದ್ದರು. ಆದರೆ ನಾಲೆಯಲ್ಲಿ ಹೂಳು ತುಂಬಿಕೊಂಡು ಜೊಂಡು ಬೆಳೆದು ನೀರು ಸರಾಗವಾಗಿ ಹರಿಯುತ್ತಿರಲಿಲ್ಲ. ಈ ಭಾಗ ಬರಗಾಡು ಮತ್ತು ಮಳೆಯಾಶ್ರಿತ ಪ್ರದೇಶವಾಗಿರುವ ಕಾರಣ ಸ್ಥಳೀಯ ಜನರು ಅಣೆಕಟ್ಟೆ ಪುನಶ್ಚೇತನಗೊಳಿಸಿ ಅಭಿವೃದ್ಧಿಪಡಿಸುವಂತೆ ಮನವಿ ಮಾಡಿದ್ದರು. ಅದರಂತೆ ಸಣ್ಣ ನೀರಾವರಿ ಸಚಿವ ಬೋಸರಾಜು ಅವರ ಮನವೊಲಿಸಿ 3 ಕೋಟಿ ಅನುದಾನ ತಂದು ಅಣೆಕಟ್ಟೆಯ 4.5 ಕಿಮೀ ಕಾಲುವೆ ಲೈನಿಂಗ್ ಹಾಗೂ ಹೂಳು, ಜಂಗಲ್ ತೆಗೆಯುವ ಕಾಮಗಾರಿ ನಡೆಸಲಾಗುತ್ತಿದೆ. ಅಲ್ಲದೇ ಅಣೆಕಟ್ಟೆ ನಾಲೆ ತೂಬಿಗೆ ಹೊಸದಾಗಿ ಗೇಟ್ ಅಳವಡಿಸಿ, ರಕ್ಷಣಾತ್ಮಕ ಗೋಡೆ ನಿರ್ಮಿಸಲಾಗುವುದು ಮತ್ತು ನಾಲೆ ಹಾದು ಹೋಗುವ ರಸ್ತೆಗಳಿಗೆ ಕಲ್ವರ್ಟ್‌ಗಳನ್ನು ನಿರ್ಮಿಸಲಾಗುವುದು. ಅಣೆಕಟ್ಟೆ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ 2 ಕೋಟಿ ಅನುದಾನ ಬೇಕಾಗಿದೆ. ಉಳಿದ ಅನುದಾನ ನೀಡಿ ಈ ಪ್ರದೇಶದ 800 ಎಕರೆ ಪ್ರದೇಶದ ರೈತರ ಜಮೀನುಗಳಿಗೆ ನೀರು ಒದಗಿಸಲಾಗುವುದು ಎಂದರು.

2 ಕೋಟಿ ವೆಚ್ಚದಲ್ಲಿ ಮರು ಡಾಂಬರೀಕರಣ: ಸಿಎಂ ಸಿದ್ದರಾಮಯ್ಯ ಮತ್ತು ಲೋಕೋಪಯೋಗಿ ಸಚಿವ ಜಾರಕಿಹೊಳಿ ಅವರು ಕಳೆದ ಸಾಲಿನಲ್ಲಿ ಕ್ಷೇತ್ರಕ್ಕೆ 15 ಕೋಟಿ ಅನುದಾನ ನೀಡಿದ್ದರು. ಈ ಅನುದಾನದಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಕಳೆದ 20 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ದೇವರಸನಹಳ್ಳಿ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಕಾಮಗಾರಿ ಮುಗಿಯುವ ಹಂತದಲ್ಲಿದೆ. ಅಲ್ಲದೇ 2 ಕೋಟಿ ರೂ. ವೆಚ್ಚದಲ್ಲಿ ಹುಲ್ಲಹಳ್ಳಿ–ನಂಜನಗೂಡು ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ. ಇದೀಗ 2 ಕೋಟಿ ರೂ. ವೆಚ್ಚದಲ್ಲಿ ಶಿರಾ–ನಂಜನಗೂಡು ರಾಜ್ಯ ಹೆದ್ದಾರಿಯ 2.6 ಕಿಮೀ ಉದ್ದದ ರಸ್ತೆಯನ್ನು ಮರು ಡಾಂಬರೀಕರಣ ಮಾಡಲಾಗುತ್ತಿದೆ. ಈ ಕಾಮಗಾರಿ ಸಮುದ್ರ ಶಾಲೆ ಮುಂಭಾಗದಿಂದ ಹೊರಳವಾಡಿ ಗೇಟ್‌ವರೆಗೆ ನಡೆಯಲಿದೆ. ಅಲ್ಲದೇ ಮುಳ್ಳೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆಗೊಂಡು ಟೆಂಡರ್ ಹಂತದಲ್ಲಿದ್ದು, ಶೀಘ್ರ ಕಾಮಗಾರಿ ಪ್ರಾರಂಭಿಸಲಾಗುವುದು ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಮುಖಂಡರಾದ ಕೂಡ್ಲಾಪುರ ರಾಜು, ಶ್ರೀನಿವಾಸ ಮೂರ್ತಿ, ವಿಜಯ್ ಕುಮಾರ್, ಚಿನ್ನದಗುಡಿಹುಂಡಿ ಕುಳ್ಳಯ್ಯ, ಶಿವಸ್ವಾಮಿ, ರಂಗದಾಸ್, ಗೋವಿಂದರಾಜು, ಬಸವೇಶ್ವರನಗರ ಬಸವಣ್ಣ, ಶಿವಪ್ಪದೇವರು, ಲೋಕೋಪಯೋಗಿ ಇಲಾಖೆ ಎಇಇ ರಮೇಶ್, ಎಇಇ ಬಸವರಾಜು, ಶಿವಪ್ರಸಾದ್, ಸಣ್ಣ ನೀರಾವರಿ ಇಲಾಖೆ ಎಇಇ ಅಜರುದ್ದೀನ್, ಸುಧಾ ಶಿವರಾಜು, ತಮ್ಮಯ್ಯಪ್ಪ, ರಾಜು, ಗುರುವಯ್ಯ, ರಂಗರಾಜು, ದೊರೆಸ್ವಾಮಿ, ಮಾದಶೆಟ್ಟಿ ಉಪಸ್ಥಿತರಿದ್ದರು.


ಬಾಗೂರು ಅಣೆಕಟ್ಟೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ ಚಾಲನೆ ನೀಡಿದರು.

ಹೆಚ್.ಪಿ.ಸುಬ್ಬರಾವ್ ನಿಧನ



ಹುಣಸೂರು, ಫೆ.10– ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಸದಸ್ಯ ಹೆಚ್.ಪಿ.ಸುಬ್ಬರಾವ್ ಉರುಫ್ ಪ್ರೆಸ್ ಸುಬ್ಬಣ್ಣ (73) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ತಾಲೂಕು ಕಚೇರಿ ಪಕ್ಕದಲ್ಲಿರುವ ಚಿರಶಾಂತಿ ಧಾಮದಲ್ಲಿ ಮಂಗಳವಾರ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಾರ್ವತಮ್ಮ



ಹುಣಸೂರು, ಫೆ10– ತಾಲೂಕಿನ ರತ್ನಪುರಿ ಗ್ರಾಮದ ನಿವಾಸಿ, ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ಮೂರ್ತಿ ಅವರ ಪತ್ನಿ ಪಾರ್ವತಮ್ಮ (65) ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರು ಪತಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಸ್ವಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ.

ಜವರಮ್ಮ



ಸರಗೂರು, ಫೆ10– ತಾಪಂ ಮಾಜಿ ಅಧ್ಯಕ್ಷ ಜೆಡಿಎಸ್ ತಾಲೂಕು ಅಧ್ಯಕ್ಷ ಜಿ.ಗೋಪಾಲಸ್ವಾಮಿ ಅವರ ತಾಯಿ ಜವರಮ್ಮ(78) ಸೋಮವಾರ ಸಂಜೆ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರಿಯರು, ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೈಬರ್ ಅಪರಾಧಗಳ ಬಗ್ಗೆ ಎಚ್ಚರವಿರಲಿ...!

ಅಧಿಕೃತ ಆ್ಯಪ್‌ಗಳನ್ನಷ್ಟೇ ಡೌನ್‌ಲೋಡ್ ಮಾಡಿಕೊಳ್ಳಿ

● ಸೈಬರ್ ಕ್ರೈಂ ಇನ್ಸ್‌ಪೆಕ್ಟರ್ ನಂದೀಶ್‌ಕುಮಾರ್ ಎಚ್ಚರಿಕೆ ● ಸಾಮಾಜಿಕ ಜಾಲತಾಣದಲ್ಲಿ ವೈಯಕ್ತಿಕ ವಿಚಾರಗಳ ಹಂಚಿಕೊಳ್ಳಬೇಡಿ



ಮೈಸೂರು ಜಿಪಂ ಸಭಾಂಗಣದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಐಎಸ್‌ಇಎ ಯೋಜನೆಯಡಿ 'ಸುರಕ್ಷಿತ ಇಂಟರ್‌ನೆಟ್ ದಿನ' ಆಚರಿಸಲಾಯಿತು.

ಮೈಸೂರು, ಫೆ.10(ಎಂಕೆ)– ತಂತ್ರಜ್ಞಾನ ಬೆಳೆದಂತೆ ಸೈಬರ್ ಅಪರಾಧಗಳು ಹೆಚ್ಚಾಗುತ್ತಿದ್ದು, ಅಧಿಕೃತ ಆ್ಯಪ್ ಸ್ಟೋರ್‌ಗಳಿಂದ ಮಾತ್ರವೇ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ ಮೈಸೂರು ನಗರ ಸೈಬರ್ ಕ್ರೈಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ನಂದೀಶ್‌ಕುಮಾರ್ ತಿಳಿಸಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಐಎಸ್‌ಇಎ ಯೋಜನೆಯಡಿ 'ಸುರಕ್ಷಿತ ಇಂಟರ್‌ನೆಟ್ ದಿನ'ದ ಅಂಗವಾಗಿ ಸ್ಮಾರ್ಟ್ ತಂತ್ರಜ್ಞಾನ, ಸುರಕ್ಷಿತ ಆಯ್ಕೆ, ಸುರಕ್ಷಿತ ಮತ್ತು ಜವಾಬ್ದಾರಿಯುತ ಎಐ(ಕೃತಕ ಬುದ್ಧಿಮತ್ತೆ) ಬಳಕೆ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇನ್‌ಸ್ಟಾಗ್ರಾಮ್, ಫೇಸ್ಬುಕ್ ಸೇರಿದಂತೆ ಇನ್ನಿತರೆ ಸಾಮಾಜಿಕ ಜಾಲತಾಣಗಳ ಮೂಲಕ ಸೈಬರ್ ವಂಚನೆಗಳಿಗೆ ಒಳಗಾಗಿ ಹೆಚ್ಚು ಜನರು ಮೋಸ ಹೋಗುತ್ತಿದ್ದಾರೆ. ಆದ್ದರಿಂದ ಸೈಬರ್ ಕ್ರೈಂ ಕುರಿತು ಶಾಲಾ ಮಟ್ಟದಿಂದಲೂ ವ್ಯಾಪಕ ಜಾಗೃತಿ ಮೂಡಿಸಬೇಕಿದೆ ಎಂದರು.

ಮುಖ್ಯವಾಗಿ ಸಾಮಾಜಿಕ ಜಾಲತಾಣದಲ್ಲಿ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳಬಾರದು. ಎಐ ರೂಪಿತ ರೀಲ್ಸ್‌ಗಳನ್ನು ಅತೀ ಹೆಚ್ಚು ಫಾರ್ವರ್ಡ್ ಮಾಡಲಾಗುತ್ತಿದೆ. ಇದರಿಂದ ಸುಳ್ಳನ್ನು ಸತ್ಯವೆಂದು ನಂಬಿ ಮೋಸ ಹೋಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಹಾಗೆಯೇ ಸಾಮಾಜಿಕ ಜಾಲತಾಣ ವೀಕ್ಷಣೆ ಮಾಡುವಾಗ ತೋರಿಸುವ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಾರದು. ಅಧಿಕೃತ ಆ್ಯಪ್ ಸ್ಟೋರ್‌ಗಳಿಂದ ಮಾತ್ರವೇ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಸಾಮಾಜಿಕ ಜಾಲತಾಣದಲ್ಲಿ ಗೌಪ್ಯತಾ ಸೆಟ್ಟಿಂಗ್ ಬಳಕೆ ಮಾಡಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ 5ನೇ ಸ್ಥಾನ: ಸೈಬರ್ ಕ್ರೈಂ ಅಪರಾಧದಲ್ಲಿ ದೇಶದಲ್ಲಿ ತಮಿಳುನಾಡು ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ 5ನೇ ಸ್ಥಾನದಲ್ಲಿದೆ. ಮೈಸೂರು ನಗರದಲ್ಲಿಯೂ ದಿನನಿತ್ಯ ಒಂದಲ್ಲ ಒಂದು ಬಗೆಯ ಸೈಬರ್ ವಂಚನೆಗಳಾಗುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಸುಮಾರು 48 ಕೋಟಿ ರೂ. ವಂಚನೆಯಾಗಿದೆ ಎಂದು ಎಚ್ಚರಿಸಿದರು.

ಶಿಕ್ಷಣ ಅಗತ್ಯ: ಸಹಾಯಕ ಪ್ರಾಧ್ಯಾಪಕಿ ಶಿಲ್ಪಾ ಮಾತನಾಡಿ, ಪ್ರಮುಖ ಕೈಗಾರಿಕಾ ಸಂಶೋಧನಾ ಸಂಸ್ಥೆಯೊಂದರ ಅಧ್ಯಯನದ ಪ್ರಕಾರ ಎಲ್ಲಾ ಸೈಬರ್ ದಾಳಿಗಳು ಶೇ.90 ರಷ್ಟು ಮಾನವ ನಿರ್ಲಕ್ಷ್ಯದಿಂದಲೇ ಉಂಟಾಗುತ್ತಿವೆ. ಆದ್ದರಿಂದ ಸುರಕ್ಷಿತ ಮತ್ತು ಜವಾಬ್ದಾರಿಯುತ ಇಂಟರ್‌ನೆಟ್ ಬಳಕೆಯ ಬಗ್ಗೆ ಬಳಕೆದಾರರನ್ನು ಜಾಗೃತಗೊಳಿಸಬೇಕು. ಉತ್ತಮ ಅಭ್ಯಾಸಗಳನ್ನು ಉತ್ತೇಜಿಸಿ ಸೈಬರ್ ಬೆದರಿಕೆ ಮತ್ತು ವಂಚನೆಗಳನ್ನು ತಗ್ಗಿಸುವ ನಿಟ್ಟಿನಲ್ಲಿ ಬಳಕೆದಾರರಿಗೆ ಶಿಕ್ಷಣ ನೀಡಬೇಕು ಎಂದು ತಿಳಿಸಿದರು.

ಜಿಪಂ ಆಡಳಿತ ಉಪ ಕಾರ್ಯದರ್ಶಿ ಬಿ.ಎಂ.ಸವಿತ, ಅಭಿವೃದ್ಧಿ ಉಪ ಕಾರ್ಯದರ್ಶಿ ಭೀಮಪ್ಪ ಮುಖ್ಯ ಯೋಜನಾ ಅಧಿಕಾರಿ ಕೆ.ಬಿ.ಪ್ರಭುಸ್ವಾಮಿ, ಮುಖ್ಯ ಲೆಕ್ಕಾಧಿಕಾರಿ ಸಿದ್ದಗಂಗಮ್ಮ, ಸೈಬರ್ ಕ್ರೈಂ ಇನ್ಸ್‌ಪೆಕ್ಟರ್ ಮಹೇಶ್, ಕುಮಾರ್, ತಾಲೂಕು ಮಟ್ಟದ ಅಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತೀ ಟೀಚರ್(ಕ) + ಮನಶಂಕರ ವರಪ್ರಸಾದ್ (ತೆ)	1+3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ಕಸಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮರ್ದಾನಿ–3 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ವಿತ್ ಲವ್ (ತ)	4 ಪ್ರದರ್ಶನಗಳು
ಸಂಗಂ	
ಕರಿಕಾಡ (ಕ) + ಜೆ.ಸಿ.(ಕ)	2+2 ಪ್ರದರ್ಶನಗಳು
ಲಿಡೋ	
ಕರಗ (ಕ) + ಶಿವಲೀಲಾ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾವುತ (ಕ)	4 ಪ್ರದರ್ಶನಗಳು

ಜೂಜು ಅಡ್ಡೆ ಮೇಲೆ ಸಿಸಿಬಿ ಪೊಲೀಸರ ದಾಳಿ ; 10 ಮಂದಿ ವಿರುದ್ಧ ಕ್ರಮ

ಪಣಕ್ಕಿಟ್ಟಿದ್ದ 17,400 ರೂ. ವಶಕ್ಕೆ

ಮೈಸೂರು,ಫೆ.10(ಪಿಎಂ)– ಜೂಜು ಅಡ್ಡೆ ಮೇಲೆ ದಾಳಿ ನಡೆಸಿದ ಸಿಸಿಬಿ ಪೊಲೀಸರು, 10 ಮಂದಿ ವಿರುದ್ಧ ಕ್ರಮ ಜರುಗಿಸಿದ್ದು, ಜೂಜಾಟಕ್ಕೆ ಪಣಕ್ಕಿಟ್ಟಿದ್ದ 17,400 ರೂ. ವಶಪಡಿಸಿಕೊಂಡಿದ್ದಾರೆ.

ನಗರದ ಸಿಸಿಬಿ ಪೊಲೀಸರು ಮಂಗಳವಾರ ಖಚಿತ ಮಾಹಿತಿ ಮೇರೆಗೆ ವಿಜಯನಗರ ಠಾಣಾ ವ್ಯಾಪ್ತಿಯ ಹೂಟಗಳ್ಳಿ ಎಸ್‌ಆರ್‌ಎಸ್ ಕಾಲೋನಿಯ ಹಳೆ ಕಟ್ಟಡವೊಂದರ ಮೇಲೆ ದಾಳಿ ನಡೆಸಿ, ಇಲ್ಲಿ ಅಂದರ್ ಬಾಹರ್ ಜೂಜಾಟ ಆಡುತ್ತಿದ್ದ 10 ಮಂದಿ ವಿರುದ್ಧ ಕ್ರಮ ಜರುಗಿಸಿದ್ದಾರೆ.

ಹೂಟಗಳ್ಳಿಯ ಕಿರಣ್ (47), ತಿಲಕ್ ನಗರದ ಆರ್.ಸುನೀಲ್ (32), ಅಗ್ರಹಾರದ ನೀಲಕಂಠಪ್ಪ (66), ರಾಮಕೃಷ್ಣನಗರದ ಎಸ್.ಗೋವಿಂದಸ್ವಾಮಿ (70), ಮಂಡಿ ಮೊಹಲ್ಲಾದ ಗಾಲಿಬ್ ಬೇಗ್ (38), ಮಂಡಿ ಮೊಹಲ್ಲಾ ನಿವಾಸಿಗಳಾದ ಗೋವಿಂದರಾಜು (40), ಎಸ್.ಸುನೀಲ್ (40), ಹಿನಕಲ್‌ನ ಪ್ರಕಾಶ್ (51), ಅಗ್ರಹಾರದ ಜುಬೇರ್ ಶರೀಫ್ (45), ಕೆಸರೆಯ ಸೋಮ (59) ಎಂಬುವರನ್ನು ವಶಕ್ಕೆ ಪಡೆದು, ಕ್ರಮ ಜರುಗಿಸಲಾಗಿದೆ. ಅಲ್ಲದೆ, ಇವರು ಪಣಕ್ಕಿಟ್ಟಿದ್ದ ನಗದನ್ನು ವಶಪಡಿಸಿಕೊಳ್ಳಲಾಗಿದೆ ತಾನು ಸದರಿ ಸ್ಥಳದಲ್ಲಿ ಜೂಜಾಟ ಆಡಿಸುತ್ತಿದ್ದ ಬಗ್ಗೆ ಹೂಟಗಳ್ಳಿಯ ಕಿರಣ್ ವಿಚಾರಣೆ ವೇಳೆ ಬಾಯಿಬಿಟ್ಟಿದ್ದಾನೆ. ಸಿಸಿಬಿ ಘಟಕದ ಪೊಲೀಸ್ ಇನ್ಸ್‌ಪೆಕ್ಟರ್ ನಾರಾಯಣಸ್ವಾಮಿ, ಪಿಎಸ್‌ಐ ಅನಿಲ್, ಎಎಸ್‌ಐಗಳಾದ ಜಗದೀಶ್, ಷಡ್ಷರಿ, ಸುರೇಶ್, ಸಿಬ್ಬಂದಿಗಳಾದ ಜಯರಾಂ, ರಾಘವೇಂದ್ರ ಈ ದಾಳಿಯಲ್ಲಿ ಪಾಲ್ಗೊಂಡಿದ್ದರು.

ಆಯಾಮೋತ್ಸವದಲ್ಲಿ

ಕು.ಅಪೂರ್ವ ಚಾಮುಂಡೇಶ್ವರಿ ಕಥಾ ವೈಭವದ ನೃತ್ಯ ಪ್ರದರ್ಶನ



ಮೈಸೂರು, ಫೆ.10(ಎಂಕೆ)– ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ವತಿಯಿಂದ ಆಯೋಜಿಸಿದ್ದ 'ಆಯಾಮೋತ್ಸವ'(ಸಂಗೀತ, ನೃತ್ಯ, ನಾಟಕಗಳ ಉತ್ಸವ)ದಲ್ಲಿ ವಿದುಷಿ ಕು.ಎಂ.ಎಸ್.ಅಪೂರ್ವ ಚಾಮುಂಡೇಶ್ವರಿ ಕಥಾ ವೈಭವದ ನೃತ್ಯ ಪ್ರದರ್ಶನ ನೀಡಿದರು.

ವಿದುಷಿ ಡಾ.ಎಸ್.ವಿ.ಶಾಂಭವಿ ಸ್ವಾಮಿ ಅವರ ಶಿಷ್ಯೆ ಹಾಗೂ ನಗರಪಾಲಿಕೆ ಮಾಜಿ ಸದಸ್ಯೆ ಸವಿತಾ ಮತ್ತು ಸುರೇಶ್ ದಂಪತಿ ಪುತ್ರಿಯಾದ ಕು.ಅಪೂರ್ವ ನೃತ್ಯ ಪ್ರದರ್ಶನಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಯಿತು. ಕಳೆದ 14 ವರ್ಷಗಳಿಂದ ಭರತನಾಟ್ಯ ಅಭ್ಯಾಸದಲ್ಲಿ ನಿರತರಾಗಿರುವ ಅಪೂರ್ವ, ಭರತನಾಟ್ಯ ರಂಗಪ್ರವೇಶ ಮಾಡಿದ್ದು, ವಿದ್ವತ್ ಪರೀಕ್ಷೆ ತಯಾರಿಯಲ್ಲಿದ್ದಾರೆ.

ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೂರನೇ ವರ್ಷದ ವಿದ್ಯಾರ್ಥಿಯಾಗಿರುವ ಅಪೂರ್ವ, ವಿದ್ಯಾಭ್ಯಾಸದ ಜೊತೆ ಜೊತೆಗೆ ಮೈಸೂರು ಸೇರಿದಂತೆ ರಾಜ್ಯದ ಹಲವೆಡೆ ಹತ್ತಾರು ಸಾಂಸ್ಕೃತಿಕ ವೇದಿಕೆಗಳಲ್ಲಿ ನೃತ್ಯ ಪ್ರದರ್ಶನ ನೀಡಿದ್ದಾರೆ. ಗೋವಿನ ಹಾಡು, ತ್ರಿಪುರ ತಾಂಡವ, ಜಯ ಸಂವರ್ಧನೆ, ಚಾಮುಂಡೇಶ್ವರಿ ಕಥಾ ವೈಭವ ನೃತ್ಯ ಪ್ರದರ್ಶನದ ಮೂಲಕ ಅಪಾರ ಮೆಚ್ಚುಗೆ ಪಡೆದಿದ್ದಾರೆ.

ಫೆ.14,15 ರಂದು ಹಿನಕಲ್ ಫ್ರೆಂಡ್ಸ್ ವತಿಯಿಂದ ವಾಲಿಬಾಲ್ ಪಂದ್ಯಾವಳಿ

ಮೈಸೂರು, ಫೆ.10(ಎಂಕೆ)– ಮೈಸೂರಿನ ಹಿನಕಲ್‌ನ ಕಲ್ಯಾಣಿ ಕೊಳದ ಬಳಿ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಫೆ.14 ಮತ್ತು 15ರಂದು ಹಿನಕಲ್ ಫ್ರೆಂಡ್ಸ್ ವತಿಯಿಂದ ರಾಜ್ಯಮಟ್ಟದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ.

ಶಾಸಕ ಕೆ.ಹರೀಶ್‌ಗೌಡ ಪಂದ್ಯಾವಳಿ ಉದ್ಘಾಟಿಸಲಿದ್ದು, ಶಾಸಕ ಡಿ.ರವಿಶಂಕರ್, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಅಂತರರಾಷ್ಟ್ರೀಯ ಖೋ ಖೋ ಪಟು ಚೈತ್ರ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ವಿಜೇತರಿಗೆ ಪ್ರಥಮ ಬಹುಮಾನ 40 ಸಾವಿರ ರೂ., ದ್ವಿತೀಯ ಬಹುಮಾನ 30 ಸಾವಿರ ರೂ., ತೃತೀಯ ಬಹುಮಾನ 20 ಸಾವಿರ ರೂ.ಹಾಗೂ ನಾಲ್ಕನೆ ಬಹುಮಾನ 10 ಸಾವಿರ ರೂ.ನಗದು ಬಹುಮಾನ ಇರಲಿದೆ. ಹೆಚ್ಚಿನ ಮಾಹಿತಿಗಾಗಿ 8904183146/9945274851/8792367831ಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ

ಮೈಸೂರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊರತೆ ಆಗದಂತೆ ಎಚ್ಚರ ವಹಿಸಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಸೂಚನೆ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಯಿತು.

ಮೈಸೂರು, ಫೆ.10(ಎಂಕೆ)– ಬೇಸಿಗೆ ಆರಂಭವಾಗಿದ್ದು, ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊರತೆ ಆಗದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಸಿದ ಅವರು, ಕೆಆರ್‌ಎಸ್ ಮತ್ತು ಕಬಿನಿ ಡ್ಯಾಂನಲ್ಲಿರುವ ನೀರಿನ ಲಭ್ಯತೆ ಗಮನಿಸಿದರೆ ಜೂನ್ ಅಂತ್ಯದವರೆಗೆ ನೀರು ಸಾಕಾಗಲಿದ್ದು, ಅನಗತ್ಯವಾಗಿ ನೀರು ಎಲ್ಲೂ ವ್ಯರ್ಥವಾಗದಂತೆ ಗಮನಹರಿಸಬೇಕು. ಹಾಗೂ ನೀರಿಗೆ ಅಗತ್ಯವಿದ್ದಾಗ ಕಬಿನಿಯಿಂದ ಚಾನೆಲ್ ಮೂಲಕ ನೀರನ್ನು ಕಾಲಕಾಲಕ್ಕೆ ಹರಿಸಿ ಕುಡಿಯುವ ಉದ್ದೇಶಕ್ಕೆ ಪೂರೈಸುವಂತೆ ಕಬಿನಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಯಾ ತಾಲೂಕುಗಳ ತಹಶೀಲ್ದಾರರು ತಾಲೂಕು ಮಟ್ಟದಲ್ಲಿ ಪ್ರತಿವಾರ ಕುಡಿಯುವ ನೀರಿನ ನಿರ್ವಹಣೆ ಕುರಿತು ಗ್ರಾಮೀಣ ಕುಡಿಯುವ ನೀರಿನ ಇಲಾಖೆ ಅಧಿಕಾರಿಗಳು ಹಾಗೂ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ಸೇರಿ ಸಭೆ ನಡೆಸಬೇಕು ಗೊಂದಲ ಅಥವಾ ಸಮಸ್ಯೆಗಳಿದ್ದರೆ ಸರಿಪಡಿಸಿಕೊಳ್ಳಬೇಕು ಎಂದರು.

ಬೇಸಿಗೆಯಲ್ಲಿ ಕಾಡ್ಗಿಚ್ಚು ಸಂಭವಿಸದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಅರಣ್ಯ ಇಲಾಖೆ ಹಾಗೂ ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕೈಗೊಳ್ಳಬೇಕು. ಕಳೆದ ವರ್ಷ ಚಾಮುಂಡಿ ಬೆಟ್ಟದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಈ ಬಾರಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಿ ಎಂದು ಸೂಚನೆ ನೀಡಿದರು.

ಗ್ರಾಮಗಳನ್ನು ಗುರ್ತಿಸಿ: ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್ ಮಾತನಾಡಿ, ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದಾದ ಗ್ರಾಮಗಳನ್ನು ಗುರ್ತಿಸಿ, ಸಮಸ್ಯೆ ಉಂಟಾಗುವುದಕ್ಕೂ ಮುನ್ನವೇ ಸಮರ್ಪಕವಾಗಿ ನೀರು ಪೂರೈಕೆ ಮಾಡಿ. ನೀರು ವ್ಯರ್ಥವಾಗದಂತೆ ನಲ್ಲಿಗಳಿಗೆ ಆಫ್ ಅಂಡ್ ಆನ್ ಕ್ಯಾಪ್‌ಗಳನ್ನು ಅಳವಡಿಸಬೇಕು. ಅಗತ್ಯವಿದ್ದರೆ, ಕೊಳವೆ ಬಾವಿಗಳನ್ನು ಕೊರೆಸಲು ಕ್ರಮ ವಹಿಸಲಾಗುವುದು ಎಂದರು. ಸಭೆಯಲ್ಲಿ ಪಾಲಿಕೆ ಆಯುಕ್ತ ಶೇಖ್‌ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ. ಪಿ.ಶಿವರಾಜು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದಲ್ಲಿ ಮುಂದುವರೆದ ಅಭಿವೃದ್ಧಿ ಕಾಮಗಾರಿ

ಫೆ13ರಂದು ಹೈಕೋರ್ಟ್‌ನಲ್ಲಿ ಅರ್ಜಿ ವಿಚಾರಣೆ

ಮೈಸೂರು, ಫೆ.10(ಆರ್‌ಕೆ)– ತೀವ್ರ ವಿರೋಧದ ನಡುವೆಯು ಮೈಸೂರಿನ ಚಾಮುಂಡಿಬೆಟ್ಟದಲ್ಲಿ 'ಪ್ರಸಾದ್' ಯೋಜನೆಯಡಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಯು ಸದ್ದಿಲ್ಲದೆ ನಡೆಯುತ್ತಿದೆ.

ಭಾನುವಾರ ಸಂಜೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಚಾಮುಂಡಿ ಬೆಟ್ಟಕ್ಕೆ ತೆರಳಿ ದೇವರ ದರ್ಶನ ಪಡೆದ ಬಳಿಕ ಪ್ರಗತಿಯಲ್ಲಿರುವ ಕಾಮಗಾರಿಯನ್ನು ವೀಕ್ಷಿಸಿದರು. ಈ ಸುದೀರ್ಘ ಕಾಮಗಾರಿಯಿಂದ ಲಕ್ಷಾಂತರ ಭಕ್ತರ ಭಾವನೆಗಳಿಗೆ ನೋವುಂಟಾಗಿದೆ ಎಂದು ಆರೋಪಿಸಿ, ಶ್ರೀ ಚಾಮುಂಡೇಶ್ವರಿ ಮಹಾ ಬಲೇಶ್ವರ ದೇವಸ್ಥಾನ ಸಂರಕ್ಷಣಾ ವೇದಿಕೆ ಸದಸ್ಯರುಗಳು ಮನವಿ ಸಲ್ಲಿಸಿದರು.

ಕಾಮಗಾರಿಯು ದೇವಾಲಯದ ಪರಂಪರೆ ಹಾಗೂ ಸಾಂಪ್ರದಾಯಿಕ ಸ್ವರೂಪಕ್ಕೆ ಮತ್ತು ಇಲ್ಲಿನ ಪರಿಸರ ಸೌಂದರ್ಯಕ್ಕೆ ಹಾನಿಯುಂಟು ಮಾಡುತ್ತಿದೆ ಎಂದು ವೇದಿಕೆ ಸದಸ್ಯ ಲೋಹಿತ್ ಅರಸ್ ಅವರು ಸಂಸದರಿಗೆ ತಿಳಿಸಿದರು. ಈ ಸಂಬಂಧ ದೆಹಲಿಯಲ್ಲಿರುವ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ವಹಿಸುವುದಾಗಿದೆ ಎಂದು ಯದುವೀರ್ ಭರವಸೆ ನೀಡಿದರು.

ಹೈಕೋರ್ಟ್ ವಿಚಾರಣೆ: ಈ ಮಧ್ಯೆ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರು ಚಾಮುಂಡಿ ಬೆಟ್ಟದ 'ಪ್ರಸಾದ್' ಯೋಜನೆಯನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ವಿಚಾರಣೆಯೂ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಫೆಬ್ರವರಿ 13ರಂದು ವಿಚಾರಣೆ ನಡೆಯಲಿದೆ. ಈ ನಡುವೆಯೂ ಬೆಟ್ಟದಲ್ಲಿ ಅಭಿವೃದ್ಧಿ ಕಾಮಗಾರಿ ಸದ್ದಿಲ್ಲದೇ ನಡೆಯುತ್ತಿದೆ. ಈ ಕುರಿತು ಇಂದು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ. ರೂಪ ಅವರು, ಹೈಕೋರ್ಟ್ ಅಲ್ಲಿ ಯಾವುದೇ ತಡೆಯಾಜ್ಞೆ ನೀಡಿಲ್ಲವಾದ್ದರಿಂದ 'ಪ್ರಸಾದ್' ಯೋಜನೆಯ ಕೆಲಸಗಳು ನಡೆಯುತ್ತಿವೆ ಎಂದರು.

ಬೆಂಗಳೂರು ಮೂಲದ ಕಾಮಗಾರಿ ಎಸ್‌ಎಮ್‌ಎಸ್ ಕಾರ್ಕಳ ಎಂಟರ್‌ಪ್ರೈಸಸ್‌ಗೆ ಕಾಮಗಾರಿಯ ಗುತ್ತಿಗೆ ವಹಿಸಲಾಗಿದ್ದು, ಕೇಂದ್ರ ಸರ್ಕಾರವು ಹಣ ಬಿಡುಗಡೆ ಮಾಡಿದೆ. ಯೋಜನೆಯನ್ನು ರಾಜ್ಯ ಪ್ರವಾಸೋದ್ಯಮ ಇಲಾಖೆಯು ಅನುಷ್ಠಾನಗೊಳಿಸುತ್ತಿದೆ. ಇದರಲ್ಲಿ ನಮ್ಮ ಪಾತ್ರವೇನೂ ಇರುವುದಿಲ್ಲವೆಂದು ರೂಪ ತಿಳಿಸಿದರು.

ವಿವಿಧ ಶಾಲಾ–ಕಾಲೇಜುಗಳಲ್ಲಿ ಅರಿವು ಕಾರ್ಯಕ್ರಮ



ಮೈಸೂರು ನಗರದ ವಿವಿಧ ಶಾಲಾ ಕಾಲೇಜುಗಳಲ್ಲಿ ಮೈಸೂರು ನಗರ ಪೊಲೀಸ್ ವತಿಯಿಂದ ಅರಿವು ಕಾರ್ಯಕ್ರಮ ನಡೆಸಲಾಯಿತು.

ಮೈಸೂರು,ಫೆ.10(ಪಿಎಂ)– ಮೈಸೂರು ನಗರವನ್ನು ಮಾದಕ ವಸ್ತು ಮುಕ್ತಗೊಳಿಸುವ ನಿಟ್ಟಿನಲ್ಲಿ ನಗರ ಪೊಲೀಸ್ ವತಿಯಿಂದ ಹಮ್ಮಿಕೊಂಡಿರುವ 'ವಿಮುಕ್ತಿ' ಅಭಿಯಾನದಡಿ ಮಂಗಳವಾರ ವಿವಿಧ ಶಾಲಾ–ಕಾಲೇಜುಗಳಲ್ಲಿ ಅರಿವು ಮೂಡಿಸಲಾಯಿತು.

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ವಿವಿ ಪುರಂ ಸರ್ಕಾರಿ ಪದವಿಪೂರ್ವ ಕಾಲೇಜು, ಸದ್ವಿದ್ಯಾ ಪದವಿ ಪೂರ್ವ ಕಾಲೇಜು, ಸಿಪಿಸಿ ಪಾಲಿಟೆಕ್ನಿಕ್ ಕಾಲೇಜು, ಕಲ್ಯಾಣಗಿರಿಯ ಎಇಟಿ ಪ್ರೌಢಶಾಲೆ, ಕೆಆರ್ ಪೊಲೀಸ್ ಠಾಣಾ ವ್ಯಾಪ್ತಿಯ ಬನುಮಯ್ಯ ಶಾಲೆ ಮತ್ತು ಬಾಲಕಿಯರ ಪದವಿಪೂರ್ವ ಕಾಲೇಜು, ಮಹಾರಾಣಿ ವಿಜ್ಞಾನ ಕಾಲೇಜು, ಕುವೆಂಪುನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು, ಜ್ಞಾನಗಂಗಾ ಶಾಲೆ, ವಿದ್ಯಾರಣ್ಯಪುರಂನ ನಾರಾಯಣ ಪದವಿ ಪೂರ್ವ ಕಾಲೇಜು, ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು ಟ್ರಿನಿಟಿ ಪ್ರಥಮ ದರ್ಜೆ ಕಾಲೇಜು, ಹೆಬ್ಬಾಳಿನ ಶೇಷಾದ್ರಿಪುರಂ ಕಾಲೇಜುಗಳಲ್ಲಿ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಆ ಮೂಲಕ 11 ಕಾಲೇಜು ಹಾಗೂ ಎರಡು ಶಾಲೆಗಳ ಸುಮಾರು 1400 ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಅಲ್ಲದೆ, ಸದರಿ ಶಿಕ್ಷಣ ಸಂಸ್ಥೆಗಳ ನೋಟಿಸ್ ಬೋರ್ಡ್ ಹಾಗೂ ಮುಖ್ಯದ್ವಾರ ಸೇರಿದಂತೆ ವಿವಿಧೆಡೆ ಸಹಾಯವಾಣಿ ಹೊಂದಿರುವ ವಿಮುಕ್ತಿ ಭಿತ್ತಿಪತ್ರಗಳನ್ನು ಅಂಟಿಸಲಾಯಿತು.

ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆಗೆ ಚಾಲನೆ

ರಕ್ತ ಹೀನತೆಯಿಂದ ಬಳಲುವ ಮಕ್ಕಳಿಗೆ ಮಾತ್ರೆ ವಿತರಣೆ



ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆಗೆ ಚಾಲನೆ ನೀಡಲಾಯಿತು.

ಮೈಸೂರು, ಫೆ10(ಎಂಕೆ)– ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ಜಿಲ್ಲಾಡಳಿತ, ಜಿಪಂ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆರ್‌ಸಿಹೆಚ್ ವಿಭಾಗದ ವತಿಯಿಂದ ಫೆ.16ರವರೆಗೆ ಹಮ್ಮಿಕೊಂಡಿರುವ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆಗೆ ಚಾಲನೆ ನೀಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸಿ.ಪಿ.ಕುಮಾರಸ್ವಾಮಿ ಮಾತನಾಡಿ, ರಾಷ್ಟ್ರೀಯ ಬಾಲ ಸ್ವಾಸ್ಥ್ಯ(ಆರ್‌ಬಿಎಸ್‌ಕೆ) ಕಾರ್ಯಕ್ರಮದ ಅಡಿಯಲ್ಲಿ ಹುಟ್ಟಿದ ಮಗುವಿನಿಂದ ಹಿಡಿದು 19 ವರ್ಷದೊಳಗಿನ ಬಾಲಕರವರೆಗೆ ವಿವಿದ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಿದ್ದೇವೆ ಎಂದರು.

ಜಿಲ್ಲೆಯಲ್ಲಿ 38 ಬಗೆಯ ವಿವಿಧ ಕಾಯಿಲೆಗಳ ಕುರಿತು ಪ್ರತಿವರ್ಷ 7 ಲಕ್ಷಕ್ಕೂ ಹೆಚ್ಚು ಮಕ್ಕಳನ್ನು ವಿವಿಧ ಕಾರ್ಯಕ್ರಮಗಳ ಮೂಲಕ ಸ್ಕ್ರೀನಿಂಗ್ ಮಾಡಲಾಗುತ್ತಿದೆ. ಅದೇ ರೀತಿ ರಾಷ್ಟ್ರೀಯ ಜಂತುಹುಳು ನಿವಾರಣೆ ಕಾರ್ಯಕ್ರಮದ ಮೂಲಕ ರಕ್ತಹೀನತೆಯಿಂದ ಬಳಲುತ್ತಿರುವ ಮಕ್ಕಳಿಗೆ ಜಂತುಹುಳು ಮಾತ್ರೆ ನೀಡಿ, ಮಕ್ಕಳ ಆರೋಗ್ಯ ವೃದ್ಧಿಸುವುದಾಗಿದೆ ಎಂದರು.

2014 ರಿಂದ ಇಲ್ಲಿಯವರೆಗೆ ರಾಷ್ಟ್ರೀಯ ಜಂತುಹುಳು ದಿನವನ್ನು ಆಚರಿಸಿಕೊಂಡು ಬರುತ್ತಿದ್ದು, 1 ರಿಂದ 2 ವರ್ಷದ ಮಕ್ಕಳಿಗೆ 200 ಎಂಜಿ ಜಂತುಹುಳು ಮಾತ್ರೆ ನೀಡುವುದು ಮತ್ತು 2 ವರ್ಷದಿಂದ 19 ವರ್ಷದ ಮಕ್ಕಳಿಗೆ 400 ಎಂಜಿ ಮಾತ್ರೆಗಳನ್ನು ವಿತರಣೆ ಮಾಡಲಾಗುತ್ತಿದೆ. ಮಾತ್ರೆಯನ್ನು ನುಂಗುವುದಕ್ಕಿಂತ ಮೊದಲು ಜಗಿದು ನುಂಗಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಈ ವರ್ಷ 7,80,800 ಮಕ್ಕಳು ಜಂತುಹುಳು ದಿನದಲ್ಲಿ ಭಾಗಿಯಾಗಿದ್ದು, ಮಕ್ಕಳಲ್ಲಿ ರಕ್ತಹೀನತೆ ಕೊರತೆ ನೀಗಿಸುವ ಜೊತೆಗೆ ಆರೋಗ್ಯ ವೃದ್ಧಿಯಾಗಲಿದೆ. ಜೀರ್ಣಕ್ರಿಯೆ ಉತ್ತಮವಾಗಲಿದೆ. ಆದ್ದರಿಂದ ಶಾಲಾ ಮಕ್ಕಳು ಕಡ್ಡಾಯವಾಗಿ ಸೇವಿಸಬೇಕು ಎಂದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಮೊಹಮ್ಮದ್ ಸಿರಾಜ್ ಅಹಮದ್, ಜಿಲ್ಲಾ ಕುಷ್ಠರೋಗ ನಿಯಂತ್ರಾಧಿಕಾರಿ ಡಾ.ಬೃಂದಾ, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ನಾಗರತ್ನ, ಪದವಿ ಪೂರ್ವ ಶಿಕ್ಷಣ ಇಲಾಖೆ ಶಾಖಾಧಿಕಾರಿ ರಮೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಪುಟ್ಟತಾಯಮ್ಮ, ಪ್ರಧಾನಮಂತ್ರಿ ಪೋಷಣ್ ಅಭಿಯಾನದ ಸಹಾಯಕ ನಿರ್ದೇಶಕ ಲಿಂಗರಾಜು, ಪಿಎಂಶ್ರೀ ಕೇಂದ್ರೀಯ ವಿದ್ಯಾಲಯ ಪ್ರಾಂಶುಪಾಲರಾದ ಆಶಾರಾಣಿ ಸಾಹು, ಪ್ರಕಾಶ್ ಮತ್ತಿತರರಿದ್ದರು.

ಚಾಮುಂಡಿ ಬೆಟ್ಟದ 'ಪ್ರಸಾದ್' ಕಾಮಗಾರಿ ವಿರೋಧಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಪ್ರತಿಭಟನೆ



ಚಾಮುಂಡಿ ಬೆಟ್ಟದ ಮೇಲೆ ನಡೆಯುತ್ತಿರುವ 'ಪ್ರಸಾದ್' ಯೋಜನೆಯ ಕಾಮಗಾರಿಯನ್ನು ವಿರೋಧಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಇಂದು ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಫೆ.10(ಜಿಎ)–ಚಾಮುಂಡಿ ಬೆಟ್ಟದ ಮೇಲೆ ನಡೆಯುತ್ತಿರುವ ಪ್ರಸಾದ್ ಯೋಜನೆಯ ಕಾಮಗಾರಿಯನ್ನು ವಿರೋಧಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಇಂದು ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಪಾರಂಪರಿಕತೆ ಉಳಿಸುವ ಜವಾಬ್ದಾರಿ ಸರ್ಕಾರದ ಹೊಣೆಯಾಗಿದ್ದು, ಆದರೆ ಬೇಲಿಯೇ ಎದ್ದು ಹೊಲ ಮೇಯುವಂತೆ ಆಗಿದೆ. ಚಾಮುಂಡಿಬೆಟ್ಟದ ಸುತ್ತ ಅರಣ್ಯ ಪ್ರದೇಶವಿದ್ದು, ಇಲ್ಲಿ ಯಾವುದೇ ಕಾಮಗಾರಿ ಮಾಡುವ ಮುನ್ನ ಅರಣ್ಯ ಇಲಾಖೆಯ ಅನುಮತಿ ಪಡೆಯಬೇಕು. ಆದರೆ, ಚಾಮುಂಡಿಬೆಟ್ಟ ಪ್ರಾಧಿಕಾರದ ಕಾರ್ಯದರ್ಶಿ ದರ್ಬಾರ್ ನಡೆಸುತ್ತಿದ್ದು, ಇವರ ತಾಳಕ್ಕೆ ಸಚಿವರು, ಸಂಸದರು, ಶಾಸಕರು ಕುಣಿಯುತ್ತಿದ್ದಾರೆ. ಮೈಸೂರಿನ ಇತಿಹಾಸ ತಜ್ಞರು, ಹೋರಾಟಗಾರರು, ಪರಿಸರವಾದಿಗಳು, ರಾಜಮನೆತನದವರು ಎಷ್ಟೇ ಆಕ್ಷೇಪಿಸಿ ಹೋರಾಟ ಮಾಡಿದರು ಸಹ ಯಾವುದಕ್ಕೂ ಬಗ್ಗದೆ 'ಪ್ರಸಾದ' ಕಾಮಗಾರಿ ಹೆಸರಿನಲ್ಲಿ ಹಣ ಲೂಟಿ ಮಾಡಿ ಪರಿಸರ ಹಾಳು ಮಾಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಪಾರಂಪರಿಕ ತಜ್ಞರು ಇದ್ದರೂ ಅವರಿಗೆ ಬಿಡಿಗಾಸಿನ ಬೆಲೆ ಇಲ್ಲದಂತಾಗಿದೆ. ನಮ್ಮ ರಾಜ್ಯವಲ್ಲದೆ ಬೇರೆ ರಾಜ್ಯದವರು ಸಹ ಧ್ವನಿ ಎತ್ತುತ್ತಿದ್ದಾರೆ ಇಷ್ಟೆಲ್ಲಾ ಆದರೂ ಸಹಾ ಜಿಲ್ಲಾ ಉಸ್ತುವಾರಿ ಸಚಿವರು ಮೌನವಾಗಿರುವುದು ಎಷ್ಟು ಸಮಂಜಸ. ಪ್ರಾಧಿಕಾರದ ಕಾರ್ಯದರ್ಶಿ ತೀರ್ಮಾನವೇ ಅಂತಿಮವಾದರೆ ಜನಪ್ರತಿನಿಧಿಗಳಿಗೆ ಕೆಲಸವಾದರೂ ಏನು. ಜಿಲ್ಲಾ ಉಸ್ತುವಾರಿ ಸಚಿವರು ರಾಜೀನಾಮೆ ನೀಡಿ, ಪ್ರಾಧಿಕಾರದ ಕಾರ್ಯದರ್ಶಿಗಳನ್ನೇ ಉಸ್ತುವಾರಿ ಸಚಿವರಾಗಿ ನೇಮಿಸಲಿ ಎಂದು ಕಿಡಿಕಾರಿದರು.

ಈಗಾಗಲೇ ಚಾಮುಂಡಿ ಬೆಟ್ಟ ಸುತ್ತ ಮುತ್ತ ಭೂಕಬಳಿಕೆ ಮಾಡಿ ಮನೆ ನಿರ್ಮಾಣ ಮಾಡಿದ್ದು, ಹೇಳುವವರು–ಕೇಳುವವರು ಇಲ್ಲದಂತಾಗಿದೆ. ಚಾಮುಂಡಿ ಬೆಟ್ಟ ಗ್ರಾಮ ಪಂಚಾಯಿತಿ ರಿಯಲ್ ಎಸ್ಟೇಟ್ ಕಚೇರಿಯಾಗಿದೆ. ಅರಣ್ಯ ಇಲಾಖೆಯವರು ಸಂಪೂರ್ಣವಾಗಿ ತಮ್ಮ ಕೆಲಸದಲ್ಲಿ ವಿಫಲವಾಗಿದ್ದಾರೆ. ಬೆಟ್ಟದ ಸಂಚಾರಿ ಮಾರ್ಗ ಅಲ್ಲಲ್ಲಿ ಕುಸಿಯುತ್ತಿದೆ ಬೆಟ್ಟದ ವಾಸ್ತವಾಂಶವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆಗಲಿ ಪ್ರಾಧಿಕಾರದ ಕಾರ್ಯದರ್ಶಿ ಆಗಲಿ ಸರ್ಕಾರದ ಗಮನಕ್ಕೆ ತಾರದೆ ಅವೈಜ್ಞಾನಿಕ ಕಾಮಗಾರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾ ಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಸಾಯಿ ಚಾಮರಾಜು, ಪ್ಯಾಲೇಸ್ ಬಾಬು,ಹರೀಶ್ ಚಿನ್ನಪ್ಪ, ಶಿವುಗೌಡ, ಮಾದಪ್ಪ ಸುನೀಲ್, ಗೋಪಿ,ಗೈಡ್ ಸ್ವಾಮಿ, ಚೆಲುವ 'ರಾಯಸ್ವಾಮಿ, ಹೊಣಕೆರೆ ಸ್ವಾಮಿ, ಎಲ್ಐಸಿ ಸಿದ್ದಪ್ಪ, ಗೋವಿಂದರಾಜು, ಬೀಡಾ ಬಾಬು, ರಮೇಶ್, ಮನೋಹರ್, ನಟರಾಜು, ರೈತ ಪರ್ವ ಅಧ್ಯಕ್ಷ ಅರುಣ್ ಕುಮಾರ್, ಪ್ರಧಾನ ಕಾರ್ಯದರ್ಶಿ ಡಾ.ಉಮಾಪತಿ ಮತ್ತಿತರರು ಪಾಲ್ಗೊಂಡಿದ್ದರು.

ಡಾ.ರಾಜ್ ಕುಮಾರ್ ರಸ್ತೆ ಉಳಿದ ಭಾಗ ದುರಸ್ತಿಗೊಳಿಸದಿದ್ದರೆ ನಿವಾಸಿಗಳಿಂದ ಹೋರಾಟದ ಎಚ್ಚರಿಕೆ

15 ದಿನಗಳ ಗಡುವು

ಮೈಸೂರು, ಫೆ.10(ಜಿಎ)–ಮೈಸೂರಿನ ಡಾ.ರಾಜ್‌ಕುಮಾರ್ ರಸ್ತೆಯನ್ನು 15 ದಿನದೊಳಗೆ ದುರಸ್ತಿಗೊಳಿಸದಿದ್ದರೆ ಹೋರಾಟ ಮಾಡುವುದಾಗಿ ಸ್ಥಳೀಯ ನಿವಾಸಿಗಳು ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಿವಾಸಿಗಳ ಮುಖಂಡರಾದ ಪ್ರೊ.ಸಿ.ಬಿ. ಬಸವರಾಜ್ ಮಾತನಾಡಿ, ನಗರದ ಯರಗನಹಳ್ಳಿ ವೃತ್ತದಿಂದ ಮಹದೇವಪುರಕ್ಕೆ ಸಂಪರ್ಕ ಕಲ್ಪಿಸುವ ಹಾಗೂ ಮೇರು ನಟ ಡಾ. ರಾಜ್‌ಕುಮಾರ್ ಹೆಸರನ್ನು ಹೊಂದಿರುವ ಸುಮಾರು 3 ಕಿ.ಮೀ ಉದ್ದದ ರಸ್ತೆಯಲ್ಲಿ ಒಂದಷ್ಟು ಭಾಗ ತೀವ್ರವಾಗಿ ಹದಗೆಟ್ಟಿದೆ. ಇದನ್ನು ಸರಿಪಡಿಸಬೇಕೆಂದು ಹಲವಾರು ಬಾರಿ ಮನವಿ ಸಲ್ಲಿಸಿದರೂ ಯಾರೂ ಸ್ಪಂದಿಸುತ್ತಿಲ್ಲ. ಹೀಗಾಗಿ ಇನ್ನು 15 ದಿನಗಳೊಳಗೆ ದುರಸ್ತಿಪಡಿಸದಿದ್ದಲ್ಲಿ ಪ್ರತಿಭಟನೆ ನಡೆಸಲು ಈ ರಸ್ತೆಗೆ ಹೊಂದಿಕೊಂಡ ವಿವಿಧ ಬಡಾವಣೆಗಳ ವಾಸಿಗಳು ನಿರ್ಧರಿಸಿದ್ದೇವೆ ಎಂದರು.

ಈ ರಸ್ತೆಗೆ ಡಾ. ರಾಜ್‌ಕುಮಾರ್ ರಸ್ತೆ ಎಂದು ಹೆಸರಿಟ್ಟಿದ್ದರೂ, ರಸ್ತೆಯ ಒಂದು ಭಾಗದಲ್ಲಿ ಹದಗೆಟ್ಟಿರುವುದನ್ನು ಸರಿ ಮಾಡದೇ ಇರುವುದು ಆ ಮಹಾನ್ ನಟನಿಗೆ ಅಪಮಾನವಾಗುತ್ತಿದೆ. ಈ ರಸ್ತೆಯಲ್ಲಿ ಒಂದು ಕಡೆ ಭೂ ವಿವಾದದ ಕಾರಣ ಸುಮಾರು 200 ಮೀಟರ್‌ನಷ್ಟು ದೂರ ಡಾಂಬರ್ ಹಾಕಿಲ್ಲ. ಈ ಭಾಗದಲ್ಲಿ ಹಿರಿಯ ನಾಗರಿಕರು ಹಾಗೂ ಮಹಿಳೆಯರು, ಮಕ್ಕಳು ಆತಂಕದಿಂದಲೇ ಸಾಗುವಂತಾಗುತ್ತಿದೆ. ಅನೇಕರು ಕೆಳಗೆ ಬಿದ್ದು ಗಾಯಗೊಂಡ ಘಟನೆಯೂ ಉಂಟು. ಹೀಗಿದ್ದರೂ ಸಂಬಂಧಿಸಿದವರು ಕ್ರಮ ಕೈಗೊಂಡಿಲ್ಲ ಎಂದು ಬೇಸರಿಸಿದರು.

ರಸ್ತೆಯ ದುಸ್ಥಿತಿ ಹಿನ್ನಲೆಯಲ್ಲಿ ಬಹುತೇಕ ವಾಹನಗಳು ಕಿರಿದಾದ ಕಾವೇರಿ ಮುಖ್ಯ ರಸ್ತೆಯಲ್ಲಿ ಸಾಗುತ್ತಿವೆ. ಇದರಿಂದ ಆ ಭಾಗದ ಜನತೆಗೆ ಕಿರಿಕಿರಿಯುಂಟಾಗುತ್ತಿದೆ. ರಾಜ್‌ಕುಮಾರ್ ರಸ್ತೆಯ ದುಸ್ಥಿತಿ ಬಗ್ಗೆ ಗಮನ ಸೆಳೆದರೆ ಶಾಸಕ ತನ್ವೀರ್‌ಸೇಠ್ ನ್ಯಾಯಾಲಯದಲ್ಲಿ ವಿವಾದವಿದೆ ಎನ್ನುತ್ತಾರೆ. ಆದರೆ ಇದನ್ನು ಬಗೆಹರಿಸುವುದು ಅವರಿಗೆ ಕಷ್ಟದ ಕೆಲಸವಲ್ಲ. ಆದ್ದರಿಂದ ಕೂಡಲೇ ಸಮಸ್ಯೆ ಬಗೆಹರಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ವನ್ಯಜೀವಿ ಸಂರಕ್ಷಕ ಪ್ರದೀಪ್, ಹಿರಿಯ ನಿವಾಸಿಗಳಾದ ಮಲ್ಲಿಕಾರ್ಜುನ್, ಕೆಇಬಿ ಬಸವರಾಜು, ಜಯಶಂಕರ್ ಸ್ವಾಮಿ, ಮೈಕ್ ಪ್ರಕಾಶ್ ಮೊದಲಾದವರು ಸಹ ಮಾತನಾಡಿ, ಶೀಘ್ರ ಈ ರಸ್ತೆ ದುರಸ್ತಿ ಮಾಡದಿದ್ದರೆ ತೀವ್ರ ಹೋರಾಟ ನಡೆಸುವ ಎಚ್ಚರಿಕೆ ನೀಡಿದರು.

ಶುಭವಿವಾಹ



K.L. ತೇಜಸ್‌ಗೌಡ ಲಿಂಗರಾಜು.ಎನ್. ಮತ್ತು ಲಕ್ಷ್ಮಿ ಯೋಗೇಶ್

ದಿ: 11/02/2026 ರಂದು ನಡೆಯುವ ಇವರ ವಿವಾಹ ಮಹೋತ್ಸವಕ್ಕೆ ಶುಭ ಹಾರೈಸುವವರು

S.L. ರವಿಕುಮಾರ್ ಸ್ನೇಹ ಬಳಗ, ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾಣಿವಿಲಾಸ ವಾಟರ್ ವರ್ಕ್ಸ್, ಮೈಸೂರು ನಗರ ಪಾಲಿಕೆ ಮೈಸೂರು ಮತ್ತು ಆಶಾ & A.J. ನಟರಾಜ್ ರವರು, ವಿಶ್ರಾಂತ ಮುಖ್ಯ ಅಭಿಯಂತರರು ಕರ್ನಾಟಕ ಜಲಮಂಡಳಿ, ಮೈಸೂರು ಮತ್ತು ಕುಂಬಾರಕೊಪ್ಪಲಿನ ಗ್ರಾಮಸ್ಥರು

SITE FOR SALE

* 20x30, 30x40 & 30x50 Dimensions
* Located in Prime Location of Mysore- Nanjangud Road
* MUDA Approved & RERA Registered
* All Amenities Available with Bank Loan Facility
* Clear Documents. For More Details Contact:

9535560606, 9035339634

LOANS HUB

ALL LOANS UNDER ONE ROOF

* Business Loans
* Personal Loans
* Housing Loans
* Mortgage Loans
* Balance Transfer & Top up

TRUSTED SERVICE - NO SERVICE CHARGES

SRI SAI FINANCIAL SERVICES

Railway Gate Road KG Koppal Mysore

Contact: 88844 47314 / 88844 47318

100% TEAK WOOD

FACTORY FINISH DOORS & WINDOWS @ FACTORY DEPOT RATES



10 YEARS WARRANTY

9731591267 9901291267

ಅಡುಗೆಯವರು ಬೇಕಾಗಿದ್ದಾರೆ

ಬೆಂಗಳೂರು ದಾಬಸ್ ಪೇಟೆ ಹಾಗೂ ಹೊಸೂರು (ತಮಿಳುನಾಡು) ಫ್ಯಾಕ್ಟರಿ ಕ್ಯಾಂಟೀನ್ ಒಂದಕ್ಕೆ ಅಡುಗೆಯವರು (ದಕ್ಷಿಣ / ಉತ್ತರ ಭಾರತ ಶೈಲಿ) ಬೇಕಾಗಿದ್ದಾರೆ.

ಕೂಡಲೇ ಸಂಪರ್ಕಿಸಿ: 73535 00688 98454 32266

CHANGE OF NAME

I, Rida Salam, aged 39 years, W/o. Dr. Shandar Salam & D/o. Khaleelur Rahman, residing at 821, S.S.Nagar, Bannimantap, 'B' Layout, Mysore-570015. I declare that my old name was Rida Khaleel, after my marriage with Dr. Shandar Salam, I have changed my name as Rida Salam sworn in front of Notary L.N.Rajendran dated 20.12.2025.

Sd/- Rida Salam

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಹಾಸನ ಜಿಲ್ಲೆ, ಚನ್ನಪಟ್ಟಣ, ದೇವಮ್ಮ ಬಡಾವಣೆ, ದೇವಮ್ಮ ದೇವಸ್ಥಾನ ಮುಖ್ಯ ರಸ್ತೆ, ಶ್ರೀ ಲಕ್ಷ್ಮೀ ಚನ್ನಕೇಶವ ನಿಲಯದಲ್ಲಿ ವಾಸವಾಗಿರುವ ಕೇಶವೇಗೌಡ ರವರ ಧರ್ಮಪತ್ನಿಯಾದ 58 ವರ್ಷ ವಯಸ್ಸಿನ ಶ್ರೀಮತಿ ಹೇಮಲತ.ಸಿ ರವರು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಶ್ರೀರಾಂಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ.204/4ಬಿ ರಲ್ಲಿ ನಿರ್ಮಿಸಿರುವ ನಿವೇಶನ ಸಂಖ್ಯೆ 36 ರ ನಿವೇಶನಕ್ಕೆ ಸಂಬಂಧಿಸಿದಂತೆ ಪಟ್ಟಣ ಪಂಚಾಯಿತಿ ಶ್ರೀರಾಂಪುರ ಪಂಚಾಯಿತಿಯಲ್ಲಿ ಖಾತೆ ಮಾಡಿಸಿದ್ದು ನಮೂನೆ–3 (ನಿಯಮ 20) ಅನ್ನು ಮಾಲೀಕರಾದ ಶ್ರೀ.ಜಿ ಶ್ರೀನಿವಾಸ್ ಬಿನ್ ಲೇಟ್ ಗಿರಿಗೌಡ ರವರಿಗೆ ಖಾತೆ ಮಾಡಿರುತ್ತಾರೆ. ಸದರಿ ಪಂಚಾಯಿತಿ ರವರು ಸ್ವತ್ತಿನ ಸಂಖ್ಯೆ 7110642033, ವಾರ್ಡ್ ಸಂಖ್ಯೆ 15, ನಿರ್ವಹಣಾ ಸಂಖ್ಯೆ 8696/36 ರ ವಿಸ್ತೀರ್ಣ ಪೂರ್ವ–ಪಶ್ಚಿಮ 14.25 x 25.00 ಮೀಟರ್, ಉತ್ತರ–ದಕ್ಷಿಣ 9.00 ಮೀಟರ್ ಒಟ್ಟು 128.25 ಚದರ ಮೀಟರ್‌ಗಳೆಂದು ಖಾತೆ ಮಾಡಿ ನೀಡಿರುತ್ತಾರೆ.

ಈ ಸ್ವತ್ತನ್ನು ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಭಾಗಾಂಶದ ಹಕ್ಕು ಹಾಗೂ ಸಾಲ ಋಣಭಾರಗಳು ಸ್ವತ್ತಿನ ಮೇಲೆ ಇದ್ದಲ್ಲಿ ಹಾಗೂ ಸ್ವತ್ತಿನ ಮೇಲೆ ನ್ಯಾಯಾಲಯದಲ್ಲಿ ದಾವಾ ಇದ್ದಲ್ಲಿ ಹಾಗೂ ಯಾವುದೇ ತಂಟೆ ತಕರಾರು ಇದ್ದಲ್ಲಿ ನಮ್ಮ ಕಕ್ಷಿದಾರರಿಗಾಗಲೀ ಅಥವಾ ನನ್ನ ಕಛೇರಿಗಾಗಲೀ ಖುದ್ದು ಬಂದು ಈ ಪ್ರಕಟಣೆಯಾದ 7 ದಿನಗಳೊಳಗಾಗಿ ಮಾಹಿತಿ ನೀಡುವುದು. ತಪ್ಪಿದಲ್ಲಿ ಸ್ವತ್ತಿನ ಮೇಲೆ ಯಾರಿಗೂ ಹಕ್ಕು ಅಧಿಕಾರ ಇಲ್ಲವೆಂದು ಹಾಗೂ ಯಾವುದೇ ತಂಟೆ ತಕರಾರು ಇಲ್ಲವೆಂದು ಪರಿಗಣಿಸಿ ಸದರಿ ಸ್ವತ್ತನ್ನು ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆದುಕೊಳ್ಳಲು ಕಾನೂನುಬದ್ಧರಾಗಿರುತ್ತಾರೆ.

Sd/- MOHAN RAJU S.P, BA.LLB
Advocate, KAR-213/05
#2824, 1st 'A' Main, 8th Cross, 1st Floor, Jayanagara, Mysore-14
Mob: 9844286155 / 9964714776

PUBLIC NOTICE

Notice is hereby given to the general public that Dr. BZ Gulshad Ahmed & others are intending to purchase the land bearing Sy. No. 36/8, 37/1B3 & 37/1B2, property No. 5480917682 and Record No. 26348295, measuring 1 Acre-1 guntas & 34 guntas totally situated at Madaragalli Village, Varuna Hobli, Mysore Taluk, from Mrs. Fathima Meeran, wife of Mohammed Meeran, who claims to be the absolute owner of the said property.

Any person or persons having any claim, right, title, interest charge, lien, mortgage, lease, inheritance or objection of whatsoever nature in respect of the above said property are hereby required to make the same known in writing with documentary proof to the undersigned within 21 days from the date of publication of this notice, failing which my client will proceed to complete the transaction with the above owner as if there are no third party claims/objections/disputes in respect of the schedule property and thereafter no claims/objections/disputes shall be entertained.

Sd/- RAASHID S.A.
B.com, LL.B., PGDHRM
Advocate & Legal Advisor
M/s. Justice Law Chamber
#98, 1st Floor, 1th Cross, Near Ek-Minar Mosque
MP Main Road, Shanti Nagar, Mysuru-19, Mob: 9741200343,
E-mail: raashidsa4@gmail.com
Place: Mysore, Date: 10-02-2026

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ರಾಮಪ್ಪ ಎ. ರವರ ಮಗ ಶ್ರೀ. ಎ.ಆರ್. ವೇಣುಗೋಪಾಲ್ ರವರು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ ಹಾಗೂ ಷೆಡ್ಯೂಲ್ ಸ್ವತ್ತಿನ ಮೂಲ ದಾಖಲೆಗಳು ಕಳೆದುಹೋಗಿರುತ್ತವೆ. ಅದರಂತೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ

ಷೆಡ್ಯೂಲ್ ಸ್ವತ್ತಿನ ವಿವರ

ಮಂಡ್ಯ ಜಿಲ್ಲೆ, ಶ್ರೀರಂಗ ಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಅರಕೆರೆ ಗ್ರಾಮದಲ್ಲಿ ನಿರ್ಮಿಸಿರುವ ಎಮರಾಲ್ಡ್ ಎನ್‌ಕ್ಲೇವ್ ಖಾಸಗಿ ಬಡಾವಣೆಯಲ್ಲಿರುವ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾದ ಜಮೀನಿನಲ್ಲಿ ವಿಂಗಡಿಸಿರುವ, ಪ್ರಸ್ತುತ ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟ ನಮೂನೆ –11ಬಿ ಹೊಂದಿರುವ ಖಾಲೀ ನಿವೇಶನ/ಪ್ಲಾಟ್‌ಗಳ ಮಾಹಿತಿ ಈ ಕೆಳಗಿನಂತಿದೆ:

ಐಟಂ ನಂ. 01: ಪ್ಲಾಟ್ ಸಂಖ್ಯೆ 161/3/3, ಇ–ಆಸ್ತಿ ಸಂಖ್ಯೆ 152100700600520204, ಅಸೆಸ್‌ಮೆಂಟ್ / ಖಾನೇಶುಮಾರಿ ನಂ. 161/3/3 ರ ಒಟ್ಟು ವಿಸ್ತೀರ್ಣ 1199.70 ಚದರ ಮೀಟರ್ ಉಳ್ಳ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ – ಸರ್ವೆ ನಂ. 116/1 ರ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ. 161/3/4 ಮತ್ತು ದಕ್ಷಿಣಕ್ಕೆ: ಪ್ಲಾಟ್ ನಂ. 161/3/2.

ಐಟಂ ಸಂಖ್ಯೆ 02: ಪ್ಲಾಟ್ ಸಂಖ್ಯೆ 161/3/4, ಇ–ಆಸ್ತಿ ಸಂಖ್ಯೆ 152100700600520205 ಅಸೆಸ್‌ಮೆಂಟ್ / ಖಾನೇಶುಮಾರಿ ನಂ. 161/3/4 ರ ಒಟ್ಟು ವಿಸ್ತೀರ್ಣ 901.83 ಚದರ ಮೀಟರ್‌ಉಳ್ಳ ಈ ಚಕ್ಕುಬಂದಿ ಒಳಗೆ ಲಭ್ಯವಿರುವ ಪೂರ್ತಾ ಜಾಗ, ಪೂರ್ವಕ್ಕೆ: ಸರ್ವೆ ನಂ. 116/1 ರ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ, ಮತ್ತು ದಕ್ಷಿಣಕ್ಕೆ: ಪ್ಲಾಟ್ ನಂ. 161/3/3.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು,
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. : 9844640641
email: sldlawfirm2021@gmail.com

PUBLIC NOTICE

Notice is hereby given to the general public that our clients 1) Smt. J. Yashodamma, aged about 71 years, w/o Late S. Jagannath Setty 2) Mr. B.J. MANU, aged about 41 years, s/o Late S. Jagannath Setty & 3) Mr. B.J. VIKRAM, aged about 39 years, s/o Late S. Jagannath Setty, both are residing at No. 10 (old No.607), 4th Cross road, BSK 1st Stage, 2nd Block, Bangalore-560050 intend to purchase the schedule property from SMT. GEETHA S.P., aged about 58 years, w/o Sri. M.P. Suresh & 2) SRI. M.P. SURESH, aged about 64 years, s/o Sri. Puttaswamy Gowda both are residing at No. 1646, 1st Cross, Anikethana Road, P & T Block, Kuvempunagara, Mysuru – 570 023.

Any person(s) having any claim, right, title, interest, mortgage, charge, encumbrance, lien, lease, tenancy, or any other objection with respect to the schedule property is hereby called upon to make such claims known in writing, along with supporting documents, to the undersigned within Fifteen (15) days from the date of publication of this notice. If no objections are received within the stipulated period, it shall be deemed that there are no claims or encumbrances on the said property, and the transaction shall proceed accordingly.

SCHEDULE PROPERTY

All that piece and parcel of the Residential Converted Land bearing Sy. No. 295/3 (Old Sy. No. 295), Khatha No. 526, measuring 4 Acres 04 Guntas situated at Huyilalu Village, Yelwala Hobli, Mysuru Taluk and Mysuru District and bounded on : East by: Road and Property bearing Survey No. 205/2 belongs to Sri. P.K. Ponnaiah, West by: Property belongs to Sri. Keshavegowda, North by :Remaining Property bearing Survey No. 295/3, South by : Property belongs to K. Hemmanahalli Yelle and Property belongs to Sri. Keshavegowda

Sd/- D. MANJUNATH, Advocate,
MM LAW CHAMBERS,
No. 15/18, 1st Floor, 12th 'A' Cross, 4th Main, Sampangiramanagar,
Bangalore 560027 Mobile: 9448089575
e-mail:advmanjunath71@gmail.com

ನಿಮ್ಮ ತಾರಸಿ ಸೋರುತ್ತಿದೆಯೇ? ಸೋರುತ್ತಿರುವ ತಾರಸಿಯನ್ನು



ದುರಸಿಗೊಳಿಸಲು ಸರಿಯಾದ ಸಮಯ

ತಾರಸಿ, ಬಚ್ಚಲುಮನೆ, ಶೌಚಾಲಯಗಳು, ಬಿರಿಕು ಬಿಟ್ಟ ಚಪ್ಪಡಿಗಳು, ನೀರಿನ ಟ್ಯಾಂಕ್‌ಗಳು, ನೀರಿನ ಸಂಪ್‌ಗಳು, ಈಜು ಕೊಳಗಳು

ಇವುಗಳ ದುರಸ್ಥಿಗಾಗಿ ಸಂಪರ್ಕಿಸಿ :

ಆಶೀರ್ವಾದ್ ವಾಟರ್ ಪ್ರೂಫಿಂಗ್ ಕಂಪೆನಿ 96111 86750

30x40

ಅಳತೆಯ ಕಮರ್ಷಿಯಲ್ ಸೈಟು ಮಾರಾಟಕ್ಕಿದೆ

ಕುವೆಂಪುನಗರ ಪೊಲೀಸ್ ಠಾಣೆ ರಸ್ತೆ, ಪಶ್ಚಿಮ ದಿಕ್ಕು. ಸಂಪರ್ಕಿಸಿ: 8050216683



NOT GETTING YOUR STAR OF MYSORE & ಮೈಸೂರು ಮಿತ್ರ

Call: 98452-96447 99003-82840

WANTED

CAR WASHERS

Ceramic Coating and PPF applicators for CAR DETAILING STUDIO Mysore.

Interested candidates please contact : 79759 11872

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ಪ್ರಸಿದ್ಧ ಆಯುರ್ವೇದ ಕೇಂದ್ರಕ್ಕೆ

ಆಯುರ್ವೇದ ಥೆರಪಿಸ್ಟ್

ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಅನುಭವ ಇರುವವರಿಗೆ ಆದ್ಯತೆ ಒಳ್ಳೆಯ ಸಂಬಳ

ಸಂಪರ್ಕಿಸಿ : 99803 93549

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.

ಸಂಬಳ: 25,000-30,000

ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.

ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ

9187412584 / 9187312582

CRANE FOR SALE

Good condition 1.5 Tons Crane Fixed in an industrial unit in Metagalli is for sale

Contact: 90350 08247

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ

ನೀವು ಗಿರವಿ ಇಟ್ಟು ಬಿಡಿಸಕೊಳ್ಳಲಾಗದ ಚಿನ್ನವನ್ನು, ನಾವೇ ಬಿಡಿಸಿ ಉಳಿದ ಹಣವನ್ನು ಚಿನ್ನದ ಗುಣಮಟ್ಟದ ಆಧಾರದ ಮೇಲೆ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.

ಒಂದು ಗ್ರಾಂ ಚಿನ್ನದ ದರ: 14,800 (24 CT)

9108146123

ಮೈಸೂರು ಮಿತ್ರ 46 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

IMPERIAL CITY

Mega Residential Villa Township

Mysuru - Hunsur Main Road, Mysuru

Just 4 km from Ilavala Satellite Bus Stand

MUDA LIMITS

Just ₹749/ per Sq.ft.

Easy 4 Instalment Facility

BOOKING OPEN

30x40 | 30x50 | 40x60 | 50x80 Sites with all facilities

HYLAND PROPERTIES 88840 71010 90713 86615

Kalidasa Road, Vijayanagara 1st Stage, Mysuru

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ
ಕನನೀಸ ಮತ್ತು ಒಚ ಮಂಡಳಿ, ನಗರ ವಿಭಾಗ (ಜೆ.ಎನ್.ನರ್ಮ್)
ಜಲಭವನ, 2ನೇ ಮಹಡಿ, ಪಿ–4,10ನೇ ಮುಖ್ಯ ರಸ್ತೆ,
3ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು–570009,
ಫೋ: 9480813129, ಇ–ಮೇಲ್:kwbmysjnee@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೈಸೂರು ನಗರದ ಶ್ರೀರಾಂಪುರ, ರಮ್ಮನಹಳ್ಳಿ, ಕಡಕೊಳ ಮತ್ತು ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಎಸ್.ಬಿ.ಎಂ. ಯೋಜನೆಯಡಿ ಎಸ್.ಟಿ.ಪಿ. ನಿರ್ಮಿಸಲು ವಿಸ್ತøತ ಯೋಜನಾ ವರದಿಯ ಪ್ರಕಟಣೆ ಸಂಖ್ಯೆ:2495/2025–26, ದಿನಾಂಕ:07.02.2026 ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಮಾಹಿತಿಯನ್ನು ಈ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರು,

Orchid ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್

ನಿಮ್ಮ ಪ್ರವಾಸ ಪಯಣದೊಂದಿಗೆ

ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.

ರಿಯಾಯಿತಿ ದರದಲ್ಲಿ ಪ್ರವಾಸಗಳು–2026

ಎಲ್ಲಾ ಪ್ರವಾಸಗಳು ಮೈಸೂರಿನಿಂದ ಮೈಸೂರಿನವರೆಗೆ

99000 99252 / 9880079588

ಗ್ರಾಂಡ್ ಯು.ಕೆ. ಮತ್ತು ಯುರೋಪ್

18 ದಿನಗಳು – 10 ದೇಶಗಳು

6 ದಿನಗಳ ಬಾಲಿ	7/11 ದಿನಗಳ ಸಿಂಗಾಪುರ–ಮಲೇಷಿಯಾ–ಥೈಲ್ಯಾಂಡ್
11 ದಿನಗಳ ವಿಯೆಟ್ನಾಮ್–ಕಾಂಬೋಡಿಯಾ	6 ದಿನಗಳ ದುಬೈ–ಅಬುಧಾಬಿ–ಶಾರ್ಜಾ
8 ದಿನಗಳ ಭೂತಾನ್ ಸ್ಪೆಷಲ್	9 ದಿನಗಳ ಕಾಶಿ–ಪ್ರಯಾಗ್‌ರಾಜ್–ಅಯೋಧ್ಯ

STAR OF MYSORE

SPECIAL ISSUE

Star of Mysore is completing 48 years of service on 16th February (Monday) 2026 and entering 49th year of publication. As in the past, this year too we will be publishing a Special Issue.

NOTE: As 15th February (Sunday) is a Government Holiday on the occasion of Mahashivarathri, Star of Mysore Offices will remain closed on that day. Hence, we request our advertisers & patrons to release their advertisements for the Special Issue before 12th February to facilitate printing as per schedule.

HEAD OFFICE

0821-2496520 (5-LINES) Ad Dept. - 0821-2496522 / 23
Email : ad@starofmysore.com
Maria G. Fernandes - Advt. Manager: 94485-25060/80730-30835
Joy Anthony Dove - Sr. Executive-Ad Sales - 89516-68960
Prema - Sr. Executive Advertising - 98805-49879

* K.R. Circle Office : 0821-2431774 • D.D. Urs Road Office : 0821-2428695
* Kodagu Office : 97314-69871 • Mandya Office : 87629-60325
* Chamarajanagar : 92422-65657 • T.N. Pura : 94483-05750
* Nanjangud : 98805-09200 • Bengaluru : 98440-46761



JOCKEY FACTORY SECONDS UPTO 50% OFF*

10 am to 8 pm • Open All Days • Master / Visa Card Accepted

ONLY LEISUREWEAR, ACTIVEWEAR, KIDSWEAR, THERMALS & SOCKS

Venue In Mysore

JLB Road — The Institution Of Engineers, Jhansi Lakshmibai Road - 5

ಸೈಟುಗಳು ಮಾರಾಟಕ್ಕಿದೆ

ಬನ್ನೂರು ರಸ್ತೆ, ಸಮೀಪವಿರುವ ಡೆಲ್ಲಿ ಪಬ್ಲಿಕ್ ಸ್ಕೂಲ್ ಹಾಗೂ ಜ್ಞಾನ ಸರೋವರ ಇಂಟರ್ನ್ಯಾಷನಲ್ ಸ್ಕೂಲ್ ಸಮೀಪ ಅಭಿವೃದ್ಧಿ ಪಡಿಸಿದ ಪದಕಿ ಲೇಔಟ್ ನಲ್ಲಿ 60x40 ಮುಡಾ ಅನುಮೋದಿತ ಸೈಟ್ ಗಳು ಮಾರಾಟಕ್ಕಿದೆ.

ಸಂಪರ್ಕಿಸಿ ಅಸ್ಗರ್ : 9731749500

MAHATHMA GANDHI B.ED COLLEGE

Sathagalli, Mysuru

Academic Year: 2025-2026

ADMISSION FOR B.Ed (Last Few Seats Left)

Contact No: 0821-2420374 93438 28203

Office: Mahathma Gandhi Trust, #27, Sri Lalitha, Sonar Street, Chamaraja Mohalla, Mysore
Email : mahatmagandhitrust@gmail.com

PLOTS FOR SALE – PRIME LOCATION

Premium residential plots near Mysore Airport

Discover thoughtfully planned residential plots in a rapidly developing location, perfect for both investment and immediate construction.

Project Highlights:

* Just 500 meters from the Toll Plaza
* Excellent connectivity to Mysuru Airport and key city routes
* Located in a fast-growing, well-connected neighborhood
* Ideal for building your dream home or securing a high-growth investment

Plot Dimensions Available: 30 × 40 | 40 × 60 | 50 × 80

Additional Features: • Wide internal roads • Peaceful and green surroundings • Close to upcoming infrastructure and development projects

Limited plots available – don't miss this opportunity!

Book Now.

Call: Anusha - 63663 84517

REPCO BANK

Govt. of India Enterprise

(ಭಾರತ ಸರ್ಕಾರದ ಉದ್ಯಮ)
1022, 1ನೇ ಮಹಡಿ, ಜಿ & ಹೆಚ್ ಬ್ಲಾಕ್, ಪಂಚಮಂತ್ರ ರಸ್ತೆ, ಕುವೆಂಪುನಗರ, ಮೈಸೂರು–570023

ವಿಶೇಷ ಠೇವಣಿ ಮೇಲೆ ಆಕರ್ಷಕ ಬಡ್ಡಿದರ

1 ವರ್ಷ – 2 ವರ್ಷಗಳ ಅವಧಿಗೆ

8.00%* p.a (ಹಿರಿಯ ನಾಗರೀಕರಿಗೆ) | 7.50%* p.a (ಸಾಮಾನ್ಯರಿಗೆ)

ಎ ಖಾತಾ ಸ್ಥಿರಾಸ್ತಿಗಳ ಮೇಲೆ ಆಕರ್ಷಕ ಬಡ್ಡಿದರದಲ್ಲಿ ಗೃಹಸಾಲ ಹಾಗೂ ಅಡಮಾನ ಸಾಲ ರೂ.3 ಕೋಟಿವರೆಗೆ ದೊರೆಯುತ್ತದೆ

ಚಿನ್ನಾಭರಣಗಳ ಮೇಲೆ ಸಾಲ ಪ್ರತಿಗ್ರಾಂಗೆ ರೂ.9,600/– ಮಾಸಿಕ 94 ಪೈಸೆ ಬಡ್ಡಿ ದರದಲ್ಲಿ ಸಾಲ ದೊರೆಯುತ್ತದೆ.

*ಷರತ್ತುಗಳು ಅನ್ವಯಿಸುತ್ತವೆ. ಸದಸ್ಯ ಗ್ರಾಹಕರಿಗೆ ಮಾತ್ರ

PH : 0821 - 2562211 | Mob : 9449856210